ಸೋಮವಾರ, ಜುಲೈ 31, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಷೋ
ನವದೆಹಲಿಯಲ್ಲಿ ಭಾನುವಾರ ನಡೆದ ಫ್ಯಾಷನ್ ಷೋನಲ್ಲಿ ಪಾಲ್ಗೊಂಡಿದ್ದ ನಟಿ ಅನನ್ಯಾ ಪಾಂಡೆ

॥ ಶ್ರೀ ಮಹಾಲಕ್ಷ್ಮೀ ಪ್ರೀತ್ಯರ್ಥಂ ॥

ಅಖಿಲ ಭಾರತ ಸಂಪೂರ್ಣ ಮಹಾ ಕುಬೇರ ಯಾಗ

ಲೋಕ ಕಲ್ಯಾಣಾರ್ಥವಾಗಿ 700 ವರ್ಷಗಳ ನಂತರ

2023 ಸೆಪ್ಟೆಂಬರ್ 11 ರಿಂದ 21ರ ವರೆಗೆ

ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಂಗಳೂರು

ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳ ದಾರ್ಶನಿಕರು, ಸ್ವಾಮೀಜಿಗಳು, ಧಾರ್ಮಿಕ ಮುಖಂಡರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಮಹಾಯಾಗದಲ್ಲಿ ಪಾಲ್ಗೊಳ್ಳಿ.. ಧನ್ಯರಾಗಿ..

RAJ NEWS ಕನ್ನಡ | Raj musix ಕನ್ನಡ

"ವಿಶ್ವ ಶಾಂತಿ, ಸಾರ್ವಜನಿಕರ ಆರೋಗ್ಯ ಸಮೃದ್ಧಿ, ದೇಶದ ಅರ್ಥ ವ್ಯವಸ್ಥೆಯ ಏಳಿಗೆಗಾಗಿ ನಡೆಯುವ ಕುಬೇರಯಾಗ.

ಬನ್ನಿ ಭಾಗಿಯಾಗಿ, ನವನಿಧಿ ಸಂಪತ್ತಿನ ಒಡೆಯ ಕುಬೇರನ ಧನ್ಯತೆ ಪಡೆದು ಪಾವನರಾಗಿ..

ಆಯೋಜಕರು **ಶಿವಶ್ರೀ ಮೀಡಿಯಾ ಪ್ರೈ. ಲಿ.**

ಅಖಿಲ ಭಾರತ ಸಂಪೂರ್ಣ ಮಹಾ ಕುಬೇರ ಯಾಗ ಸಮಿತಿ

ಮಹಾಯಾಗದಲ್ಲಿ ಪಾಲ್ಗೊಳ್ಳಲು ಮುಂಗಡ ನೋಂದಣಿಗೆ ಸಂಪರ್ಕಿಸಿ

9480390450 / 8951546098 / 9990075539 / 8951262424 / 9844744965 / 9606036988

SCAN HERE

ಡಾ॥ ಡಿ. ಎಸ್. ಶಿವರುದ್ರಪ್ಪ
ವ್ಯವಸ್ಥಾಪಕ ನಿರ್ದೇಶಕರು, ಶಿವಶ್ರೀ ಮೀಡಿಯಾ ಪ್ರೈ. ಲಿ.
ಅಧ್ಯಕ್ಷರು, ಮಹಾ ಕುಬೇರಯಾಗ ಸಮಿತಿ

ಶ್ರೀನಿವಾಸ ಹಳಕಟ್ಟಿ
ಕಾರ್ಯನಿರ್ವಾಹಕ ನಿರ್ದೇಶಕರು, ಶಿವಶ್ರೀ ಮೀಡಿಯಾ ಪ್ರೈ. ಲಿ.
ಕಾರ್ಯಾಧ್ಯಕ್ಷರು, ಮಹಾ ಕುಬೇರಯಾಗ ಸಮಿತಿ

ಎಸ್. ಅರವಿಂದ್
ಸಿಇಓ, ಶಿವಶ್ರೀ ಮೀಡಿಯಾ ಪ್ರೈ. ಲಿ.
ಉಪಾಧ್ಯಕ್ಷರು, ಮಹಾ ಕುಬೇರಯಾಗ ಸಮಿತಿ

ಸಿ. ಕೆ. ಸುರೇಶ್
ಬ್ಯುಸಿನೆಸ್ ಹೆಡ್, ಶಿವಶ್ರೀ ಮೀಡಿಯಾ ಪ್ರೈ. ಲಿ.
ಪ್ರಧಾನ ಕಾರ್ಯದರ್ಶಿ, ಮಹಾ ಕುಬೇರಯಾಗ ಸಮಿತಿ

ಸುರೇಶ್ ಶಾಸ್ತ್ರಿ
ಸಿಓಓ, ಶಿವಶ್ರೀ ಮೀಡಿಯಾ ಪ್ರೈ. ಲಿ.
ಉಪಾಧ್ಯಕ್ಷರು, ಮಹಾ ಕುಬೇರಯಾಗ ಸಮಿತಿ

ಹರಿಪ್ರಸಾದ್
ಎಫ್.ಸಿ., ಶಿವಶ್ರೀ ಮೀಡಿಯಾ ಪ್ರೈ. ಲಿ.
ಉಪಾಧ್ಯಕ್ಷರು, ಮಹಾ ಕುಬೇರಯಾಗ ಸಮಿತಿ

ಮುನಿರಾಜು ಎಂ.
ಕ್ರಿಯೇಟಿವ್ ಹೆಡ್, ಶಿವಶ್ರೀ ಮೀಡಿಯಾ ಪ್ರೈ. ಲಿ.
ಉಪಾಧ್ಯಕ್ಷರು, ಮಹಾ ಕುಬೇರಯಾಗ ಸಮಿತಿ

ಶಿವಕುಮಾರ್(ಮಾಗಡಿ)
ಉಪಾಧ್ಯಕ್ಷರು,
ಮಹಾ ಕುಬೇರಯಾಗ ಸಮಿತಿ

www.pureprayer.com

www.sampoornamahakuberayaaga.com

ಬಸ್ ತಂಗುದಾಣ, ಸ್ಕೈವಾಕ್‌ನಲ್ಲಿ ಪ್ರದರ್ಶನ; 2016ರಿಂದ ವಸೂಲಾಗದ ಬಾಡಿಗೆ, ಶುಲ್ಕ

ಜಾಹೀರಾತು: ₹100 ಕೋಟಿಗೂ ಹೆಚ್ಚು ಬಾಕಿ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬಸ್ ತಂಗುದಾಣ, ಸ್ಕೈವಾಕ್‌ನಲ್ಲಿ ಜಾಹೀರಾತು ಪ್ರದರ್ಶನದ ನೆಲಬಾಡಿಗೆ, ಸೇವಾ ತೆರಿಗೆಗಳು ಸೇರಿದಂತೆ ₹100 ಕೋಟಿಗೂ ಅಧಿಕ ಬಾಕಿ ಇದೆ. ಡಿಮ್ಯಾಂಡ್ ನೋಟಿಸ್ ನೀಡಿದ್ದರೂ ಅಧಿಕಾರಿಗಳು ಅದನ್ನು ವಸೂಲಿ ಮಾಡಿಲ್ಲ. ಅವಧಿ ಮೀರಿದ ಜಾಹೀರಾತುಗಳನ್ನೂ ತೆರವು ಮಾಡಿಲ್ಲ.

ನಗರದಲ್ಲಿರುವ ನೂರಾರು ತಂಗುದಾಣ, ಸ್ಕೈವಾಕ್‌ಗಳ ಜಾಹೀರಾತಿಗೆ ಸಂಬಂಧಿಸಿದ ಶುಲ್ಕ 2016ರಿಂದ ಬಾಕಿ ಉಳಿದಿದೆ. 2022ರ ಡಿ.5ರಂದು ಒಂದೇ ದಿನ ಒಟ್ಟು ₹50.27 ಕೋಟಿ ಮೊತ್ತದ ಡಿಮ್ಯಾಂಡ್ ನೋಟಿಸ್‌ಗಳನ್ನು ಜಾಹೀರಾತು ವಿಭಾಗದ ಸಹಾಯಕ ಆಯುಕ್ತರು ಹಲವು ಏಜೆನ್ಸಿಗಳಿಗೆ ಜಾರಿ ಮಾಡಿದ್ದಾರೆ. ಜೂನ್‌ವರೆಗೂ ಇಂತಹ ನೋಟಿಸ್‌ಗಳು ಜಾರಿಯಾಗುತ್ತಲೇ ಇದ್ದರೂ ಬಾಕಿ ಪಾವತಿಯಾಗಿಲ್ಲ.

ನಗರದ ವಿವಿಧ ಸ್ಥಳಗಳಲ್ಲಿ ಜಾಹೀರಾತು ಹಕ್ಕುಗಳನ್ನು ನೀಡಿ ನಿರ್ಮಾಣ, ಕಾರ್ಯಾಚರಣೆ, ವರ್ಗಾವಣೆ (ಬಿಒಟಿ) ಆಧಾರದಲ್ಲಿ ಬಸ್ ತಂಗುದಾಣ ನಿರ್ಮಿಸಲು ಹಲವು ಏಜೆನ್ಸಿಗಳಿಗೆ ಅನುಮತಿ ನೀಡಲಾಗಿದೆ. 2016ರಿಂದ ಹಲವು ತಂಗುದಾಣಗಳು ನಿರ್ಮಾಣವಾಗಿ, ಜಾಹೀರಾತನ್ನು ಪ್ರದರ್ಶಿಸ ಲಾಗುತ್ತಿದೆ. 2020ರ ಜ.14ರ ಬಿಬಿಎಂಪಿ ಹೊರಾಂಗಣ ಜಾಹೀರಾತು ಫಲಕ ಉಪವಿಧಿಗಳ ಪ್ರಕಾರ, ಸಾರ್ವಜನಿಕ ಖಾಸಗಿ ಪಾಲುದಾರಿಕೆ (ಪಿಪಿಪಿ) ಮಾದರಿಯ ನಿರ್ಮಾಣಗಳ ಮೇಲೆ ಜಿಎಸ್‌ಟಿ ತಗಾದೆಯನ್ನು ಹೊರಗುಳಿಸಿ, ದರ ನಿಗದಿ ಮಾಡಲಾಗಿದೆ.

ಪ್ರಮುಖ ರಸ್ತೆಗಳ ಬಸ್ ತಂಗುದಾಣಗಳಲ್ಲಿ ಪ್ರತಿ ಚದರ ಮೀಟರ್‌ಗೆ ₹780 ಹಾಗೂ ಇತರೆ ಸ್ಥಳಗಳ ತಂಗುದಾಣಗಳಿಗೆ ಒಂದು ಚದರ ಮೀಟರ್‌ಗೆ ₹600 ಜಾಹೀರಾತು ಶುಲ್ಕ ವಿಧಿಸಲಾಗಿದೆ. ಸ್ಕೈವಾಕ್‌ಗಳ ಮೇಲಿನ ಜಾಹೀರಾತು ಪ್ರದರ್ಶನಗಳ ಮೇಲೂ ಇದೇ ರೀತಿಯ ಶುಲ್ಕವಿದೆ. ಇದರಂತೆ ಲೆಕ್ಕಾಚಾರ ಮಾಡಿ, ಪ್ರತಿಯೊಂದು ಏಜೆನ್ಸಿಗೆ 15 ದಿನಗಳಲ್ಲಿ ಡಿ.ಡಿ. ಮೂಲಕ ಪಾವತಿಸಲು ಡಿಮ್ಯಾಂಡ್ ನೋಟಿಸ್ ಜಾರಿ ಮಾಡಲಾಗಿದೆ. ಈ ಪ್ರಕ್ರಿಯೆ ಮುಗಿದು ಏಳು ತಿಂಗಳು ಕಳೆದಿದ್ದರೂ ಯಾವುದೇ ಕ್ರಮ ವಾಗಿಲ್ಲ. ಹಲವು ಏಜೆನ್ಸಿಗಳ ಒಪ್ಪಂದದ ಅವಧಿ ಮೀರಿದ್ದರೂ ಜಾಹೀರಾತುಗಳನ್ನು ಪ್ರದರ್ಶಿಸ ಲಾಗುತ್ತಿದೆ.

ಪ್ರಜಾವಾಣಿ ವಿಶೇಷ

ಹತ್ತಾರು ಕಂಪನಿಗಳಿಗೆ ಡಿಮ್ಯಾಂಡ್ ನೋಟಿಸ್ ನೀಡಿರುವ ವಿವರಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಎಸ್. ಅಮರೇಶ್ ಅವರು ಪಡೆದು ಕೊಂಡಿದ್ದಾರೆ. ಈ ದಾಖಲೆಗಳ ಪ್ರಕಾರ, 15 ದಿನಗಳಲ್ಲಿ ಬಾಕಿ ಪಾವತಿಸಬೇಕು. ಇಲ್ಲದಿದ್ದರೆ ಕೆಎಂಸಿ ಕಾಯ್ದೆ ಪ್ರಕಾರ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸೂಚಿಸಲಾಗಿದೆ.

'ತಂಗುದಾಣಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕೆಂಬ ಷರತ್ತೂ ಇದೆ. ಆದರೆ, ಏಜೆನ್ಸಿಗಳು ಅದನ್ನೂ ಪಾಲಿಸುತ್ತಿಲ್ಲ' ಎಂದು ಅಮರೇಶ್ ದೂರಿದರು.

'ತೆರವಿಗೆ ಹಿರಿಯ ಅಧಿಕಾರಿಗಳ ಅನುಮತಿ ಅಗತ್ಯ'

'ತಂಗುದಾಣ, ಮೇಲುಸೇತುವೆ ಜಾಹೀರಾತಿನ ನೆಲಬಾಡಿಗೆ, ಸೇವಾ ಶುಲ್ಕ ಬಾಕಿ ವಸೂಲಿಗೆ ಡಿಸೆಂಬರ್‌ನಿಂದ ಇಲ್ಲಿಯವರೆಗೂ ಡಿಮ್ಯಾಂಡ್ ನೋಟಿಸ್ ನೀಡಲಾಗುತ್ತಿದೆ. ಕೆಲವರು ಪಾವತಿಸಿದ್ದಾರೆ. ಉಳಿದವರ ಮೇಲೆ ಕ್ರಮಕ್ಕೆ ಹಿರಿಯ ಅಧಿಕಾರಿಗಳಿಗೆ ಬರೆಯಲಾಗಿದೆ. ಕೆಲವು ಟೆಂಡರ್ ಅವಧಿ ಮುಗಿದಿದ್ದು ಅವುಗಳನ್ನು ತೆರವು ಮಾಡಬೇಕಿದೆ. ಹಿರಿಯ ಅಧಿಕಾರಿಗಳು ಅನುಮತಿ ನೀಡಿದ ಮೇಲೆ ತೆರವು ಕಾರ್ಯ ಮಾಡಬೇಕಿದೆ. ಹಿಂದೆ ಇದ್ದವರು ಬಾಕಿ ವಸೂಲಿ ಮಾಡಿಲ್ಲ. ಇದೀಗ ನಾನು ಬಂದಮೇಲೆ ಕ್ರಮ ಕೈಗೊಂಡಿದ್ದೇನೆ' ಎಂದು ಬಿಬಿಎಂಪಿ ಜಾಹೀರಾತು ವಿಭಾಗದ ಸಹಾಯಕ ಆಯುಕ್ತ ಶ್ರೀಧರ್ ರೆಡ್ಡಿ ತಿಳಿಸಿದರು. ಜಾಹೀರಾತು ವಿಭಾಗದ ವಿಶೇಷ ಆಯುಕ್ತ ದೀಪಕ್ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

'ಟೆಂಡರ್ ಕರೆಯದೆ ಅಕ್ರಮ'

'ಬಸ್ ತಂಗುದಾಣಗಳನ್ನು ನಿರ್ಮಿಸಿ, ಜಾಹೀರಾತು ಪ್ರದರ್ಶಿಸಲು ಏಜೆನ್ಸಿಗಳಿಗೆ ನೀಡಲಾಗಿದೆ. ಅವರು ನೆಲಬಾಡಿಗೆ ಹಾಗೂ ಜಾಹೀರಾತು ಶುಲ್ಕ ನೀಡಬೇಕು. ಆದರೆ, 2015ರಿಂದ ಹಲವು ಏಜೆನ್ಸಿಗಳಿಂದ ಬಾಕಿ ವಸೂಲಿ ಮಾಡಿಲ್ಲ. ಹಲವು ಏಜೆನ್ಸಿಗಳ ಟೆಂಡರ್ ಅವಧಿ 2018ರಿಂದಲೇ ಮುಗಿದಿದೆ. ಆದರೆ ಈವರೆಗೆ ಅವುಗಳಿಂದ ಬಾಕಿ ವಸೂಲಿ ಮಾಡಿಲ್ಲ, ಜಾಹೀರಾತನ್ನು ತೆರವೂ ಮಾಡಿಲ್ಲ. ಅಧಿಕಾರಿಗಳ ಈ ವರ್ತನೆಯಿಂದ ಬಿಬಿಎಂಪಿಗೆ ನೂರಾರು ಕೋಟಿ ಆರ್ಥಿಕ ನಷ್ಟ ಉಂಟಾಗಿದೆ. ಬಿಬಿಎಂಪಿ ಮುಖ್ಯ ಆಯುಕ್ತ, ಉಪ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದರೂ ಕ್ರಮವಾಗಿಲ್ಲ' ಎಂದು ಮಾಹಿತಿ ಹಕ್ಕು ಕಾಯ್ದೆಯಡಿ ವಿವರಗಳನ್ನು ಪಡೆದಿರುವ ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಎಸ್. ಅಮರೇಶ್ ಹೇಳಿದರು.

ಕುಮಾರ ಕೃಪಾ ಸಮೀಪದ ಬಸ್ ತಂಗುದಾಣವನ್ನು ಸ್ವಚ್ಛಗೊಳಿಸುತ್ತಿರುವ ಸಿಬ್ಬಂದಿ ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

₹ 57.27 ಕೋಟಿ (2022ರ ಡಿ.5ರಂದು ಒಂದೇ ದಿನ ಜಾರಿಗೊಳಿಸಿರುವ ಡಿಮ್ಯಾಂಡ್ ನೋಟಿಸ್‌ಗಳ ಮೊತ್ತ)



₹31.67 ಕೋಟಿ ತಂಗುದಾಣ

ಏಜೆನ್ಸಿ	ಸಂಖ್ಯೆ	ಬಾಕಿ
ಟೈಮ್ಸ್ ಇನ್ನೋವೇಟಿವ್ ಮೀಡಿಯಾ	215	₹15.05 ಕೋಟಿ
ಸೈನ್ ಪೋಸ್ಟ್ ಇಂಡಿಯಾ	139	₹10.32 ಕೋಟಿ
ಡಿಜಿಟಲ್ ಆ್ಯಡ್ ಸೈನ್ಸ್	58	₹4.84 ಕೋಟಿ
ಓಒಎಚ್ ಅಡ್ವರ್‌ಟೈಸ್‌ಮೆಂಟ್	16	₹1.44 ಕೋಟಿ

₹25.69 ಕೋಟಿ ಸ್ಕೈವಾಕ್

ಏಜೆನ್ಸಿ	ಸಂಖ್ಯೆ	ಬಾಕಿ
ವಾಂಟೇಜ್ ಅಡ್ವರ್‌ಟೈಸಿಂಗ್	25	₹6.26 ಕೋಟಿ
ಪ್ರಕಾಶ್ ಆರ್ಟ್ಸ್	34	₹5.67 ಕೋಟಿ
ಸಹಯೋಗ– ಇಂಡಿಯಾ ಕೌನ್ಸಿಲ್	7	₹4.76 ಕೋಟಿ
ಪಯನೀರ್ ಪಬ್ಲಿಸಿಟಿ ಕಾರ್ಪೊರೇಷನ್	28	₹3.99 ಕೋಟಿ
ಸೈನ್ ಪೋಸ್ಟ್ ಇಂಡಿಯಾ	14	₹1.90 ಕೋಟಿ
ಸ್ಕೈಲೈನ್ ಅಡ್ವರ್‌ಟೈಸಿಂಗ್	3	₹92.17 ಲಕ್ಷ
ಆ್ಯಡ್ ಏಜ್ ಔಟ್‌ಡೋರ್	2	₹34.08 ಲಕ್ಷ
ಡಿಸೈನ್ 55 ಅಡ್ವರ್‌ಟೈಸ್‌ಮೆಂಟ್	4	₹27.87 ಲಕ್ಷ
ಜೈವಿನ್ ಔಟ್ ಡೋರ್ ಮೀಡಿಯಾ	2	₹25.69 ಲಕ್ಷ
ಅಕಾರ್ಡ್ ಡಿಸ್‌ಪ್ಲೆ ಸರ್ವೀಸ್	7	₹18.44 ಲಕ್ಷ

ಸುದ್ದಿ 2 ನಿಮಿಷ

'ಐಐಎಂ ಸ್ವಾಯತ್ತೆ ಕಸಿವ ಯತ್ನ'

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿರುವ ಐಐಎಂ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್) ತಿದ್ದುಪಡಿ ಮಸೂದೆಯ ಹಿಂದೆ ದೇಶದ ಪ್ರತಿಷ್ಠಿತ 'ಬಿ–ಸ್ಕೂಲ್'ಗಳ ಸ್ವಾಯತ್ತೆಯನ್ನು ದುರ್ಬಲಗೊಳಿಸುವ ಹುನ್ನಾರ ಅಡಗಿದೆ ಎಂಬ ಆರೋಪ ಕೇಳಿಬಂದಿದೆ.

ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ನಡೆಸಿದ ಗದ್ದಲದ ನಡುವೆಯೇ ಕೇಂದ್ರವು, ಕಳೆದ ಶುಕ್ರವಾರ ಈ ಮಸೂದೆ ಮಂಡಿಸಿದೆ.

ಮಸೂದೆ ಅನ್ವಯ ಐಐಎಂಗಳಿಗೆ ರಾಷ್ಟ್ರಪತಿ ಅವರು 'ಸಂದರ್ಶಕ ಮುಖ್ಯಸ್ಥ' (ವಿಸಿಟರ್) ಆಗಲಿದ್ದಾರೆ. ಸಂಸ್ಥೆಗಳ ಕಾರ್ಯ ನಿರ್ವಹಣೆ, ತನಿಖೆ, ನಿರ್ದೇಶಕರ ನೇಮಕ ಮತ್ತು ಹುದ್ದೆಯಿಂದ ಅವರನ್ನು ವಜಾಗೊಳಿಸುವ ಸಂಪೂರ್ಣ ಅಧಿಕಾರವು ರಾಷ್ಟ್ರಪತಿ ಅವರಿಗೆ ಇರಲಿದೆ.

ಕೇಂದ್ರದ ಈ ನಡೆಯನ್ನು ಟೀಕಿಸಿರುವ ಕಾಂಗ್ರೆಸ್, 'ಐಐಎಂ ಕಾಯ್ದೆ 2017ರ ತಿದ್ದುಪಡಿ ಮೂಲಕ ಸಂಸ್ಥೆಗಳ ಮೇಲೆ ಬಿಗಿ ಹಿಡಿತ ಸಾಧಿಸಲು ಪ್ರಧಾನಿ ಕಚೇರಿಯು ಹವಣಿಸುತ್ತಿದೆ. ಜೊತೆಗೆ, ಬಿಜೆಪಿಯ ಸೈದ್ಧಾಂತಿಕ ನಿಲುವು ಹೇರುವ ಷಡ್ಯಂತ್ರ ಅಡಗಿದೆ. 'ಬಿ–ಸ್ಕೂಲ್'ಗಳಿಗೆ ಹೊಣೆಗಾರಿಕೆ ನಿಗದಿಗೊಳಿಸಿ, ಸ್ವಾಯತ್ತ ಅಧಿಕಾರವನ್ನು ಮೊಟಕುಗೊಳಿಸುವ ದುರುದ್ದೇಶ ಹೊಂದಲಾಗಿದೆ ಎಂದಿದೆ.

ಮುಜರಾಯಿ ದೇವಸ್ಥಾನಗಳಿಗೆ ಖಾಸಗಿ ಟ್ರಸ್ಟ್ ಬೇಡ: ಒತ್ತಾಯ

ಬೆಂಗಳೂರು: ಮುಜರಾಯಿ ದೇವಸ್ಥಾನಗಳಿಗೆ ಖಾಸಗಿ ಟ್ರಸ್ಟ್ ಮಾಡುವ ಹಿಂದಿನ ಸರ್ಕಾರದ ನಿರ್ಧಾರವನ್ನು ಕೈಬಿಡಬೇಕು. ದೇವಸ್ಥಾನಗಳನ್ನು ಸರ್ಕಾರದ ನಿಯಂತ್ರಣದಲ್ಲಿರಿಸಿಕೊಳ್ಳಬೇಕು ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕ–ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ.

ದೇವಸ್ಥಾನಗಳಲ್ಲಿರುವ ಅರ್ಚಕರಿಗೆ 60 ವರ್ಷವಾದಾಗ ನಿವೃತ್ತಿಗೊಳಿಸಬೇಕು ಎಂದು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರಲ್ಲಿ ಇದೆ. ಇದರ ವಿರುದ್ಧ ಒಕ್ಕೂಟವು ಸುಪ್ರೀಂಕೋರ್ಟ್‌ನಿಂದ ತಡೆಯಾಜ್ಞೆ ಪಡೆದಿದೆ. ಹಾಗಾಗಿ 60 ವರ್ಷ ದಾಟಿದರೂ ಅರ್ಚಕರು ಸೇವೆ ಮುಂದುವರಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಬೇಕು ಎಂದು ಒಕ್ಕೂಟದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಗ್ರಾಮಾಂತರ ಪ್ರದೇಶದಲ್ಲಿರುವ ಸುಮಾರು 35 ಸಾವಿರ ದೇಗುಲಗಳಿಗೆ ಪೂಜೆ ಸಾಮಗ್ರಿಗಳಿಗಾಗಿ ₹ 5,000 ನೀಡಲಾಗುತ್ತಿದೆ. ಇದು ಸಾಕಾಗುತ್ತಿಲ್ಲ. ₹ 10,000 ನೀಡಬೇಕು ಎಂದು ಒಕ್ಕೂಟದ ಮುಖ್ಯ ಕಾರ್ಯದರ್ಶಿ ಕೆ. ಎಸ್.ಎನ್.ದೀಕ್ಷಿತ್ ಮತ್ತು ಪದಾಧಿಕಾರಿಗಳು ಮನವಿಯಲ್ಲಿ ಆಗ್ರಹಿಸಿದ್ದಾರೆ.

ಉತ್ತಮ ಶಿಕ್ಷಣ, ಆರೋಗ್ಯ ಸೌಲಭ್ಯ ಕೊರತೆ: ಮೋಹನ್ ಭಾಗವತ್

ಠಾಣೆ (ಪಿಟಿಐ): ಸಹಾನುಭೂತಿಯಿಂದ ಸಮಾಜಕ್ಕೆ ಕರ್ತವ್ಯ ನಿರ್ವಹಿಸುವುದು ನಿಜವಾದ ಸೇವೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘ ಚಾಲಕ ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ.



ಭಾಗವತ್

ಧರ್ಮವೀರ್ ಆನಂದ್ ದಿಘೆ ಕ್ಯಾನ್ಸರ್ ಆಸ್ಪತ್ರೆ ಮತ್ತು ದೇವಾಲಯ ಸಂಕೀರ್ಣಕ್ಕೆ ಶಂಕು ಸ್ಥಾಪನೆ ನೆರವೇರಿಸಿದ ನಂತರ ಮಾತನಾಡಿದ ಭಾಗವತ್, 'ರೋಟಿ ಕಪ್‌ಡಾ ಔರ್ ಮಕಾನ್' (ಆಹಾರ, ಬಟ್ಟೆ, ಆಶ್ರಯ) ನಂತೆ ಶಿಕ್ಷಣ, ಆರೋಗ್ಯವು ಮುಖ್ಯವಾಗಿದೆ. ಆದರೆ, ಸೌಲಭ್ಯಗಳು ಅಸಮರ್ಪಕವಾಗಿವೆ. ಕೈಗೆಟುಕುವ ಆರೋಗ್ಯ ಮೂಲಸೌಕರ್ಯ ಅಗತ್ಯವಾಗಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ಉತ್ತಮ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯದ ಕೊರತೆಯಿದೆ. ಈ ಸೌಲಭ್ಯಗಳು ಸುಲಭವಾಗಿ ತಲುಪಬೇಕು. ಪ್ರಸ್ತುತ ದಿನಗಳಲ್ಲಿ ಕ್ಯಾನ್ಸರ್ ಆಸ್ಪತ್ರೆ ಅತ್ಯಗತ್ಯ. ಆಸ್ಪತ್ರೆ ಯೋಜನೆಗೆ ಆರ್ ಎಸ್ ಎಸ್ ನಿಂದ ಎಲ್ಲ ನೆರವು ನೀಡುವುದಾಗಿ ಅವರು ಭರವಸೆ ನೀಡಿದರು.

ಆರೋಗ್ಯದ ಬಗ್ಗೆ ಕಾಳಜಿಗಳು ಹೆಚ್ಚುತ್ತಿವೆ. ಜೀವನಶೈಲಿ ಬದಲಾಗುತ್ತಿರುವುದು ಮುಖ್ಯ ಕಾರಣಗಳಲ್ಲಿ ಒಂದಾಗಿದೆ ಎಂದು ಹೇಳಿದ್ದಾರೆ.

ಹೈದರಾಬಾದ್ ರೇಸ್

ಹುಮಾನಿಟೇರಿಯನ್ ಗೆಲ್ಲುವ ನಿರೀಕ್ಷೆ

ರಾಜಾ ಮೆಹ್‌ಬೂಬ್ ಕರಣ್ ಮೆಮೋರಿಯಲ್ ಕಪ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಹುಮಾನಿಟೇರಿಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:25ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ವಿಂಡ್ಸರ್ 9, ಬ್ಯಾಶ್ ಆನ್ ರಿಗಾರ್ಡ್‌ಲೆಸ್ 4, ಫ್ಲೈ ಮೀ 6
2ನೇ ರೇಸ್: ಹ್ಯಾಪಿ ಗೋ ಲಕ್ಕಿ 4, ಟೆಂಪ್ಟೇಶನ್ಸ್ 2, ಮಿಲಿಯನ್ ಕಿಸೆಸ್ 1
3ನೇ ರೇಸ್: ಕ್ಲೇರ್ 4, ಒನ್ಲಿ ದಿ ಬ್ರೇವ್ 3, ಕ್ವೀನ್ ಎಂಪ್ರೆಸ್ 6
4ನೇ ರೇಸ್: ಕಿಂಗ್ಸ್ ಪಾತ್ 4, ರೈವಲ್ 6, ಪಾತ್ ಆಫ್ ಪೀಸ್ 5
5ನೇ ರೇಸ್: ಲಿವರ್ಮೋರ್ 7, ರೋಲ್ ಮಾಡೆಲ್ 4, ಅಮಾಲ್ಫಿಟಾನ 2
6ನೇ ರೇಸ್: ಹುಮಾನಿಟೇರಿಯನ್ 6, ವಿನ್ನಿಂಗ್ ಸ್ಟ್ರೀಕ್ 2, ಸೂಪರ್‌ಸ್ಟೆಲ್ಲಾರ್ 8
7ನೇ ರೇಸ್: ಸ್ಟಾಯಿಕ್ ಹೀರೊ 3, ಡ್ಯಾನೂಶ್ 1, ಸಾಲಿಶ್‌ಬರಿ 2
8ನೇ ರೇಸ್: ಹಾನರಬಲ್ ಲೇಡಿ 8, ಎಕ್ಸ್‌ಪೋನೆಂಟ್ 1, ಇಟ್ಸ್ ಮೈ ಲೈಫ್ 9

ಉತ್ತಮ ಬೆಟ್: ವಿಂಡ್ಸರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3,	3,4,5	6,7,8

'ಭಾಷೆಯ ಪರಿಶುದ್ಧತೆಗೆ ಪ್ರಾಚೀನ ಶಿಕ್ಷಾ ಗ್ರಂಥ ಬಹುಮಾನ್ಯ'

'ನಾರದೀಯ ಸಂಗೀತ' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಗೀತಕ್ಕೆ ನಾರದರ ಕೊಡುಗೆ ಅಪಾರ. ಆಧುನಿಕ ಸಂಗೀತವನ್ನು ನಾರದೀಯ ಶಿಕ್ಷಾ ಗ್ರಂಥದ ಜತೆಗೆ ಸಮನ್ವಯ ಮಾಡಿರುವುದು ಸಮಂಜಸವಾಗಿದೆ' ಎಂದು ವಿಮರ್ಶಕ ಎಂ.ಪ್ರಭಾಕರ ಜೋಶಿ ಹೇಳಿದರು.

ನಗರದಲ್ಲಿ ಭಾನುವಾರ ಕತಗಾಲದ ಕಲಾಶ್ರೀ ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾವಿದೆ ರೋಹಿಣಿ ನಾಗೇಂದ್ರ ಸಂಪಾದಿಸಿರುವ 'ನಾರದೀಯ ಸಂಗೀತ' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

'ಗ್ರಾಮೀಣ ಸಂಸ್ಥೆಯೊಂದು ಸಂಗೀತ ಪರಂಪರೆಯ ಕೃತಿಯನ್ನು ಪ್ರಕಟಿಸಿರುವುದು ಅದ್ಭುತವಾಗಿದೆ. ಬಹುಶಃ ಕನ್ನಡದಲ್ಲಿ ಇಂತಹ ಕೃತಿ ಅನಿವಾರ್ಯತೆ ಇತ್ತು. ಚಿಕ್ಕದಾದರೂ ಈ ಕೃತಿ ಚೊಕ್ಕವಾಗಿದೆ. ಭಾಗವತದ ಶ್ಲೋಕ ಮತ್ತು ಕೆಲವು ಸ್ತೋತ್ರಗಳನ್ನು ವಿವಿಧ ರಾಗಗಳಲ್ಲಿ ಸಂಯೋಜಿಸಿ, ಪ್ರಕಟಿಸಿರುವುದು ವಿಶೇಷ' ಎಂದು ಬಣ್ಣಿಸಿದರು.

ಸಂಸ್ಕೃತ ವಿದ್ವಾಂಸ ಉಮಾಕಾಂತ ಭಟ್ಟ ಮಾತನಾಡಿ, 'ಭಾಷೆಯ ಪರಿಶುದ್ಧತೆಗೆ ಪ್ರಾಚೀನ ಶಿಕ್ಷಾ ಗ್ರಂಥ ಬಹುಮಾನ್ಯವಾಗಿದೆ. ಪುಸ್ತಕಕ್ಕೆ ಅನುಗುಣವಾಗಿ ವಿವಿಧ ರಾಗಗಳಲ್ಲಿ ಸಂಯೋಜಿಸಿ ಧ್ವನಿ ಮುದ್ರಿಕೆಯ ರೂಪ ಕೊಟ್ಟಿರುವುದು ವಿಶೇಷ. ಸಂಗೀತ ಕ್ಷೇತ್ರಕ್ಕೆ ಇದು ಪರ್ವಕಾಲ. ರೋಹಿಣಿ ಅವರು ಗಾನ–ವಾದನ ಕೌಶಲದೊಂದಿಗೆ ನಿರಂತರವಾಗಿ ಸಂಗೀತ ವಿಷಯ ವಿಮರ್ಶಿಸಿ ಗ್ರಂಥ ರಚನೆ ಮಾಡಿದ್ದಾರೆ' ಎಂದರು.

ಯಕ್ಷಗಾನ ಕಲಾವಿದರಾದ ಸಂಪಾಜೆಯ ಜಬ್ಬಾರ ಸಮೋ, ಯಲ್ಲಾಪುರದ ಗಣಪತಿ ಭಟ್ಟ, ಕಾರ್ಕಳದ ಅನಂತ ಪದ್ಮನಾಭ ಫಾಟಕ, ಸಂಕದಗುಂಡಿ ಗಣಪತಿ ಭಟ್ಟ, ಅಜಿತ ಕಾರಂತ, ಎಚ್.ಎನ್.ಅಂಬಿಗ, ಎಂ.ಆರ್. ಅರುಣಕುಮಾರ, ಶ್ರೀಪಾದ ಸಿಂಗನಮಲ್ಲಿ, ಸುವರ್ಣಾ ದೇಸಾಯಿ, ಸುಮಂಗಲಾ ಭಟ್ಟ ಇದ್ದರು.

ನಂತರ,'ಭಕ್ತ ವೀರಮಣಿ' ಎಂಬ ಯಕ್ಷಗಾನ ತಾಳಮದ್ದಳೆಯನ್ನು ಕಲಾವಿದರು ಪ್ರಸ್ತುತ ಪಡಿಸಿದರು.

ಬೆಂಗಳೂರಿನಲ್ಲಿ ಭಾನುವಾರ ಕತಗಾಲದ ಕಲಾಶ್ರೀ ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾವಿದೆ ರೋಹಿಣಿ ನಾಗೇಂದ್ರ ಅವರು ಸಂಪಾದಿಸಿರುವ 'ನಾರದೀಯ ಸಂಗೀತ' ಹಾಗೂ 'ಸಂಗೀತ ಭಾಗವತ' ಕೃತಿ ಹಾಗೂ ಧ್ವನಿಮುದ್ರಿಕೆಯನ್ನು ವಿಮರ್ಶಕ ಎಂ.ಪ್ರಭಾಕರ ಜೋಶಿ ಬಿಡುಗಡೆ ಮಾಡಿದರು. ಉಮಾಕಾಂತ ಭಟ್ಟ, ಜಬ್ಬಾರ ಸಮೋ, ಅನಂತ ಪದ್ಮನಾಭ ಫಾಟಕ, ಗಣಪತಿ ಭಟ್ಟ ಇದ್ದರು

ಕೃಷಿ ಅರಣ್ಯ ಬೆಳೆಸಲು ಪ್ರೋತ್ಸಾಹಧನ ನೀಡಿ: ಮುಖ್ಯಮಂತ್ರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಅಸಮ ತೋಲನ ತಡೆಗೆ ಶಾಶ್ವತ ಕ್ರಮ ಕೈಗೊಳ್ಳಬೇಕು. ಕೃಷಿ ಅರಣ್ಯ ಬೆಳೆಸಲು ರೈತರಿಗೆ ಪ್ರೋತ್ಸಾಹಧನ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಧಾನ ಪರಿಷತ್ ಸದಸ್ಯ ದಿನೇಶ ಗೂಳಿಗೌಡ ಮನವಿ ಮಾಡಿದ್ದಾರೆ.

ಸಸಿಗಳನ್ನು ನೆಡಬೇಕು. ಅರಣ್ಯ ಒತ್ತುವರಿ, ನಾಶ, ಭೂಮಿಯಲ್ಲಿ ಅಭಿವೃದ್ಧಿ ಹೆಸರಿನಲ್ಲಿ ನಡೆಯುವ ಚಟುವಟಿಕೆಗಳಿಗೆ ಕಡಿವಾಣ ಹಾಕ ಬೇಕು. ಅರಣ್ಯ ನಾಶ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಕಲ್ಲು ಗಣಿಗಾರಿಕೆಗೆ ಅನುಮತಿ ನೀಡುವಾಗ ಅರಣ್ಯ ಬೆಳೆಸಲು ಷರತ್ತು ವಿಧಿಸಬೇಕು. ಎಕ್ಸ್‌ಪ್ರೆಸ್ ಹೆದ್ದಾರಿ, ಇತರ ರಸ್ತೆಗಳ ನಿರ್ಮಾಣದಿಂದ ಉಂಟಾಗುವ ಮರಗಳ ನಾಶಕ್ಕೆ ಪರ್ಯಾಯವಾಗಿ ಸಸಿ ಬೆಳೆಸಬೇಕು. ನೀರಾವರಿ ಯೋಜನೆಗಳ ಸಂದರ್ಭದಲ್ಲಿ ನಾಶವಾಗುವ ಪ್ರಕೃತಿ ಸಂಪತ್ತನ್ನು ಪರ್ಯಾಯವಾಗಿ ಬೆಳೆಸಲು ಮಾರ್ಗಸೂಚಿ ಮಾಡಬೇಕು. ರೈಲ್ವೆ ಮಾರ್ಗಗಳು ಸೇರಿದಂತೆ ಪರಿಸರ ನಾಶಕ್ಕೆ ಕಾರಣವಾಗಬಹುದಾದ ಯೋಜನೆಗಳ ಜಾರಿ ಸಂದರ್ಭದಲ್ಲಿ ಎಚ್ಚರ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ರಂಗಸ್ಥಳ ಯಕ್ಷ ಮಿತ್ರ ಕೂಟದಿಂದ ರಂಗಸ್ಥಳ ಪ್ರಶಸ್ತಿ ಮತ್ತು ದತ್ತಿನಿಧಿ ಪ್ರಶಸ್ತಿ ಪುರಸ್ಕೃತರಾದ ಕೃಷ್ಣಸ್ವಾಮಿ ಜೋಯಿಸ್, ಹೆಮ್ಮಾಡಿ ರಾಮಚಂದ್ರ ಭಟ್, ಆರುವ ಕೊರಗಪ್ಪ ಶೆಟ್ಟಿ, ಕಮಲಶಿಲೆ ಮಹಾಬಲ ದೇವಾಡಿಗ, ಹಾರಾಡಿ ರಮೇಶ ಗಾಣಿಗ, ಮೊಳಹಳ್ಳಿ ಕೃಷ್ಣ ಮೊಗವೀರ ಅವರನ್ನು ಗೌರವಿಸಲಾಯಿತು. ದತ್ತಾತ್ರೇಯ ಅರಳೀಕಟ್ಟೆ, ಶಾಸಕ ಗುರುರಾಜ ಗಂಟಿಹೊಳೆ, ಚಿಕ್ಕಣ್ಣ ಯಣ್ಣೆಕಟ್ಟೆ, ಜಯರಾಮ್ ಶೆಟ್ಟಿ, ಡಾ. ಸಿ.ಆರ್. ಚಂದ್ರಶೇಖರ್, ಕೆ.ಎಂ. ಶೇಖರ್, ಮಂಜುನಾಥ ಎನ್. ಗಾಣಿಗ, ಕಾಂಗ್ರೆಸ್ ನಾಯಕಿ ಸಿ. ಮೋಟಮ್ಮ ಇದ್ದರು –ಪ್ರಜಾವಾಣಿ ಚಿತ್ರ

ನೈಜ ಕಲೆಗೆ ಪ್ರೋತ್ಸಾಹ ಅಗತ್ಯ: ಮೋಟಮ್ಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲೆಯನ್ನು ಬೆಳೆಸುವ ನಿಜವಾದ ಮನೋಧರ್ಮದಿಂದ ಕೆಲಸ ಮಾಡುವವರನ್ನು ಪ್ರೋತ್ಸಾಹಿಸಬೇಕು' ಎಂದು ಕಾಂಗ್ರೆಸ್ ನಾಯಕಿ ಮೋಟಮ್ಮ ಭಾನುವಾರ ಇಲ್ಲಿ ತಿಳಿಸಿದರು.

'ರಂಗಸ್ಥಳ' ಯಕ್ಷಮಿತ್ರಕೂಟದ 23ನೇ ವಾರ್ಷಿಕ ಸಂಭ್ರಮದಲ್ಲಿ ಅವರು ಮಾತನಾಡಿದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಇಂಥ ಸಂಘಟನೆಗಳಿಗೆ ಅನುದಾನ ಒದಗಿಸಲು ಅವಕಾಶ ಇದೆ. ಶಾಸಕರು ಈ ನಿಟ್ಟಿನಲ್ಲಿ ಪ್ರಯತ್ನಿಸಬೇಕು' ಎಂದು ಸಲಹೆ ನೀಡಿದರು.

ತೆಂಕುತಿಟ್ಟು ಕಲಾವಿದ ಆರುವ ಕೊರಗಪ್ಪ ಶೆಟ್ಟಿ, ಹಾಸ್ಯ ಕಲಾವಿದ ಕಮಲಶಿಲೆ ಮಹಾಬಲ ದೇವಾಡಿಗ ಅವರಿಗೆ ರಂಗಸ್ಥಳ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುಮ್ಮೇಳ ಕಲಾವಿದ ಹೆಮ್ಮಾಡಿ ರಾಮಚಂದ್ರ ಭಟ್, ಸ್ತ್ರೀ ವೇಷಧಾರಿಗಳಾದ ಹಾರಾಡಿ ರಮೇಶ ಗಾಣಿಗ, ಮೊಳಹಳ್ಳಿ ಕೃಷ್ಣ ಮೊಗವೀರ, ಯಕ್ಷಗುರು ಕೃಷ್ಣಸ್ವಾಮಿ ಜೋಯಿಸ್ ಅವರಿಗೆ ವಿವಿಧ ದತ್ತಿನಿಧಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಕಲಾವಿದ ಕುಂಜಾಲು ಕೇಶವ ಆಚಾರ್ಯ ಅವರಿಗೆ ಆರ್ಥಿಕ ನೆರವು ನೀಡಲಾಯಿತು.

ಬೈಂದೂರು ಶಾಸಕ ಗುರುರಾಜ ಗಂಟಿಹೊಳೆ, ಮನಶಾಸ್ತ್ರಜ್ಞ ಡಾ. ಸಿ.ಆರ್. ಚಂದ್ರಶೇಖರ, ಉಪನ್ಯಾಸಕ ಜಯರಾಮ ಶೆಟ್ಟಿ ಎಸ್. ಪುತ್ತಳಿ ಕಲಾರಂಗದ ದತ್ತಾತ್ರೇಯ ಅರಳೀಕಟ್ಟೆ, ಜನಪದ ವಿದ್ವಾಂಸ ಚಿಕ್ಕಣ್ಣ ಯಣ್ಣೆಕಟ್ಟೆ, ಉದ್ಯಮಿ ಮಂಜುನಾಥ ಎನ್. ಗಾಣಿಗ, ಶಿಕ್ಷಕ ಚಂದ್ರಪ್ಪ ಆಳೂರು, 'ರಂಗಸ್ಥಳ' ಅಧ್ಯಕ್ಷ ಆರ್.ಕೆ. ನಾಗನೂರು, ಪ್ರಧಾನ ಕಾರ್ಯದರ್ಶಿ ಕೆ.ಎಂ. ಶೇಖರ್ ಇದ್ದರು. 'ಜಾಂಬವತಿ ಕಲ್ಯಾಣ', 'ಕನಕಾಂಗಿ ಕಲ್ಯಾಣ' ಯಕ್ಷಗಾನ ನಡೆಯಿತು.

ಚಿತ್ರಾವಳಿ

ಶೇಷಾದ್ರಿಪುರ ರಾಜೀವ್ ಗಾಂಧಿ ಜಂಕ್ಷನ್‌ನಲ್ಲಿ ನವೀಕರಣಗೊಳ್ಳುತ್ತಿರುವ ಉದ್ಯಾನದಲ್ಲಿ ರಾಜೀವ್ ಗಾಂಧಿ ಕಂಚಿನ ಪ್ರತಿಮೆ ನಿರ್ಮಿಸಲು ಬಿಬಿಎಂಪಿ ಟೆಂಡರ್ ಕರೆದಿದೆ. ಪ್ರತಿಮೆಯ ಅಂದಾಜು ವೆಚ್ಚ ₹ 1.05 ಕೋಟಿ ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ಬೆಂಗಳೂರಿನಲ್ಲಿ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ಅವರು ಆಟೊ ಚಾಲಕರು, ಟೇಲರ್, ತರಕಾರಿ ವ್ಯಾಪಾರಿಗಳ ಪ್ರತಿಭಾನ್ವಿತ ಮಕ್ಕಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸಿದರು. ಮೈಸೂರು ಕಾಲೇಜ್ ಆಫ್ ಎಂಜಿನಿಯರಿಂಗ್‌ನ ವಿದ್ಯಾರ್ಥಿನಿ ಶರಣ್ಯ ಮತ್ತು ಮೈಸೂರು ವಿಶ್ವವಿದ್ಯಾಲಯ ಎಂಎಸ್ಸಿ ವಿದ್ಯಾರ್ಥಿನಿ ಶಾಂಭವಿ, ಡಾನ್ ಬಾಸ್ಕೊ ಎಂಜಿನಿಯರಿಂಗ್ ಕಾಲೇಜಿನ ಶರಣ್ಯ, ಪಿಇಎಸ್ ಕಾಲೇಜಿನ ಎಂಬಿಎ ವಿದ್ಯಾರ್ಥಿಗಳಾದ ಪವನ್, ಪ್ರೀತಿಕಾ ಇದ್ದಾರೆ

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮತ್ತು ಮುಂಬೈ ವಿವಿಧ ಕನ್ನಡಪರ ಸಂಘ ಸಂಸ್ಥೆಗಳ ವತಿಯಿಂದ ಮುಂಬೈನ ರಾಧಾಬಾಯಿ ಟಿ. ಭಂಡಾರಿ ಸಭಾಂಗಣದಲ್ಲಿ ನಡೆದ 'ಹೊರನಾಡು ಕನ್ನಡ ಸಂಸ್ಕೃತಿ ಸಂಭ್ರಮ'ದಲ್ಲಿ ಶಿಕ್ಷಣ ತಜ್ಞ ಕೆ.ಇ.ರಾಧಾಕೃಷ್ಣ ಅವರಿಗೆ 'ಕರುನಾಡ ಚೇತನ ಪ್ರಶಸ್ತಿ' ನೀಡಲಾಯಿತು. ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ, ಮಾಜಿ ಅಧ್ಯಕ್ಷ ಸಿ. ಸೋಮಶೇಖರ್, ವಿಧಾನ ಪರಿಷ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಇದ್ದರು

ಬೆಂಗಳೂರಿನ 'ಲಯನ್ಸ್ ಕ್ಲಬ್ ಆಶಾ' ವತಿಯಿಂದ 88 ಜನರಿಗೆ ಕೃತಕ ಕಾಲು ಜೋಡಣೆ ಹಾಗೂ ನಾಲ್ವರಿಗೆ ಕೃತಕ ಕೈ ಜೋಡಣೆಯನ್ನು ಉಚಿತವಾಗಿ ಮಾಡಲಾಯಿತು. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ಸದಸ್ಯ ಕಾರ್ಯದರ್ಶಿ ರಾಜು ಚಂದ್ರಶೇಖರ, ವೈದ್ಯ ಸಿಂಗ್ರಿ ಭಾಸ್ಕರ್, ಲಯನ್ಸ್ ಮತ್ತು ಲಯನೆಸ್ ಕ್ಲಬ್‌ನ ನರೇಂದ್ರ, ಕಮಲ್ ಜೈನ್, ಕಾಂತೀಲಾಲ್, ರಮೇಶ್ ಜೈನ್ ಇದ್ದರು

ಸಂಭಾಜಿ ವಿರುದ್ಧ ಸೂಕ್ತ ಕ್ರಮ: ಫಡಣವೀಸ್

ಮುಂಬೈ: ಬಲಪಂಥೀಯ ನಾಯಕ ಸಂಭಾಜಿ ಭಿಡೆ ಅವರು ಮಹಾತ್ಮ ಗಾಂಧಿ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವುದನ್ನು ಖಂಡಿಸಿ ರಾಜ್ಯವ್ಯಾಪಿ ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿ ಅಥವಾ ವೀರ ಸಾವರ್ಕರ್ ಅವರಿಗೆ ಅಪಮಾನ ಮಾಡುವುದನ್ನು ಸಹಿಸುವುದಿಲ್ಲ ಎಂದು ಬಿಜೆಪಿ–ಶಿವಸೇನಾ–ಎನ್‌ಸಿಪಿ ಸರ್ಕಾರ ಸ್ಪಷ್ಟಪಡಿಸಿದೆ.

ಸಂಭಾಜಿ ಅವರ ಬಂಧನಕ್ಕೆ ಆಗ್ರಹಿಸಿ ರಾಜ್ಯದಲ್ಲಿ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿದೆ. ಶಿವ ಪ್ರತಿಷ್ಠಾನ ಹಿಂದೂಸ್ತಾನ್ ಸಂಘಟನೆಯ ಸಂಸ್ಥಾಪಕ 90 ವರ್ಷದ ಸಂಭಾಜಿ ಗುರುವಾರ ಅಮರಾವತಿ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ ಗಾಂಧಿ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ನಾಗಪುರದಲ್ಲಿ ಭಾನುವಾರ ಮಾತನಾಡಿದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ಭಿಡೆ ಅವರು ಬಿಜೆಪಿ ಜತೆ ನಂಟು ಹೊಂದಿಲ್ಲ. ಅವರು ತನ್ನದೇ ಸಂಸ್ಥೆ ನಡೆಸುತ್ತಿದ್ದಾರೆ. 'ಭಿಡೆ ಹೇಳಿಕೆಯನ್ನು ಖಂಡಿಸುತ್ತೇನೆ ಮತ್ತು ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ನಗರದಲ್ಲಿ ಇಂದು

ಅಧಿಕ ಶ್ರಾವಣ ಪುರುಷೋತ್ತಮ ಮಾಸದ ಪ್ರಯುಕ್ತ ಶ್ರೀಮದ್ಭಾಗವತ ಅಖಂಡ ಪಾರಾಯಣ ಮತ್ತು ಜ್ಞಾನೇಶ್ವರಿ ಗ್ರಂಥ ಸಾಮೂಹಿಕ ಪಾರಾಯಣ ಸಪ್ತಾಹ ಮಹೋತ್ಸವ: ಆಯೋಜನೆ ಹಾಗೂ ಸ್ಥಳ: ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ಗಾಂಧಿನಗರ, ಬೆಳಿಗ್ಗೆ 7ರಿಂದ

ಘಟಿಕೋತ್ಸವ: ಅಧ್ಯಕ್ಷತೆ: ಎ.ವಿ. ಎಸ್. ಮೂರ್ತಿ, ಮುಖ್ಯ ಅತಿಥಿ: ರಾಜೀವ್ ಸೇಥಿ, ಆಯೋಜನೆ: ಆರ್.ವಿ. ವಿಶ್ವವಿದ್ಯಾಲಯ, ಸ್ಥಳ: ದೇವಂ ಹಾಲ್, ಪೂರ್ಣಿಮಾ ಪ್ಯಾಲೇಸ್, ಪಟ್ಟಣಗೆರೆ ಮುಖ್ಯರಸ್ತೆ, ಬೆಳಿಗ್ಗೆ 9

59ನೇ ವಾರ್ಷಿಕೋತ್ಸವ: ಮುಖ್ಯ ಅತಿಥಿ: ನಿತಿನ್ ಎಂ. ಗಂಗನೆ, ಗೌರವ ಅತಿಥಿ: ಎಸ್. ಸುರೇಶ್ ಕುಮಾರ್, ಅಧ್ಯಕ್ಷತೆ: ಮಹಾಂತೇಶ ಎಂ. ಕವಟಗಿಮಠ, ಆಯೋಜನೆ: ಕೆ.ಎಲ್.ಇ. ಸೊಸೈಟೀಸ್ ಎಸ್. ನಿಜಲಿಂಗಪ್ಪ ಕಾಲೇಜ್, ಸ್ಥಳ: ಕೆ.ಎಲ್.ಇ. ಸ್ಕೂಲ್ ಸಭಾಂಗಣ, ರಾಜಾಜಿನಗರ, ಬೆಳಿಗ್ಗೆ 10

ಘಟಿಕೋತ್ಸವ: ಮುಖ್ಯ ಅತಿಥಿ: ಅಮಿತಾಭ್ ಚೌಧರಿ, ಗೌರವ ಅತಿಥಿ: ಕ್ರಿಸ್ ಗೋಪಾಲಕೃಷ್ಣನ್, ಆಯೋಜನೆ: ಭಾರತೀಯ ವಿಜ್ಞಾನ ಸಂಸ್ಥೆ, ಸ್ಥಳ: ಜೆ.ಎನ್. ಟಾಟಾ ಆಡಿಟೋರಿಯಮ್, ಬೆಳಿಗ್ಗೆ 11

5ನೇ ವಿಶ್ವ ಕಾಫಿ ಸಮ್ಮೇಳನದ ಲೋಗೋ ಅನಾವರಣ: ಮುಖ್ಯ ಅತಿಥಿಗಳು: ರೋಹನ್ ಬೋಪಣ್ಣ, ಎಸ್. ಸೆಲ್ವಕುಮಾರ್, ಆಯೋಜನೆ: ಇಂಟರ್‌ನ್ಯಾಷನಲ್ ಕಾಫಿ ಆರ್ಗನೈಜೇಷನ್, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಕಾಫಿ ಬೋರ್ಡ್ ಆಫ್ ಇಂಡಿಯಾ, ಸ್ಥಳ: ಕ್ರಿಷ್ಣ ಹಾಲ್, ಶಾಂಗ್ರಿಲಾ ಹೋಟೆಲ್, ಬೆಳಿಗ್ಗೆ 11.30

ರೋಹನ್ ಬೋಪಣ್ಣ

ಪುಸ್ತಕ ಬಿಡುಗಡೆ ಮತ್ತು ರಾಷ್ಟ್ರೀಯ ವಿಚಾರಸಂಕಿರಣ: ಮುಖ್ಯ ಅತಿಥಿ: ಜಯಕರ್ ಎಂ.ಎಸ್., ವೀಣಾ ಮಜುಂದಾರ್ ಅವರ 'ಉರುಳುವ ಕಲ್ಲಿನ ನೆನಪಿನ ಸುರುಳಿ' ಪುಸ್ತಕ ಬಿಡುಗಡೆ: ಇಂದ್ರಾಣಿ ಮಜುಂದಾರ್, ಪುಸ್ತಕದ ಬಗ್ಗೆ: ಕೆ.ಎಸ್. ವೈಶಾಲಿ, ಅನುವಾದ: ಎನ್. ಗಾಯತ್ರಿ, 'ಸಮಾನತೆಯೆಡೆಗೆ' ವರದಿಯ ಅಪೂರ್ಣವಾಗುಳಿದ ಕಾರ್ಯಸೂಚಿಗಳು ರಾಷ್ಟ್ರೀಯ ವಿಚಾರ ಸಂಕಿರಣ: ಅಧ್ಯಕ್ಷತೆ: ಆರ್. ಇಂದಿರಾ, ಭಾಷಣ: ಇಂದ್ರಾಣಿ ಮಜುಂದಾರ್, ದು. ಸರಸ್ವತಿ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ ಮಹಿಳಾ ಅಧ್ಯಯನ ಕೇಂದ್ರ, ಕ್ರಿಯಾ ಮಾಧ್ಯಮ, ಸ್ಥಳ: ಸೆನೆಟ್ ಸಭಾಂಗಣ, ಜ್ಞಾನ ಭಾರತಿ ಕ್ಯಾಂಪಸ್, ಮಧ್ಯಾಹ್ನ 2

'ಕುಂಟ ಕೋಣ ಮೂಕ ಜಾಣ' 2021ನೇ ಪ್ರಯೋಗದ ಸಂಭ್ರಮದ ಸಮಾರಂಭ: ಉದ್ಘಾಟನೆ: ವಿಶ್ವನಾಥ ಹಿರೇಮಠ, ಮುಖ್ಯ ಅತಿಥಿಗಳು: ಕೆ.ವೈ. ನಾರಾಯಣಸ್ವಾಮಿ, ಚಿಂದೋಡಿ ಮಧುಕೇಶ, ಅಧ್ಯಕ್ಷತೆ: ಮಲ್ಲಿಕಾರ್ಜುನ ಕಡಕೋಳ, ಆಯೋಜನೆ: ಜೇವರ್ಗಿಯ ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘ, ಸ್ಥಳ: ಗುಬ್ಬಿ ವೀರಣ್ಣ ರಂಗಮಂದಿರ, ಗಾಂಧಿನಗರ, ಮಧ್ಯಾಹ್ನ 2.45

ರಂಗೋತ್ಸವ 2023: ಉಪಸ್ಥಿತಿ: ಎಂ.ವಿ.ಸಿ. ಹನುಮಂತಯ್ಯ, ಸಾಂಸ್ಕೃತಿಕ ಕಾರ್ಯಕ್ರಮ: ರಂಗಾಭರಣ ಕಲಾಶಾಲೆ, ಆಯೋಜನೆ: ರಂಗಾಭರಣ ಕಲಾಕೇಂದ್ರ, ಸ್ಥಳ: ಚಂದ್ರಪ್ರಿಯ ರಂಗಮಂದಿರ, ರಂಗಾಭರಣ ಕಲಾಕೇಂದ್ರ, ಕೆಇಬಿ ಬಡಾವಣೆ, ಸಂಜಯನಗರ, ಸಂಜೆ 6

ಧಾರ್ಮಿಕ ಪ್ರವಚನ: 'ಮದ್ಭಾಗವತಾಮಾಹಾತ್ಮ್ಯ', ಪ್ರವಚನಕಾರರು: ವ್ಯಾಸನಕೆರೆ ಪ್ರಭಂಜನಾಚಾರ್ಯ, ಉಪಸ್ಥಿತಿ: ವಿದ್ಯೇಶತೀರ್ಥ ಸ್ವಾಮೀಜಿ, ಸ್ಥಳ: ಭಾಗವತಕೀರ್ತಿಧಾಮ, ಭಂಡಾರಕೇರಿ ಮಠ, ಗಿರಿನಗರ, ಸಂಜೆ 6.30

ಪ್ರವಚನ ವಾಹಿನಿ ಕಾರ್ಯಕ್ರಮ: ಭಜನೆ: ಪಾಂಚಜನ್ಯ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'55 ನಿಮಿಷದ ಒಂದು ಪ್ರೇಮ ಕಥೆ' ನಾಟಕ ಪ್ರದರ್ಶನ: ನಿರ್ದೇಶನ: ರಾಜಗುರು ಹೊಸಕೋಟೆ, ಆಯೋಜನೆ: ರಂಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಸೋಮವಾರ, ಜುಲೈ 31, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 211 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ ವಿದೇಶಗಳಲ್ಲಿರುವ ಭಾಷಾ ಪ್ರವೇಶ ಪರೀಕ್ಷೆ 'ಐಇಎಲ್‌ಟಿಎಸ್(IELTS) ಕುರಿತ ಮಾಹಿತಿ ಇಲ್ಲಿದೆ.

ಮಹಿಳಾ ಮತ: ಮುಟ್ಟು-ಗುಟ್ಟು ಮೌಢ್ಯ, ತಪ್ಪುಗ್ರಹಿಕೆ ಹತ್ತು ಹಲವು

ಪಾಕ್: ಆತ್ಮಾಹುತಿ ದಾಳಿ, 44 ಸಾವು 8

13.13 ಲಕ್ಷ ಬಾಲಕಿಯರು, ಮಹಿಳೆಯರು ನಾಪತ್ತೆ 9

ದರ್ಪಣ' ಕ್ಯೂಆರ್ ಕೋಡ್ ವ್ಯವಸ್ಥೆ ಯಶಸ್ವಿ ಬೆನ್ನಲ್ಲೇ ಯೋಜನೆಯ ವಿಸ್ತರಣೆ

ರಾಜ್ಯದಲ್ಲಿ 'ಲೋಕ ಸ್ಪಂದನ' ಜಾರಿ 5

ಅಕ್ಟೋಬರ್‌ಗೂ ಮುನ್ನ ಪರಿಷ್ಕೃತ ದರ ಜಾರಿಗೆ ಪ್ರಯತ್ನ • ಕೆಲವೆಡೆ ಗಣನೀಯ ಏರಿಕೆ ಸಾಧ್ಯತೆ

'ವಾಸ್ತವಿಕ' ಮಾರ್ಗಸೂಚಿ ದರಕ್ಕೆ ಸಿದ್ಧತೆ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 'ಗ್ಯಾರಂಟಿ' ಯೋಜನೆಗಳ ಅನುಷ್ಠಾನಕ್ಕೆ ಅಗತ್ಯವಿರುವ ಹೆಚ್ಚುವರಿ ಸಂಪನ್ಮೂಲ ಕ್ರೋಡೀಕರಣಕ್ಕೆ ಪೂರಕವಾಗಿ ವಾಸ್ತವಿಕ ಮಾರುಕಟ್ಟೆ ದರವನ್ನು ಆಧರಿಸಿ ಸ್ಥಿರಾಸ್ತಿ ಮಾರ್ಗಸೂಚಿ ದರ ಪರಿಷ್ಕರಿಸಲು ಕಂದಾಯ ಇಲಾಖೆ ಪ್ರಕ್ರಿಯೆ ಆರಂಭಿಸಿದೆ. ರಾಜ್ಯದ ಹಲವು ಭಾಗಗಳಲ್ಲಿ ಈ ಬಾರಿ ಸ್ಥಿರಾಸ್ತಿ ಮಾರ್ಗಸೂಚಿ ದರಗಳಲ್ಲಿ ಗಣನೀಯ ಏರಿಕೆಯಾಗುವ ಸಾಧ್ಯತೆ ಇದೆ.

ರಾಜ್ಯದ ಪ್ರಮುಖ ನಗರ ಮತ್ತು ಪಟ್ಟಣಗಳ ಹೊರ ವಲಯಗಳು ಹಾಗೂ ನಗರ ಪ್ರದೇಶಗಳಿಗೆ ಹೊಂದಿಕೊಂಡಿರುವ ಅರೆ-ನಗರ ಪ್ರದೇಶಗಳ ಬಹುತೇಕ ಭಾಗಗಳಲ್ಲಿ ಸ್ಥಿರಾಸ್ತಿಗಳ ವಾಸ್ತವಿಕ ಮಾರುಕಟ್ಟೆ ದರ ಹಾಗೂ ಮಾರ್ಗಸೂಚಿ ದರಗಳ ಮಧ್ಯೆ ಭಾರಿ ವ್ಯತ್ಯಾಸ ಇದೆ. ಅಂತಹ ಎಲ್ಲ ಪ್ರದೇಶಗಳನ್ನೂ ಗುರುತಿಸಿ, ಮಾರುಕಟ್ಟೆ ದರದ ಕುರಿತು ಮಾಹಿತಿ ಸಂಗ್ರಹಿಸಿ ಅದರ ಆಧಾರದಲ್ಲಿ ಮಾರ್ಗಸೂಚಿ ದರ ಪರಿಷ್ಕರಣೆಗೆ ಕ್ರಮ ಕೈಗೊಳ್ಳುವಂತೆ ಆರ್ಥಿಕ ಇಲಾಖೆಯು ಕಂದಾಯ ಇಲಾಖೆಗೆ ನಿರ್ದೇಶನ ನೀಡಿದೆ.

ಆರ್ಥಿಕ ಇಲಾಖೆಯ ನಿರ್ದೇಶನದಂತೆ ವಾಸ್ತವಿಕ ಮಾರುಕಟ್ಟೆ ದರಗಳ ಕುರಿತು ಅಧ್ಯಯನ ನಡೆಸಿ, ಮಾರ್ಗಸೂಚಿ ದರ ಪರಿಷ್ಕರಣೆಗೆ ಇರುವ ಅವಕಾಶಗಳ ಕುರಿತು ಅಂದಾಜು ವರದಿ ನೀಡುವಂತೆ ಕಂದಾಯ ಇಲಾಖೆಯು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಯುಕ್ತರಿಗೆ ಸೂಚನೆ ನೀಡಿದೆ. ವರದಿ ಸಲ್ಲಿಕೆಯಾಗುತ್ತಿದ್ದಂತೆಯೇ ಮಾರ್ಗಸೂಚಿ ದರ ಪರಿಷ್ಕರಣೆಗೆ ಹಸಿರು ನಿಶಾನೆ ದೊರೆಯಲಿದೆ.

ಪ್ರಜಾವಾಣಿ ವಿಶೇಷ

'ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ನಗರ ಪ್ರದೇಶಗಳು, ಹೊಸದಾಗಿ ನಗರೀಕರಣ ಚಟುವಟಿಕೆ ನಡೆಯುತ್ತಿರುವ ಪ್ರದೇಶಗಳು, ಹೊಸ ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳು ನಿರ್ಮಾಣವಾಗಿರುವ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಸ್ಥಿರಾಸ್ತಿ ಮಾರ್ಗಸೂಚಿ ದರ ಏರಿಕೆ ಮಾಡಲು ಇರುವ ಸಾಧ್ಯತೆಗಳ ಕುರಿತು ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಈ ಎಲ್ಲ ಕಡೆಗಳಲ್ಲೂ ವಾಸ್ತವಿಕ ಮಾರುಕಟ್ಟೆ ದರಗಳನ್ನು ಸಂಗ್ರಹಿಸಿ ಮುಂದಿನ ವಾರದ ಅಂತ್ಯದೊಳಗೆ ವರದಿ ಸಲ್ಲಿಸಲು ಸಿದ್ಧತೆ ನಡೆದಿದೆ' ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಅಕ್ಟೋಬರ್‌ನಿಂದ ಜಾರಿಗೆ ಸಿದ್ಧತೆ: ಸಂಪನ್ಮೂಲ ಸಂಗ್ರಹಕ್ಕೆ ವೇಗ ನೀಡುವ ಉದ್ದೇಶದಿಂದ ಅಕ್ಟೋಬರ್ ತಿಂಗಳಿಗೂ ಮೊದಲೇ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಹಣಕಾಸು ಇಲಾಖೆ ಸೂಚನೆ ನೀಡಿದೆ. ಅಕ್ಟೋಬರ್ ತಿಂಗಳಿನಿಂದ ಪರಿಷ್ಕೃತ ದರಗಳ ಆಧಾರದಲ್ಲಿ ಸ್ಥಿರಾಸ್ತಿಗಳ ನೋಂದಣಿಗೆ ಅವಕಾಶ ನೀಡುವ ಪ್ರಸ್ತಾವ ಇಲಾಖೆಯ ಮುಂದಿದೆ.

'ಪ್ರಾಥಮಿಕ ವರದಿ ಸಲ್ಲಿಕೆಯಾದ ಬಳಿಕ ಮಾರ್ಗಸೂಚಿ ದರ ಪರಿಷ್ಕರಣೆಯ ಮಾನದಂಡಗಳನ್ನು ಅಂತಿಮಗೊಳಿಸಲಾಗುವುದು. ಆಗಸ್ಟ್ ಅಂತ್ಯದೊಳಗೆ ಸ್ಥಳೀಯ ಮೌಲ್ಯಮಾಪನ ಸಮಿತಿಗಳಿಂದ ವರದಿ ಪಡೆದು, ಕೇಂದ್ರೀಯ ಮೌಲ್ಯಮಾಪನ ಸಮಿತಿಗಳ ಅನುಮೋದನೆಯೊಂದಿಗೆ ಪ್ರಕಟಿಸುವ ಗುರಿ ಇದೆ. ನಂತರ ಸಾರ್ವಜನಿಕರ ಆಕ್ಷೇಪಣೆಗಳನ್ನು ಆಹ್ವಾನಿಸಿ, ಅವುಗಳನ್ನು ವಿಲೇವಾರಿ ಮಾಡಿ ಸೆಪ್ಟೆಂಬರ್ 15ರೊಳಗೆ ಅಂತಿಮ ಅಧಿಸೂಚನೆ ಹೊರಡಿಸುವಂತೆ ಹಣಕಾಸು ಇಲಾಖೆ ಸೂಚಿಸಿದೆ. ಆದರೆ, ಈ ಎಲ್ಲ ಪ್ರಕ್ರಿಯೆಗೆ ಕಾಲಾವಕಾಶ ಬೇಕಿರುವುದರಿಂದ ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ' ಎಂದೂ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಮೂಲಗಳು.

ಹೆಚ್ಚಿದ ಗುರಿ: ಪರಿಷ್ಕರಣೆಯೇ ದಾರಿ

2022-23ನೇ ಆರ್ಥಿಕ ವರ್ಷದಲ್ಲಿ ನೋಂದಣಿ ಮತ್ತು ಮುದ್ರಾಂಕ ಶುಲ್ಕದಿಂದ ₹15 ಸಾವಿರ ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಆರ್ಥಿಕ ವರ್ಷಾಂತ್ಯಕ್ಕೆ ₹ 17,873 ಕೋಟಿ ಸಂಗ್ರಹವಾಗಿತ್ತು.

ಕಳೆದ ಫೆಬ್ರುವರಿಯಲ್ಲಿ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಿದ್ದ ಬಜೆಟ್‌ನಲ್ಲಿ 2023-24ನೇ ಆರ್ಥಿಕ ವರ್ಷದಲ್ಲಿ ಈ ಮೂಲದಿಂದ ₹19 ಸಾವಿರ ಕೋಟಿ ಸಂಗ್ರಹಿಸುವ ಗುರಿ ಪ್ರಕಟಿಸಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ ತಿಂಗಳಿನಲ್ಲಿ ಮಂಡಿಸಿರುವ ಬಜೆಟ್‌ನಲ್ಲಿ ಈ ಗುರಿಯನ್ನು ₹25 ಸಾವಿರ ಕೋಟಿಗೆ ಹೆಚ್ಚಿಸಲಾಗಿದೆ. ಹಿಂದಿನ ವರ್ಷದ ಸಂಗ್ರಹಕ್ಕೆ ಹೋಲಿಸಿದರೆ ಈ ಬಾರಿ ₹7,127 ಕೋಟಿಯಷ್ಟನ್ನು ಈ ಮೂಲದಿಂದ ಹೆಚ್ಚುವರಿಯಾಗಿ ಸಂಗ್ರಹಿಸಬೇಕಿದೆ. ಹಾಗಾಗಿ ಮಾರ್ಗಸೂಚಿ ಪರಿಷ್ಕರಣೆ ಅನಿವಾರ್ಯವೇ ಆಗಿದೆ.

'ಏಕರೂಪ ಹೆಚ್ಚಳ ಇಲ್ಲ'

'ರಾಜ್ಯದಾದ್ಯಂತ ಸರಾಸರಿ ಆಧಾರದಲ್ಲಿ ಮಾರ್ಗಸೂಚಿ ದರ ಹೆಚ್ಚಿಸುವ ಕ್ರಮ ಈ ಬಾರಿ ಇರುವುದಿಲ್ಲ. ವಾಸ್ತವಿಕ ಮಾರುಕಟ್ಟೆ ದರ ಮತ್ತು ಮಾರ್ಗಸೂಚಿ ದರದ ಮಧ್ಯೆ ಭಾರಿ ಅಂತರ ಇರುವ ಪ್ರದೇಶಗಳಲ್ಲಿ ಹೆಚ್ಚಿನ ಏರಿಕೆ ಆಗಲಿದೆ. ಅಂತರ ಕಡಿಮೆ ಇರುವ ಪ್ರದೇಶಗಳಲ್ಲಿ ಮಾರ್ಗಸೂಚಿ ದರದ ಏರಿಕೆ ಪ್ರಮಾಣ ಕಡಿಮೆ ಇರಲಿದೆ' ಎಂದು ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ 'ಪ್ರಜಾವಾಣಿ'ಗೆ ತಿಳಿಸಿದರು.

ಕಾಡಾನೆ ಹಿಂಡು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಹಂಪಾಪುರ ಸಮೀಪ ಆನೆಗಳ ಹಿಂಡು ಭಾನುವಾರ ಕಾಣಿಸಿಕೊಂಡು ಜನರಲ್ಲಿ ಆತಂಕ ಮೂಡಿಸಿತು ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಕೇರಳದಲ್ಲಿ ಘಟನೆ: ಆರೋಪಿಯನ್ನು ಗಲ್ಲಿಗೇರಿಸಲು ಆಗ್ರಹ

5 ವರ್ಷದ ಮಗುವಿನ ಮೇಲೆ ಅತ್ಯಾಚಾರ, ಹತ್ಯೆ

ಕೊಚ್ಚಿ (ಪಿಟಿಐ): ಐದು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಮಾಡಿ ಆಕೆಯ ಕುತ್ತಿಗೆ ಬಿಗಿದು ಹತ್ಯೆ ಮಾಡಿರುವ ಪ್ರಕರಣ ಕೊಚ್ಚಿ ಸಮೀಪದಲ್ಲಿ ವರದಿಯಾಗಿದೆ.

ಈ ಕುರಿತು ಕೇರಳದಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿದೆ. ಆರೋಪಿ, ಬಿಹಾರದ ವಲಸೆ ಕಾರ್ಮಿಕನಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ಸಂತ್ರಸ್ತ ಮಗುವಿನ ತಾಯಿ, ಪೋಷಕರು ಒತ್ತಾಯಿಸಿದ್ದಾರೆ.

ಘಟನೆಯ ವಿವರ: ಬಾಲಕಿ ಶುಕ್ರವಾರ ನಾಪತ್ತೆಯಾಗಿದ್ದಳು. ಬಾಲಕಿಯ ಕುಟುಂಬ ವಾಸಿಸುತ್ತಿದ್ದ ಕಟ್ಟಡದಲ್ಲೇ ಇದ್ದ ಬಿಹಾರದ ವಲಸೆ ಕಾರ್ಮಿಕ ಆಕೆಗೆ ಆಮಿಷವೊಡ್ಡಿ ಬೇರೆಡೆಗೆ ಕರೆದೊಯ್ದು ಅತ್ಯಾಚಾರ ಎಸಗಿ, ಬಳಿಕ ಕ್ರೂರವಾಗಿ ಹತ್ಯೆ ಮಾಡಿದ್ದಾನೆ ಎನ್ನಲಾಗಿದೆ. ಬಾಲಕಿಯ ಕುಟುಂಬದವರು ಕೂಡಾ ಬಿಹಾರ ರಾಜ್ಯದವರೇ.

ಆಲುವಾ ಪ್ರದೇಶದ ಸ್ಥಳೀಯ ಮಾರುಕಟ್ಟೆಯ ಬಳಿ ಶನಿವಾರ ಬಾಲಕಿಯ ಮೃತದೇಹವು ಕಟ್ಟಿದ್ದ ಗೋಣಿಚೀಲವೊಂದರಲ್ಲಿ ಪತ್ತೆಯಾಗಿತ್ತು. ಆರೋಪಿಯನ್ನು ಶುಕ್ರವಾರವೇ ಬಂಧಿಸಲಾಗಿತ್ತು. ಆದರೆ, ಪಾನಮತ್ತನಾಗಿದ್ದರಿಂದ ಆತನಿಂದ ಯಾವುದೇ ವಿಷಯ ಬಾಯಿಬಿಡಿಸಲು ಆಗಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕ ಪ್ರತಿಕ್ರಿಯೆ: 'ಆರೋಪಿಗೆ ಮರಣದಂಡನೆಯಂಥ ಗರಿಷ್ಠ ಶಿಕ್ಷೆ ಆಗುವಂತೆ ಪೊಲೀಸರು ಮತ್ತು ಸರ್ಕಾರ ನೋಡಿಕೊಳ್ಳಬೇಕು' ಎಂದು ಕಾಂಗ್ರೆಸ್ ಶಾಸಕ ಅನ್ವರ್ ಸಾದಾತ್ ಹೇಳಿದ್ದಾರೆ.

> **ಬಾಲಕಿಯನ್ನು ಕೊಂದಂತೆಯೇ ನಿಷ್ಕರುಣೆಯಿಂದ ಅವನನ್ನೂ ಕೊಲ್ಲಬೇಕು. ಒಂದು ವೇಳೆ ಸರ್ಕಾರದಿಂದ ಇದು ಸಾಧ್ಯವಾಗದಿದ್ದಲ್ಲಿ ಆತನನ್ನು ಸಾರ್ವಜನಿಕರ ಕೈಗೆ ಒಪ್ಪಿಸಲಿ**
> **ಸಂತ್ರಸ್ತ ಮಗುವಿನ ತಾಯಿ**

> **ಈ ಘಟನೆಯ ಬಳಿಕ ಎಲ್ಲೆಡೆ ಪೋಷಕರು ಭಯಭೀತರಾಗಿದ್ದಾರೆ. ಇಂಥ ಘಟನೆ ಮರುಕಳಿಸದಂತೆ ಸರ್ಕಾರ ಮತ್ತು ಪೊಲೀಸರು ಮತ್ತಷ್ಟು ಎಚ್ಚರ ವಹಿಸಬೇಕಿದೆ**
> **ಅನ್ವರ್ ಸಾದಾತ್,** ಕಾಂಗ್ರೆಸ್ ಶಾಸಕ

9ನೇ ಪುಟ ನೋಡಿ

ಜಮ್ಮು-ಕಾಶ್ಮೀರ: ರಜೆಯಲ್ಲಿದ್ದ ಯೋಧ ನಾಪತ್ತೆ

ಶ್ರೀನಗರ (ಪಿಟಿಐ): ರಜೆಯಲ್ಲಿದ್ದ ಯೋಧನೊಬ್ಬ ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂ ಜಿಲ್ಲೆಯಿಂದ ನಾಪತ್ತೆಯಾಗಿದ್ದು, ಇವರ ಪತ್ತೆಗಾಗಿ ಭದ್ರತಾ ಪಡೆಗಳು ತೀವ್ರ ಶೋಧಕಾರ್ಯ ನಡೆಸಿವೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಕುಲ್ಗಾಂ ಜಿಲ್ಲೆಯ ಅಚಾತಾಲ್ ಪ್ರದೇಶದ ನಿವಾಸಿ ಜಾವೇದ್ ಅಹಮ್ಮದ್ ವಾನಿ ಅವರು ಶನಿವಾರದಿಂದ ನಾಪತ್ತೆಯಾಗಿದ್ದು, ಇವರ ಕಾರು ಪರನ್‌ಹಾಲ್ ಪ್ರದೇಶದಲ್ಲಿ ಪತ್ತೆಯಾಗಿದೆ ಎಂದು ತಿಳಿಸಿದ್ದಾರೆ.

ಲಡಾಖ್‌ನಲ್ಲಿ ನಿಯೋಜನೆಗೊಂಡಿದ್ದ ಯೋಧ ಜಾವೇದ್ ಅವರು ಭಾನುವಾರ ಕೆಲಸಕ್ಕೆ ಹಾಜರಾಗಬೇಕಿತ್ತು ಎಂದು ಅವರ ತಂದೆ ಮೊಹಮ್ಮದ್ ಅಯೂಬ್ ವಾನಿ ತಿಳಿಸಿದ್ದಾರೆ. 'ಜಾವೇದ್‌ನನ್ನು ಯಾರಾದರೂ ಅಪಹರಿಸಿದ್ದರೆ ಜೀವಂತವಾಗಿ ಬಿಡುಗಡೆ ಮಾಡಿ. ಜಾವೇದ್ ಏನಾದರೂ ತಪ್ಪು ಮಾಡಿದ್ದಲ್ಲಿ, ಅವನ ಪರವಾಗಿ ನಾನು ಕ್ಷಮೆ ಕೇಳುವೆ. ನಮ್ಮ ಕುಟುಂಬದಲ್ಲಿ ದುಡಿಯುವ ಕೈ ಅವನೊಬ್ಬನೆ. ಮಗನೇ ನಮಗೆ ದಿಕ್ಕು. ಮಗನನ್ನು ಮರಳಿಸಿ' ಎಂದೂ ಅವರು ಮನವಿ ಮಾಡಿದ್ದಾರೆ.

ಜಾವೇದ್ ಅವರು ಶನಿವಾರ ಸಂಜೆ ಮಾಂಸ ತರಲೆಂದು ಮನೆಯಿಂದ ತೆರಳಿದ್ದು, ಬಳಿಕ ನಾಪತ್ತೆಯಾಗಿದ್ದಾರೆ. ಅವರ ಕಾರು ಪತ್ತೆಯಾಗಿರುವುದಾಗಿ ಕರೆ ಬಂದಿತ್ತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾರಿನಲ್ಲಿ ರಕ್ತದ ಕಲೆಗಳು ಪತ್ತೆಯಾಗಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಆದರೆ ಅಧಿಕಾರಿಗಳು ಇದನ್ನು ದೃಢೀಕರಿಸಿಲ್ಲ.

ಕುಕ್ಕರ್ ಬಾಂಬ್ ತಯಾರಿಸಲು ಅಫ್ಸರ್ ತರಬೇತಿ 5

ಮಣಿಪುರ: ಸಂಸದರ ನಿಯೋಗದಿಂದ ರಾಜ್ಯಪಾಲರ ಭೇಟಿ, ಮನವಿ ಪತ್ರ ಸಲ್ಲಿಕೆ

'ಮೌನ': 'ಇಂಡಿಯಾ' ಆಕ್ರೋಶ

ಇಂಫಾಲ್ (ಪಿಟಿಐ): ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರು ತಳೆದಿರುವ 'ಮೌನ'ವು ಲಜ್ಜೆಗೆಟ್ಟ ಔದಾಸೀನ್ಯಕ್ಕೆ ಸಾಕ್ಷಿಯಾಗಿದೆ ಎಂದು 'ಇಂಡಿಯಾ' ಸಂಸದರ ನಿಯೋಗ ಭಾನುವಾರ ಆಪಾದಿಸಿದೆ.

ಪ್ರಧಾನಿ ಅವರ ನಿರ್ಲಕ್ಷ್ಯವು ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯಗಳ ನಡುವೆ ಕೋಪ ಉಲ್ಬಣ ಹಾಗೂ ಪರಕೀಯ ಭಾವನೆ ಮೂಡಲು ಕಾರಣವಾಗಿದೆ. ವಿಳಂಬ ಮಾಡದೆ ಶಾಂತಿ ಕಾಪಾಡುವಂತೆ ಮೋದಿ ಅವರು, ನಾಗರಿಕರಿಗೆ ಮನವಿ ಮಾಡಬೇಕಿದೆ ಎಂದು ಒತ್ತಾಯಿಸಿದೆ.

ಸಂಘರ್ಷದಿಂದ ನಲುಗಿರುವ ಕಣಿವೆ ರಾಜ್ಯದ ವಸ್ತುಸ್ಥಿತಿಯ ಅವಲೋಕನಕ್ಕೆ ತೆರಳಿದ್ದ ನಿಯೋಗವು, ಭಾನುವಾರ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಸಂತ್ರಸ್ತರ ನೋವು ಆಲಿಸಿತು. ಬಳಿಕ ರಾಜಭವನಕ್ಕೆ ತೆರಳಿ ರಾಜ್ಯಪಾಲೆ ಅನುಸೂಯಾ ಉಯಿಕೆ ಅವರೊಟ್ಟಿಗೆ ಸದ್ಯದ ಸ್ಥಿತಿಗತಿ ಹಾಗೂ ಆಡಳಿತ ಯಂತ್ರದ ವೈಫಲ್ಯ ಕುರಿತು ಚರ್ಚಿಸಿತು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ಶಾಂತಿ ಪುನರ್ ಸ್ಥಾಪನೆ ಮತ್ತು ಪರಿಸ್ಥಿತಿಯು ಸಹಜ ಸ್ಥಿತಿಗೆ ಮರಳಲು ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕಿದೆ. ಈ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಿಕೊಡಬೇಕಿದೆ ಎಂದು ರಾಜ್ಯಪಾಲರನ್ನು ನಿಯೋಗವು ಕೋರಿತು.

ಸಂಘರ್ಷದಿಂದ ಎರಡೂ ಸಮುದಾಯಗಳ ಬದುಕಿನ ಬಂಡಿ ಹಳಿ ತಪ್ಪಿರುವುದನ್ನು ಈ ವೇಳೆ ಮನವರಿಕೆ ಮಾಡಿಕೊಟ್ಟಿತು. ಪರಿಹಾರ ಶಿಬಿರಗಳ ಶೋಚನೀಯ ಸ್ಥಿತಿ ಬಗ್ಗೆಯೂ ಗಮನ ಸೆಳೆಯಿತು. ಅಲ್ಲಿರುವ ಮಕ್ಕಳ ಸುರಕ್ಷತೆಗೆ ಅಗತ್ಯ ಕ್ರಮವಹಿಸಬೇಕಿದೆ ಎಂದು ಮನವಿ ಮಾಡಿತು.

ವಿದ್ಯಾರ್ಥಿಗಳ ಭವಿಷ್ಯವೂ ಅನಿಶ್ಚಿತವಾಗಿದ್ದು, ಅವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಅಗತ್ಯ ನೆರವು ಕಲ್ಪಿಸಬೇಕಿದೆ ಎಂದು ಒತ್ತಾಯಿಸಿದ ನಿಯೋಗವು, ಮನವಿ ಪತ್ರ ಸಲ್ಲಿಸಿತು.

ಕಾಂಗ್ರೆಸ್‌ನ ಅಧೀರ್ ರಂಜನ್ ಚೌಧರಿ ನೇತೃತ್ವದ ನಿಯೋಗದಲ್ಲಿ ಟಿಎಂಸಿಯ ಸುಶ್ಮಿತಾ ದೇವ್, ಜೆಎಂಎಂನ ಮಹುವಾ ಮಾಝಿ, ಡಿಎಂಕೆಯ ಕನಿಮೊಳಿ ಕರುಣಾನಿಧಿ, ಎನ್‌ಸಿಪಿಯ ಪಿ.ಪಿ. ಮೊಹಮ್ಮದ್ ಫೈಜಲ್ ಸೇರಿದಂತೆ 21 ಸಂಸದರು ಇದ್ದರು.

ಸಂಜಯ್ ರಾವುತ್ ವಾಗ್ದಾಳಿ

ಮುಂಬೈ (ಪಿಟಿಐ): ಹಿಂಸಾಚಾರ ಪೀಡಿತ ಮಣಿಪುರಕ್ಕೆ ಭೇಟಿ ನೀಡಿದ 'ಇಂಡಿಯಾ' ನಿಯೋಗವನ್ನು ಟೀಕಿಸಿದ ಬಿಜೆಪಿ ವಿರುದ್ಧ ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ವಾಗ್ದಾಳಿ ನಡೆಸಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತೋರಿಕೆಗಾಗಿ ನಿಯೋಗ ಭೇಟಿ ನೀಡಿದೆಯೆಂದು ಕಮಲ ಪಾಳಯ ದೂರಿರುವುದು ಅರ್ಥಹೀನ. ಸಂಘರ್ಷ ಸಂಬಂಧ ಪ್ರಧಾನಿ ಮೋದಿ ಮೊದಲು 'ಮೌನ' ಮುರಿಯಬೇಕು ಅಥವಾ ಸಂಸತ್‌ನಲ್ಲಿ ಹೇಳಿಕೆ ನೀಡಬೇಕು ಎಂದು ಆಗ್ರಹಿಸಿದರು.

ಮಣಿಪುರ ಕೂಡ ಭಾರತದ ಅವಿಭಾಜ್ಯ ಅಂಗವಾಗಿದೆ. ಅಲ್ಲಿರುವವರೂ ಭಾರತೀಯರೇ. ಸಂತ್ರಸ್ತರ ನೋವು ಆಲಿಸುವುದು ಪ್ರಧಾನಿಯ ಕರ್ತವ್ಯ. ಅವರು ಹೋಗದೇ ಇದ್ದುದಕ್ಕೆ ನಿಯೋಗ ಭೇಟಿ ನೀಡಿದೆ. ಇದನ್ನು ಕೇಂದ್ರ ಸಚಿವ ಅನುರಾಗ್ ಠಾಕೂರ್ ಟೀಕಿಸುವುದರಲ್ಲಿ ಅರ್ಥವಿಲ್ಲ ಎಂದರು.

ನಿಯೋಗದ ಸದಸ್ಯರು ಸಂತ್ರಸ್ತರನ್ನು ಭೇಟಿ ಮಾಡಿ ಅವರ ನೋವು ಆಲಿಸಿದ್ದಾರೆ. ಇದನ್ನು ಟೀಕಿಸುವ ಕ್ರೂರ ಸರ್ಕಾರ ಹಾಗೂ ರಾಜಕೀಯವನ್ನು ಹಿಂದೆಂದೂ ಕಂಡಿಲ್ಲ ಎಂದು ಪ್ರತಿಕ್ರಿಯಿಸಿದರು.

> **ಮನ್ ಕಿ ಬಾತ್‌ನಲ್ಲಿ ತಮ್ಮದೇ ಧ್ವನಿ ಆಲಿಸುವುದೆಂದರೆ ಮೋದಿಗೆ ಖುಷಿ. ಅದನ್ನು ಇತರರಿಗೆ ಕೇಳಿಸುವುದರಲ್ಲೂ ಆಸಕ್ತರಾಗಿದ್ದಾರೆ. ಆದರೆ, ಮಣಿಪುರ ಜನರ ನೋವು ಮಾತ್ರ ಅವರಿಗೆ ಕೇಳುತ್ತಿಲ್ಲ**
> **ಜೈರಾಮ್ ರಮೇಶ್,** ಪ್ರಧಾನ ಕಾರ್ಯದರ್ಶಿ, ಎಐಸಿಸಿ

ಇನ್ನೊಂದು ಸುದ್ದಿ 9

ಅಂತಿಮಗೊಳ್ಳದ ಸ್ಥಳ, ಕಸಾಪ ಜಿಲ್ಲಾಧ್ಯಕ್ಷರಿಗೆ ಅನಾರೋಗ್ಯ

ಡಿಸೆಂಬರ್‌ನಲ್ಲಿ ಸಮ್ಮೇಳನ ಅನುಮಾನ

• ಎಂ.ಎನ್.ಯೋಗೇಶ್

ಮಂಡ್ಯ: ನಗರದಲ್ಲಿ ಆಯೋಜಿಸಲು ನಿಗದಿಯಾಗಿರುವ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವು ಡಿಸೆಂಬರ್‌ನಲ್ಲಿ ನಡೆಯುವುದು ಕೆಲವು ಕಾರಣಗಳಿಂದಾಗಿ ಅನುಮಾನವಾಗಿದೆ.

ಸಮ್ಮೇಳನಕ್ಕೆ ಐದು ತಿಂಗಳಷ್ಟೇ ಬಾಕಿ ಉಳಿದಿದೆ. ಆದರೆ, ಇನ್ನೂ ಸ್ಥಳ ಅಂತಿಮಗೊಂಡಿಲ್ಲ. ಸಮಿತಿಗಳ ರಚನೆ ಪ್ರಕ್ರಿಯೆ ಶುರುವಾಗಿಲ್ಲ. ಜಿಲ್ಲಾ ಕ್ರೀಡಾಂಗಣ ಚಿಕ್ಕದಾಯಿತು ಎನ್ನುವ ಅಭಿಪ್ರಾಯ ವ್ಯಕ್ತವಾಗಿತ್ತು. ಹೀಗಾಗಿ ಮಂಡ್ಯ ಕೆರೆ ಮುಂದಿನ ಗದ್ದೆ ಬಯಲು ಹಾಗೂ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ ಬದಿಯ ಲೇಔಟ್ ಮೈದಾನವನ್ನು ಗುರುತಿಸಲಾಗಿತ್ತು. ಹೆಚ್ಚಿನ ಲೇಖಕರು ಕೆರೆ ಮುಂದಿನ ಗದ್ದೆಬಯಲಿನ ಸ್ಥಳದಲ್ಲಿ ಸಮ್ಮೇಳನ ನಡೆಸುವುದಕ್ಕೆ ಒಲವು ತೋರಿದ್ದರು. ಈ ಸ್ಥಳವನ್ನು ವೀಕ್ಷಿಸಿ ಮೂರು ತಿಂಗಳಾಗಿದ್ದರೂ ಅಂತಿಮ ನಿರ್ಣಯ ಕೈಗೊಂಡಿಲ್ಲ.

ಮಂಡ್ಯ ಕೆರೆ ಮುಂದಿನ ಗದ್ದೆ ಬಯಲು

ಗದ್ದೆ ಬಯಲಿನಲ್ಲಿ ಸಮ್ಮೇಳನ ನಡೆಸುವುದಾದರೆ ರೈತರಿಗೆ ಒಂದು ಅವಧಿಗೆ ಭತ್ತ ನಾಟಿ ಮಾಡುವುದು ಬೇಡ ಎಂದು ಜಿಲ್ಲಾಡಳಿತ ಸೂಚಿಸಬೇಕು. ಪರಿಹಾರದ ಭರವಸೆ ಕೊಡಬೇಕು. ಆದರೆ ಇದಾವುದೂ ಆಗಿಲ್ಲ.

ಜಿಲ್ಲಾಧ್ಯಕ್ಷರಿಗೆ ಅನಾರೋಗ್ಯ: ಸಮ್ಮೇಳನಕ್ಕೆ ಜಿಲ್ಲೆ ಆಯ್ಕೆಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ರವಿಕುಮಾರ್ ಚಾಮಲಾಪುರ ಅವರು ಅನಾರೋಗ್ಯಕ್ಕೆ ಒಳಗಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. ಇದು ಕೂಡ ಸಮ್ಮೇಳನದ ಚಟುವಟಿಕೆ ಚುರುಕುಗೊಳ್ಳದೇ ಇರಲು ಕಾರಣವಾಗಿದೆ.

'ಜಿಲ್ಲಾ ಘಟಕದ ಅಧ್ಯಕ್ಷರು ಮೂರು ತಿಂಗಳ ಹಿಂದೆಯೇ ಕನ್ನಡಪರ ಸಂಘಟನೆಗಳನ್ನು ಒಂದುಗೂಡಿಸಿ ಸಮ್ಮೇಳನದ ಚಟುವಟಿಕೆ ಆರಂಭಿಸಿದ್ದರು. ಅನಾರೋಗ್ಯದಿಂದ ಈಗ ಗುಣಮುಖರಾಗುತ್ತಿದ್ದಾರೆ. ಈ ನಡುವೆ ಕೇಂದ್ರ ಕಸಾಪ ಅಧ್ಯಕ್ಷರು ಸೂಚಿಸಿದರೆ ಚಟುವಟಿಕೆ ಮುಂದುವರಿಸುತ್ತೇವೆ. ಸ್ಥಳ ಅಂತಿಮಗೊಳಿಸುವ ಜೊತೆಗೆ ಸಮಿತಿಗಳ ರಚನೆಗೆ ಚಾಲನೆ ನೀಡಬೇಕು' ಎಂದು ಕಸಾಪ ಜಿಲ್ಲಾ ಘಟಕದ ಕಾರ್ಯದರ್ಶಿ ಕೃಷ್ಣೇಗೌಡ ಹುಸ್ಕೂರು ತಿಳಿಸಿದರು.

ಸಿ.ಎಂ ಭೇಟಿ ನಂತರ ನಿರ್ಧಾರ

'ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರೊಂದಿಗೆ ಸಭೆ ನಡೆಸಲಾಗಿದೆ. ಡಿಸೆಂಬರ್‌ನಲ್ಲೇ ಸಾಹಿತ್ಯ ಸಮ್ಮೇಳನ ನಡೆಸಲು ಪ್ರಯತ್ನಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ದಿನಾಂಕ ನಿಗದಿ ಮಾಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಿ ಶೀಘ್ರ ಸ್ಥಳ ಅಂತಿಮಗೊಳಿಸಲಾಗುವುದು' ಎಂದು ಕೇಂದ್ರ ಕಸಾಪ ಅಧ್ಯಕ್ಷ ಮಹೇಶ್ ಜೋಶಿ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



‘ಸಲಾಮಿ ಶಸ್ತ್ರ’, ‘ಅತಿ ಉತ್ಕೃಷ್ಟ ಸೇವಾ’ ಗೌರವ ಪ್ರದಾನ

ಯಲಹಂಕ: ದೇಶಕ್ಕಾಗಿ ಹೋರಾಡಿ ತ್ಯಾಗ- ಬಲಿದಾನ ಮಾಡಿರುವ ಯೋಧರ ಕುಟುಂಬದ ಸದಸ್ಯರಿಗೆ ‘ಸಲಾಮಿ ಶಸ್ತ್ರ’ ಹಾಗೂ ಸೇವಾ ಅವಧಿಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿ ನಿವೃತ್ತರಾದ ಯೋಧರಿಗೆ ‘ಅತಿ ಉತ್ಕೃಷ್ಟ ಸೇವಾ’ ಪದಕವನ್ನು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಕೇಂದ್ರದ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರದಾನ ಮಾಡಿ ಗೌರವಿಸಲಾಯಿತು.

ಸಿಆರ್‌ಪಿಎಫ್ ಕೇಂದ್ರದ ಕರ್ನಾಟಕ ಮತ್ತು ಕೇರಳ ವಿಭಾಗದ ಪೊಲೀಸ್ ಮಹಾನಿರ್ದೇಶಕಿ ಉಷಾ ಕಿರಣ್ ಕಂಡುಲ್ನ ಮಾತನಾಡಿದರು.

ವನಮಹೋತ್ಸವ: ಸಿಆರ್‌ಪಿಎಫ್ ಕೇಂದ್ರದ ಆವರಣದಲ್ಲಿ ಹಳೆಯದಾದ 3,431 ಮರಗಳನ್ನು ಕಡಿಯಲಾಗಿತ್ತು. ಈ ಜಾಗದಲ್ಲಿ ಬಿಬಿಎಂಪಿ ಹಾಗೂ ಅರಣ್ಯ ಇಲಾಖೆಯ ಸಹಯೋಗದಲ್ಲಿ ಸಾಮೂಹಿಕ ಗಿಡ ನೆಡುವ ಅಭಿಯಾನದಲ್ಲಿ 35 ಸಾವಿರ ಸಸಿ ನೆಡಲು ತೀರ್ಮಾನಿಸಲಾಗಿದೆ. ಈಗಾಗಲೇ 16 ಸಾವಿರ ಸಸಿಗಳನ್ನು ನೆಡಲಾಗಿದೆ. ಸಂಸ್ಥಾಪನಾ ದಿನಾಚರಣೆ ಅಂಗವಾಗಿ 500 ಸಸಿಗಳನ್ನು ನೆಡಲಾಗಿದೆ ಎಂದರು.

ಕೇಂದ್ರದ ಉಪ ಪೊಲೀಸ್ ಮಹಾನಿರ್ದೇಶಕ ಇಮಾನ್ಸು ಕುಮಾರ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬಿಬಿಎಂಪಿ ಅರಣ್ಯ ಇಲಾಖೆ ವಿಶೇಷ ಆಯುಕ್ತರಾದ ಪ್ರೀತಿ ಗೆಹ್ಲೋಟ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸರೀನಾ ಸಿಕ್ಕಲಿಗಾರ್ ಇದ್ದರು.

ಸಿಆರ್‌ಪಿಎಫ್ ಕೇಂದ್ರದ ಕರ್ನಾಟಕ ಮತ್ತು ಕೇರಳ ವಿಭಾಗದ ಪೊಲೀಸ್ ಮಹಾನಿರ್ದೇಶಕಿ ಉಷಾಕಿರಣ್ ಕಂಡುಲ್ನ ಸಸಿ ನೆಟ್ಟರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.

‘ಮೇಲ್ಸೇತುವೆಯಲ್ಲಿ ತ್ಯಾಜ್ಯ’

ಬಿಬಿಎಂಪಿ ಮತ್ತು ಬಿಡಿಎ ಅಧಿಕಾರಿಗಳ ಅಸಡ್ಡೆ ಹಾಗೂ ನಿರ್ಲಕ್ಷ್ಯದಿಂದ ಇತ್ತೀಚೆಗೆ ನಗರದಲ್ಲಿನ ಮೇಲ್ಸೇತುವೆಗಳು ಮಣ್ಣು ಹಾಗೂ ಕಸದ ರಾಶಿಯಿಂದ ಆವರಿಸಿಕೊಳ್ಳುತ್ತಿವೆ. ಇದಕ್ಕೆ ಹೊಸೂರು ರಸ್ತೆಯ ಡೇರಿ ಸರ್ಕಲ್ ಮೇಲ್ಸೇತುವೆ ಉತ್ತಮ ಉದಾಹರಣೆ. ಇಲ್ಲಿ ಮಣ್ಣನ್ನು ಒಂದೆಡೆ ರಾಶಿ ಹಾಕಿ ಇಡಲಾಗಿದ್ದು, ವಿಲೇವಾರಿ ಮಾಡಿಲ್ಲ. ಹಲವು ದಿನಗಳಿಂದ ಮಣ್ಣು ಹಾಗೇ ಇರುವುದರಿಂದ ಅಲ್ಲಿ ಗಿಡಗಳು ಸಹ ಬೆಳೆಯುತ್ತಿವೆ. ನಗರದ ಎಲ್ಲಾ ಮೇಲ್ಸೇತುವೆಗಳನ್ನು ಪರಿಶೀಲಿಸಿ, ಮಣ್ಣು ಹಾಗೂ ಕಸಗಳ ವಿಲೇವಾರಿಗೆ ಕ್ರಮವಹಿಸಬೇಕು. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇದೇ ರಸ್ತೆಗಳಲ್ಲಿ ಸಂಚರಿಸುತ್ತಿದ್ದರೂ ಈ ಬಗ್ಗೆ ಗಮನ ಹರಿಸದಿರುವುದು ವಿಪರ್ಯಾಸ. ಇನ್ನಾದರೂ ಎಚ್ಚೆತ್ತುಕೊಂಡು, ಈ ಬಗ್ಗೆ ಕೂಡಲೇ ಕ್ರಮವಹಿಸಬೇಕು.

ಶಿವಪ್ರಸಾದ್ ಎಸ್., ಕೆಂಪೇಗೌಡ ರಸ್ತೆ ಬಡಾವಣೆ

ಡೈರಿ ಸರ್ಕಲ್ ಮೇಲ್ಸೇತುವೆಯಲ್ಲಿ ಇರುವ ಮಣ್ಣಿನ ರಾಶಿ

‘ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ’

ನಗರದ ಹೃದಯ ಭಾಗದಲ್ಲಿರುವ ಪುನೀತ್ ರಾಜ್‌ಕುಮಾರ್ ರಸ್ತೆಯಲ್ಲಿ, ಬನಶಂಕರಿ 3ನೇ ಹಂತದ ಕತ್ರಿಗುಪ್ಪೆ ಬಳಿ ಇರುವ ಉದ್ಭವ ಆಸ್ಪತ್ರೆ ಎದುರಿಗೆ ಪಾದಚಾರಿ ಮಾರ್ಗದಲ್ಲಿಯೇ ಕಸ ಹಾಗೂ ಚರಂಡಿ ತ್ಯಾಜ್ಯದ ರಾಶಿ ಹಾಕಲಾಗಿದೆ. ಸಮೀಪವೇ ತಾಜಾ ತಿಂಡಿ ಹೋಟೆಲ್ ಇದೆ. ಇದರಿಂದ ಪಾದಚಾರಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಈ ರಸ್ತೆಯಲ್ಲಿ ಸಂಚರಿಸುವುದರಿಂದ ಪಾದಚಾರಿಗಳು ರಸ್ತೆ ಅಪಘಾತಕ್ಕೆ ಒಳಗಾಗುವ ಅಪಾಯ ಇದೆ. ಇನ್ನೊಂದೆಡೆ ಗಿಡಗಂಟಿಗಳು ಬೆಳೆದಿವೆ. ಇದರಿಂದ ಪಾದಚಾರಿ ಮಾರ್ಗ ಜನರಿಗೆ ನಿರುಪಯುಕ್ತವಾಗಿದೆ. ಆದ್ದರಿಂದ, ಆದಷ್ಟು ಬೇಗ ಕಸ-ತ್ಯಾಜ್ಯ ಹಾಗೂ ಗಿಡಗಂಟಿಗಳನ್ನು ತೆರವು ಮಾಡಿಸಿ, ಪಾದಚಾರಿಗಳು ಸಾಗಲು ಅವಕಾಶ ಮಾಡಿಕೊಡಬೇಕು.

ಜಿ.ಎಸ್.ಎಸ್. ಬಾಬು, ಇಟ್ಟಮಡು

ಕತ್ರಿಗುಪ್ಪೆ ಬಳಿ ಇರುವ ಉದ್ಭವ ಆಸ್ಪತ್ರೆ ಎದುರಿನ ಪಾದಚಾರಿ ಮಾರ್ಗದಲ್ಲಿ ತ್ಯಾಜ್ಯ ಹಾಕಿರುವುದು

‘ರಾಷ್ಟ್ರೀಯ ಹೆದ್ದಾರಿಯಲ್ಲಿ ಗುಂಡಿ’

ರಾಷ್ಟ್ರೀಯ ಹೆದ್ದಾರಿ 4ರ ತುಮಕೂರು ರಸ್ತೆಯ ಚಿಕ್ಕಬಿದರಕಲ್ಲು ಬಳಿ ರಸ್ತೆ ಗುಂಡಿ ಬಿದ್ದಿದೆ. ಇದರಿಂದ ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿವೆ. ವಾಹನಗಳು ವೇಗವಾಗಿ ಬಂದು, ಬ್ರೇಕ್ ಹಾಕುವುದರಿಂದ ಹಿಂಬದಿ ಸವಾರರು ವಾಹನಕ್ಕೆ ಗುದ್ದುವ ಸಾಧ್ಯತೆಯಿದೆ. ಈ ಮಾರ್ಗದಲ್ಲಿ ವಾಹನ ಓಡಿಸುವುದು ಬಹಳ ದುಸ್ತರವಾಗಿದೆ. ಗುಂಡಿ ಬಿದ್ದಿರುವ ಸ್ಥಳದಲ್ಲಿ ರಸ್ತೆಯ ಉಬ್ಬ ಸಹ ಇದೆ. ಇದು ಸುಗಮ ಸಂಚಾರಕ್ಕೆ ಅಡ್ಡಿಪಡಿಸುತ್ತದೆ. ಚಾಲಕರು ಗುಂಡಿಗಳನ್ನು ತಪ್ಪಿಸಲು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸುವುದರಿಂದ ವೃದ್ಧರು, ಮಕ್ಕಳು ಈ ರಸ್ತೆಯ ಮೂಲಕ ಓಡಾಡುವುದು ಕಷ್ಟ. ಮಳೆ ಬಂದರೆ ಗುಂಡಿಗಳು ನೀರಿನಿಂದ ಆವೃತವಾಗಿ, ಜೀವಕ್ಕೆ ಕುತ್ತು ತರಲಿವೆ. ಸಂಬಂಧಪಟ್ಟವರು ಕೂಡಲೇ ಕ್ರಮವಹಿಸಿ, ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಅನುರಾಧ ಎಸ್.ಎಚ್., ವಿನಾಯಕನಗರ

ಚಿಕ್ಕಬಿದರಕಲ್ಲು ಬಳಿ ರಸ್ತೆ ಗುಂಡಿ ಬಿದ್ದಿರುವುದು

‘ಪ್ರತಿನಿತ್ಯ ಪಾರಿವಾಳಗಳ ಸಾವು’

ಸುಬ್ಬಯ್ಯ ವೃತ್ತದ ಶಿವ ದೇವಾಲಯದ ಹಿಂಭಾಗ ಸೇರಿರುವ ಪಾರಿವಾಳ

ಲಾಲ್ ಬಾಗ್ ಸಂಪರ್ಕಿಸುವ ಸುಬ್ಬಯ್ಯ ವೃತ್ತದ (ಮಿಷನ್ ರಸ್ತೆ) ಶಿವ ದೇವಾಲಯದ ಹಿಂಭಾಗದಲ್ಲಿ ನಿತ್ಯ ಸಾರ್ವಜನಿಕರು ಇಲ್ಲಿನ ಪಾರಿವಾಳಗಳಿಗೆ ಆಹಾರ ಧಾನ್ಯಗಳನ್ನು ತಂದು ಹಾಕುತ್ತಾರೆ. ಕೆಲವರು ಚೀಲಗಟ್ಟಲೆ ಧವಸಧಾನ್ಯವನ್ನು ಈ ಸ್ಥಳದಲ್ಲಿ ಸುರಿಯುತ್ತಾರೆ. ಈ ಜಾಗವು ವೃತ್ತಾಕಾರವಾಗಿರುವುದರಿಂದ ಕೆಲವು ಪಾರಿವಾಳಗಳು ವಾಹನಗಳ ಚಕ್ರಕ್ಕೆ ಸಿಲುಕಿ, ಪ್ರತಿನಿತ್ಯ ಮೃತಪಡುತ್ತಿವೆ. ದವಸಧಾನ್ಯ ಹಾಕಿ ತಮ್ಮ ಕರ್ಮ ಕಳೆದುಕೊಳ್ಳಬೇಕೆನ್ನುವವರು ತಮ್ಮ ಮನೆಗಳಲ್ಲಿ ಪಾರಿವಾಳಗಳನ್ನು ಸಾಕಿಕೊಳ್ಳಲಿ.

ಸಿ.ಗಣೇಶ್ ಬಾಬು, ಸಂಪಂಗಿರಾಮನಗರ

‘ಅಡ್ಡ ರಸ್ತೆ ಸರಿಪಡಿಸಿ’

ಅಂದ್ರಹಳ್ಳಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಅಡ್ಡ ರಸ್ತೆಗಳು ಮಳೆ ಬಂದಲ್ಲಿ ರಸ್ತೆ ಸಂಪೂರ್ಣ ಕೆಸರುಮಯವಾಗುತ್ತವೆ. ಹಲವರು ಪ್ರತಿನಿತ್ಯ ಇಲ್ಲಿನ ರಸ್ತೆಗಳಲ್ಲಿ ಜಾರಿ ಬೀಳುತ್ತಿದ್ದಾರೆ. ಅನುಪಮ ಶಾಲೆ ಬಳಿಯ ಒಂದನೇ ಅಡ್ಡ ರಸ್ತೆಯ ವರಸಿದ್ಧಿ ನಗರದಲ್ಲಿ ಮೂರು ಅಡ್ಡ ರಸ್ತೆಗಳು ಅವ್ಯವಸ್ಥೆಯ ಆಗರವಾಗಿವೆ. ಇದರಿಂದಾಗಿ ವಾಹನ ಸಂಚಾರ ದುಸ್ತರವಾಗಿದ್ದು, ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿ ಬೀಳುವುದು ಸಾಮಾನ್ಯವಾಗಿದೆ. ಆಟೊ ರಿಕ್ಷಾ, ಕಾರು ಒಳಗೊಂಡಂತೆ ವಿವಿಧ ವಾಹನಗಳು ಕೆಸರಿನಲ್ಲಿ ಸಿಲುಕಿಕೊಳ್ಳುತ್ತಿವೆ. ನಿತ್ಯವೂ ಇಲ್ಲಿ ಸಾವಿರಾರು ಜನರು ಓಡಾಡುತ್ತಾರೆ. ರಾತ್ರಿ ವೇಳೆ ರಸ್ತೆಯಲ್ಲಿ ಕಾಲು ಇರಿಸಲಾಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮನೆಯಲ್ಲಿ ವಾಹನವಿದ್ದರೂ ಆಟೊ ರಿಕ್ಷಾಗಳಿಗೆ ದುಪ್ಪಟ್ಟು ಬಾಡಿಗೆ ನೀಡಿ, ಕೆಲಸಗಳಿಗೆ ಸಾಗಬೇಕಿದೆ.

ವರಸಿದ್ಧಿ ನಗರದ ಅಡ್ಡರಸ್ತೆ ಮಳೆಗೆ ಹಾಳಾಗಿರುವುದು

ನರಸಿಂಹಮೂರ್ತಿ, ವರಸಿದ್ಧಿ ನಗರ

‘ಕಿತ್ತುಹೋದ ಪಾದಚಾರಿ ಮಾರ್ಗ’

ಮೈಸೂರು ರಸ್ತೆಯಲ್ಲಿರುವ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಎದುರು ನಿರ್ಮಿಸಿರುವ ಪಾದಚಾರಿ ಮಾರ್ಗದ ಕಾಂಕ್ರಿಟ್ ಕಿತ್ತುಹೋಗಿದ್ದು, ಜನರು ಪ್ರಾಣಭಯದಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ದಿನಪೂರ್ತಿ ವಾಹನಗಳ ದಟ್ಟಣೆ ಇರುವ ಈ ರಸ್ತೆಯಲ್ಲಿ ಜನರ ಓಡಾಟವೂ ಹೆಚ್ಚಾಗಿದೆ. ಜನರ ಅನುಕೂಲಕ್ಕೆ ನಿರ್ಮಿಸಿದ್ದ ಪಾದಚಾರಿ ಮಾರ್ಗ ಕೆಲದಿನಗಳಲ್ಲಿಯೇ ಹಾಳಾಗಿದೆ. ಕಲ್ಲುಗಳು ಕಿತ್ತು ಹೊರಗೆ ಬಂದಿವೆ. ಇಂಥ ಪಾದಚಾರಿ ಮಾರ್ಗಗಳಲ್ಲಿ ಹೆಜ್ಜೆ ಹಾಕಲು ವೃದ್ಧರು, ಮಕ್ಕಳು ಹಾಗೂ ಮಹಿಳೆಯರು ಭಯಪಡುತ್ತಿದ್ದಾರೆ. ಪಾದಚಾರಿ ಮಾರ್ಗದಲ್ಲಿ ಕಲ್ಲುಗಳು ಕುಸಿದು, ರಂಧ್ರಗಳು ಉಂಟಾಗಿವೆ. ಮಾರ್ಗದಲ್ಲಿ ನಡೆದುಕೊಂಡು ಹೋಗುವ ವೇಳೆ ರಂಧ್ರದಲ್ಲಿ ಕಾಲು ಸಿಲುಕಿ, ಆಯತಪ್ಪಿ ಬೀಳುತ್ತಿದ್ದಾರೆ. ಪಾದಚಾರಿ ಮಾರ್ಗ ದುರಸ್ತಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಸ್ಪಂದನೆ ಸಿಕ್ಕಿಲ್ಲ.

ರಾಮಾಂಜನೇಯ, ಸ್ಥಳೀಯ ನಿವಾಸಿ



ಸ್ಯಾಟ್‌ಲೈಟ್ ಬಸ್ ನಿಲ್ದಾಣ ಎದುರಿನ ಪಾದಚಾರಿ ಮಾರ್ಗ ಕಿತ್ತುಹೋಗಿರುವುದು

ಸುದ್ದಿ 2 ನಿಮಿಷ

ಇಂದಿನಿಂದ ಮೆಟ್ರೊ ನಿಲ್ದಾಣದಲ್ಲಿ ಸ್ಯಾನಿಟರಿ ಪ್ಯಾಡ್ ಲಭ್ಯ

ಬೆಂಗಳೂರು: ಸ್ವಾಸ್ಥ ಟೆಕ್ನೋವೇಶನ್ಸ್ ಸಂಸ್ಥೆಯು ಎಂ.ಜಿ. ರಸ್ತೆ ಹಾಗೂ ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಲ್ಲಿ ಸ್ವಯಂಚಾಲಿತ ಡಿಜಿಟಲ್ ಸ್ಯಾನಿಟರಿ ಪ್ಯಾಡ್ ವಿತರಣಾ ಕಿಯೋಸ್ಕ್ ಯಂತ್ರಗಳನ್ನು ಸೋಮವಾರ ಸ್ಥಾಪಿಸಲಿದ್ದು, ಆ.2ರವರೆಗೆ ಮೂರು ದಿನಗಳು ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ವಿತರಿಸುವುದಾಗಿ ಸಂಸ್ಥೆ ಘೋಷಿಸಿದೆ.

‘ಸ್ವಾಸ್ಥ ಸ್ತ್ರೀ’ ಹೆಸರಿನ ಕಿಯೋಸ್ಕ್‌ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಚಾಲನೆ ನೀಡಲಿದ್ದಾರೆ. ವಾರದ ಎಲ್ಲಾ ದಿನ 24 ಗಂಟೆಗಳೂ ಈ ಕಿಯೋಸ್ಕ್ ಯಂತ್ರಗಳು ಕಾರ್ಯನಿರ್ವಹಿಸಲಿವೆ. ಮೂರು ವಿಧದ ಪ್ಯಾಡ್‌ಗಳ ಆಯ್ಕೆಯ ಅವಕಾಶ ಇರಲಿದೆ. ಕ್ಯೂಆರ್ ಕೋಡ್ ಆಧಾರಿತ ಹಣ ಪಾವತಿಗೆ ಅವಕಾಶ ನೀಡಲಾಗಿದೆ. ಪ್ರಾರಂಭಿಕ ಕೊಡುಗೆಯಾಗಿ 4 ಸಾವಿರ ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ ಎಂದು ಸಂಸ್ಥೆ ಹೇಳಿದೆ.

ನಾಳೆ ಉಚಿತ ಆರೋಗ್ಯ ತಪಾಸಣೆ

ರಾಜರಾಜೇಶ್ವರಿನಗರ: ಜಯಮ್ಮ ದಾಸೇಗೌಡ ಚಾರಿಟಬಲ್ ಟ್ರಸ್ಟ್, ಹುತ್ರಿ ಮತ್ತು ಶಾಂತ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಿಂದ ಆಗಸ್ಟ್ 1ರಂದು ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ಎಚ್.ಡಿ.ಬೆಟ್ಟೇಗೌಡ ತಿಳಿಸಿದ್ದಾರೆ.

ಬೆಳಿಗ್ಗೆ 8ರಿಂದ ಮಧ್ಯಾಹ್ನ 2 ಗಂಟೆಯ ವರೆಗೆ ಮಾಗಡಿ ಮುಖ್ಯರಸ್ತೆಯ ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಆವರಣದಲ್ಲಿ ಶಿಬಿರ ನಡೆಯಲಿದೆ. ಮಧುಮೇಹ, ರಕ್ತದೊತ್ತಡ, ಚರ್ಮರೋಗ, ಸ್ತ್ರೀರೋಗ ಸೇರಿದಂತೆ ವಿವಿಧ ರೋಗಗಳ ತಪಾಸಣೆ ನಡೆಯಲಿದೆ. ವೈದ್ಯರಾದ ಶಿವರಾಜ್‌ಗೌಡ, ಶಶಾಂಕ್ ಬಿ.ಎಸ್, ವೀರಭದ್ರಪ್ಪ, ದ್ರವ್ಯ ನೇತೃತ್ವದಲ್ಲಿ ಶಿಬಿರ ನಡೆಯಲಿದೆ. ಮಾಹಿತಿಗಾಗಿ ಮೊಬೈಲ್ 9845354812, 9481603177 ಸಂಪರ್ಕಿಸಬಹುದು.

ಪ್ರಜಾವಾಣಿ@75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಯಲಹಂಕ ‘ದೋಬಿ ಘಾಟ್’ ಉದ್ಘಾಟನೆ

ಯಲಹಂಕ: ಯಲಹಂಕ ಕೆರೆಯ ಆವರಣದಲ್ಲಿ ಬಿಬಿಎಂಪಿ ಅನುದಾನದಲ್ಲಿ ₹ 1 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಸ್ವಯಂ ವಿದ್ಯುತ್ ಚಾಲಿತ ಬಟ್ಟೆ ಶುದ್ಧೀಕರಣ ಯಂತ್ರೋಪಕರಣಗಳ ಘಟಕ ಹಾಗೂ ಯಲಹಂಕ ‘ದೋಬಿ ಘಾಟ್’ ಅನ್ನು ಶಾಸಕ ಎಸ್.ಆರ್. ವಿಶ್ವನಾಥ್ ಉದ್ಘಾಟಿಸಿದರು.

ಯಂತ್ರೋಪಕರಣಗಳಿಂದ ಬಟ್ಟೆ ಶುಚಿಗೊಳಿಸಿ, ಒಣಗಿಸಲು ಹಾಗೂ ಇಸ್ತ್ರಿಮಾಡುವ ಯಂತ್ರಗಳನ್ನು ನೀಡಬೇಕು ಎಂದು ಮಾಡಿದ್ದ ಮನವಿಯ ಮೇರೆಗೆ ನೂತನಕಟ್ಟಡ ನಿರ್ಮಿಸಿ, ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಶಾಸಕರು ತಿಳಿಸಿದರು.

ಅಟ್ಟೂರು ಕೆರೆಯಲ್ಲಿಯೂ ದೋಬಿಘಾಟ್ ನಿರ್ಮಿಸಬೇಕೆಂಬ ಬೇಡಿಕೆ ಇದೆ. ಅನುದಾನದ ಲಭ್ಯತೆ ನೋಡಿಕೊಂಡು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಬಿಬಿಎಂಪಿ ಅರಣ್ಯ ಇಲಾಖೆ ವತಿಯಿಂದ ಕೆರೆಯ ಆವರಣದಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಡಲಾಯಿತು.

ಜಲಸಿರಿ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಮು. ಕೃಷ್ಣಮೂರ್ತಿ, ಯಲಹಂಕ ವಲಯದ ಬಿಬಿಎಂಪಿ ಜಂಟಿ ಆಯುಕ್ತರಾದ ಡಾ.ಪೂರ್ಣಿಮಾ, ಉಪ ಆಯುಕ್ತರಾದ ಮಮತಾ, ಕಾರ್ಯಪಾಲಕ ಎಂಜಿನಿಯರ್ ಸುಧಾಕರ ರೆಡ್ಡಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಾಮಸಂಜೀವಯ್ಯ, ಯಲಹಂಕ ಮಡಿವಾಳರ ಸಂಘದ ಅಧ್ಯಕ್ಷ ವೈ.ಎನ್. ನಂಜಪ್ಪ, ಗೌರವಾಧ್ಯಕ್ಷ ಎಂ. ಚಂದ್ರಪ್ಪ, ಕಾರ್ಯಾಧ್ಯಕ್ಷ ವೈ.ಸಿ. ಪಿಳ್ಳಪ್ಪ, ಮುಖಂಡರಾದ ವಿ.ವಿ. ರಾಮಮೂರ್ತಿ, ದಶರಥ ಇದ್ದರು.

ಕಸದಿಂದ ಗೊಬ್ಬರ: ಘಟಕಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಹೆಸರಘಟ್ಟ ಹೋಬಳಿಯ ಸೊಣ್ಣೇನಹಳ್ಳಿ ಗ್ರಾಮದಲ್ಲಿ ನಿರ್ಮಿಸಲಾಗಿರುವ ಘನ ತ್ಯಾಜ್ಯ ವಿಲೇವಾರಿ ಘಟಕವನ್ನು ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಇತ್ತೀಚೆಗೆ ಉದ್ಘಾಟಿಸಿದರು.

ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂಬರ್ 79ರಲ್ಲಿ ₹25 ಲಕ್ಷ ವೆಚ್ಚದಲ್ಲಿ ತ್ಯಾಜ್ಯ ಘಟಕ ನಿರ್ಮಾಣ ಮಾಡಲಾಗಿದೆ. 2,400 ಚದರ ಅಡಿಗಳಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕಿಸಿ ಇಲ್ಲಿ ಗೊಬ್ಬರ ಮಾಡಲಾಗುತ್ತದೆ. ಮಳೆ ನೀರು ಸಂಗ್ರಹ ಪದ್ಧತಿಯನ್ನೂ ಘಟಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಘಟಕದ ವ್ಯಾಪ್ತಿಗೆ 12 ಗ್ರಾಮಗಳು ಬರಲಿದ್ದು, 1,689 ಕುಟುಂಬಗಳಿಗೆ ಅನುಕೂಲವಾಗಲಿದೆ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅನಸೂಯ ಮಾಹಿತಿ ನೀಡಿದರು.

ಹೆಸರಘಟ್ಟ ಹೋಬಳಿಯ ಸೊಣ್ಣೇನಹಳ್ಳಿ ಗ್ರಾಮದಲ್ಲಿ ನಿರ್ಮಿಸಲಾಗಿರುವ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಯಲಹಂಕ ಶಾಸಕ ಎಸ್‌ಆರ್ ವಿಶ್ವನಾಥ್ ಶುಕ್ರವಾರ ಚಾಲನೆ ನೀಡಿದರು

ಶಾಸಕ ಎಸ್.ಆರ್ ವಿಶ್ವನಾಥ್ ಮಾತನಾಡಿ, ‘ಪ್ಲಾಸ್ಟಿಕ್ ಬಳಕೆಯಿಂದ ಕಸದ ಸಮಸ್ಯೆ ದಿನೇ ದಿನೇ ಉಲ್ಬಣವಾಗುತ್ತಿದೆ. ಬೆಂಗಳೂರಿಗೆ ಹೊಂದಿಕೊಂಡಿರುವ ಗ್ರಾಮೀಣ ಪ್ರದೇಶಗಳು ಮುಂದೆ ನಗರೀಕರಣಗೊಳ್ಳುತ್ತವೆ. ಮುಂದೊಂದು ದಿನ ಸಮಸ್ಯೆ ಎದುರಾಗಬಾರದೆಂಬ ಕಾರಣಕ್ಕೆ ಈಗಲೇ ಬಹುತೇಕ ಗ್ರಾಮ ಪಂಚಾಯಿತಿಗಳಲ್ಲಿ ಸ್ವಚ್ಛ ಭಾರತ ಯೋಜನೆ ಮತ್ತು ಗ್ರಾಮ ಪಂಚಾಯಿತಿ ಅನುದಾನದೊಂದಿಗೆ ತ್ಯಾಜ್ಯ ವಿಲೇವಾರಿ ಘಟಕಗಳನ್ನು ನಿರ್ಮಿಸಲಾಗುತ್ತಿದೆ’ ಎಂದರು.

‘ಸೊಣ್ಣೇನಹಳ್ಳಿ ಘಟಕವು ಕೇವಲ 28 ದಿನಗಳಲ್ಲಿ ನಿರ್ಮಾಣವಾಗಿದೆ. ಈ ಘಟಕದಲ್ಲಿ ಗೊಬ್ಬರ ಉತ್ಪಾದಿಸಿ ಲಾಭವನ್ನು ಪಡೆಯಬಹುದು’ ಎಂದರು.

ಕಾರ್ಯಕ್ರಮದಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ದಿಬ್ಬೂರು ಜಯಣ್ಣ, ಮುಖಂಡ ಕಡತನಮಲೆ ಸತೀಶ್, ಹನುಮಯ್ಯ, ಪಂಚಾಯಿತಿ ಉಪಾಧ್ಯಕ್ಷೆ ರಮ್ಯಾ, ಪಿಡಿಒ ಭಾಸ್ಕರ್, ಕಾರ್ಯದರ್ಶಿ ರೂಪಾ, ಪಂಚಾಯಿತಿ ಸದಸ್ಯರು ಮತ್ತು ಸಿಬ್ಬಂದಿ ಹಾಜರಿದ್ದರು.

‘ಕಸ್ತೂರಿ ರಂಗನ್ ವರದಿ ಯಥಾವತ್ ಒಪ್ಪಿಕೊಳ್ಳಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಸ್ತೂರಿ ರಂಗನ್ ವರದಿ ಜಾರಿಗೆ ಬದ್ಧ’ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ನೀಡಿರುವ ಹೇಳಿಕೆಯಿಂದ ಮಲೆನಾಡು ನಿವಾಸಿಗಳಲ್ಲಿ ಆತಂಕ ಆರಂಭವಾಗಿದೆ. ಸಚಿವರು ತಮ್ಮ ಹೇಳಿಕೆಯನ್ನು ಕೂಡಲೇ ವಾಪಸ್ ಪಡೆಯಬೇಕು’ ಎಂದು ಮಲೆನಾಡು ಕರಾವಳಿ ಜನಪರ ಒಕ್ಕೂಟ ಆಗ್ರಹಿಸಿದೆ.

‘ಕಸ್ತೂರಿ ರಂಗನ್ ವರದಿಗಿಂತ ಮೊದಲು ಮಲೆನಾಡಿಗರ ಬದುಕಿನ ಬಗ್ಗೆ ಸಚಿವರು ಬದ್ಧತೆ ತೋರಿಸಬೇಕು. ಈಗಿರುವ ಅರಣ್ಯ ಕಾನೂನುಗಳೇ ಬಡ ಜನರನ್ನು ಬದುಕಲು ಬಿಡುತ್ತಿಲ್ಲ. ಇನ್ನು ಹೊಸ ಕಾನೂನು ಜಾರಿಗೆ ಬಂದರೆ ನಮ್ಮ ಬದುಕನ್ನೇ ಕಸಿದುಕೊಳ್ಳಲಿವೆ’ ಎಂದು ಒಕ್ಕೂಟದ ಪ್ರಧಾನ ಸಂಚಾಲಕ ಅನಿಲ್ ಹೊಸಕೊಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.

‘ಮಲೆನಾಡನ್ನು ಪರಿಸರ ಸೂಕ್ಷ್ಮ ವಲಯವಾಗಿ ಘೋಷಣೆ ಮಾಡುವುದು ಹಾಗೂ ಕಸ್ತೂರಿ ರಂಗನ್ ವರದಿಯನ್ನು ಯಥಾವತ್ ಒಪ್ಪಿಕೊಳ್ಳುವುದು ಸರಿಯಲ್ಲ. ಮಲೆನಾಡಿನ ನೆಲವಾಸಿಗಳಿಗೆ ತೊಂದರೆಯಾಗುವ ಎಲ್ಲ ಪ್ರಸ್ತಾವ ಕೈಬಿಡಬೇಕು. ಸಚಿವರು ತಮ್ಮ ಹೇಳಿಕೆ ವಾಪಸ್ ಪಡೆಯಬೇಕು’ ಎಂದು ಒತ್ತಾಯಿಸಿದ್ದಾರೆ.

‘ಈಗಿರುವ ಅರಣ್ಯ ಕಾನೂನುಗಳು ಮಲೆನಾಡು ಜಿಲ್ಲೆಯ ರೈತರನ್ನು ಬದುಕಲು ಬಿಡುತ್ತಿಲ್ಲ. ಅಡಿಕೆಗೆ ರೋಗ, ಮಳೆ ಹಾನಿ ಸಮಸ್ಯೆಗಳಿಂದ ಮಲೆನಾಡಿನ ರೈತರು ಆತಂಕದಲ್ಲಿದ್ದಾರೆ. ಆತ್ಮಹತ್ಯೆಯ ದಾರಿ ತುಳಿಯುತ್ತಿದ್ದಾರೆ. ನಮೂನೆ 94‘ಸಿ’, 94ಸಿಸಿ, 50, 53, 57ರ ಅಡಿಯಲ್ಲಿ ಅರ್ಜಿ ಸಲ್ಲಿಸಿರುವವರಿಗೆ ಬಡವರಿಗೆ ಶೀಘ್ರವೇ ಮಂಜೂರಾತಿ ನೀಡಬೇಕು ಮತ್ತು ಪ್ರಕ್ರಿಯೆಯನ್ನು ಸರಳೀಕರಣ ಮಾಡಬೇಕು. ಕೇಂದ್ರ ಸರ್ಕಾರದ ಎಲ್ಲ ವರದಿಗಳನ್ನು ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಅನುಷ್ಠಾನಕ್ಕೆ ತರುತ್ತದೆ ಎಂಬ ಭಯದಿಂದಲೇ ಮಲೆನಾಡಿನ ಜನರು ಈ ಬಾರಿ ಕಾಂಗ್ರೆಸ್ ಅನ್ನು ಬೆಂಬಲಿಸಿದ್ದಾರೆ. ಕಾಂಗ್ರೆಸ್ ಸರ್ಕಾರವಾದರೂ ಮಲೆನಾಡು ಜಿಲ್ಲೆಗಳ ರೈತರ ಪರವಾಗಿ ಕೆಲಸ ಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

‘ಪಾರಂಪರಿಕ ಅರಣ್ಯ ಕಾಯ್ದೆ ಅಡಿ ಭೂ ಮಂಜೂರಾತಿಯ ಕಾಲಮಿತಿ ಹಾಗೂ ಅಗತ್ಯ ದಾಖಲೆಗಳನ್ನು 75 ವರ್ಷದಿಂದ 25 ವರ್ಷಕ್ಕೆ ಇಳಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಶಿವಗಂಗೆ ಗ್ರಾ.ಪಂ. ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸಮೀಪದ ಸೋಂಪುರ ಹೋಬಳಿಯ ಶಿವಗಂಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಂಬಾಳುವಿನ ಕೆ.ಬಿ. ಪ್ರಭುದೇವ್ ಹಾಗೂ ಉಪಾಧ್ಯಕ್ಷೆಯಾಗಿ ಮಾಚನಹಳ್ಳಿಯ ಮಂಗಳಮ್ಮ ಆಯ್ಕೆ ಆಗಿದ್ದಾರೆ.

ಚುನಾವಣಾಧಿಕಾರಿ ಸಿಡಿಪಿಒ ನಾಗೇಶ್, ಪಿಡಿಒ ಸಾವಿತ್ರಮ್ಮ, ಪಂಚಾಯಿತಿ ಸದಸ್ಯರು, ಸಿಬ್ಬಂದಿ ಇದ್ದರು.

OFFICE OF THE CHIEF ENGINEER M.P.P.W.D BRIDGE CONSTRUCTION ZONE BHOPAL (M.P.)

TENDER NOTICE

NIT No- 03/CRF/C.E.(Bridge Zone) 2023-24 **Date 24.07.2023**

Online Tender for mentioned below are being invited. The Tender have been uploaded on the mptenders. system of Public Works Department on the Portal www.mptenders.gov.in Tender details are as below:-

Sl. No.	Tender No.	State	Nature of work	Name of work	Call No.	Cost of Project (PAC) (Rs. In Lack)	(EMD Fee / Tender Fee) All Tender Document & Other Document Submission
1	2	3	4	5	6	7	8
1.	2023_PWDRB_ 293790_1	Gwalior	Bridge Work	Construction of Four Lane Elevated Corridor / Flyover from Maharani Laxmibai Pratima to A.B. Road (N.H. 46) Near Girwai Police Chouki on Swarn Rekha River in Gwalior City (2nd Phase) in the state of Madhya Pradesh, on EPC Mode	First	**68437.00**	**Online Only**
				Total		**68437.00**	

The document can only be purchased online from the above website after making online payment. The last date & time for purchase of Document on line is Dated 08/09/2023 up to (17:30.) Detailed NIT and other details can be viewed on the above mentioned portal. Amendments to NIT, if any, would be published on website only, and not in newspaper.

Sd/- Chief Engineer, M.P. PWD
Bridge Construction Zone Bhopal

G-17507/23

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TEACHERS
MATHS, KANNADA, COMPUTERS (P.T/F.T)
Whatsapp 9353111888.
walk-in 11am-2pm BARIS HIGH SCHOOL, Haines Road, Near Coles Park.

BUSINESS

Business Offers

Finance

NRI'S INVESTMENT
And Finance Available
On Low Interest
Against
Properties,Land&
Building,Sites,Flats,
Converted&
Agriculture Lands
Call:7204995189

DH ಪ್ರಜಾವಾಣಿ
Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

REAL ESTATE SELLING

Commerical

Jayanagar

JAYANAGAR NEAR
Asoka Pillar
Commercial Building
Fetching a Rent
5.25Lakhs Per-Month
Price 11.50 Cr.
7829203369

PERSONAL

Change of Name

I, CHETAN Devarajulu S/O Devarajulu.S born on 03-05-1981 and residing at No-7, 2nd Cross, V.Y Laksmiah Layout, Horamavu, Bangalore have changed my name to Chetan Deva vide affidavit dated 28.07.2023 at Bangalore.

I INDIRA Kyalkond have changed my name to Indira Katti N residing @ 57 Rajatadri Layout Kothnur Dinne JP Nagar Bangalore-78 under Notary D K Rameshappa

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ADMISSION CORNER

MCM
MQI COLLEGE OF MANAGEMENT
Recognised by Govt. of Karnataka
Approved by AICTE, New Delhi

The Management *Congratulates*
The Director, Faculty and Students for
Continuously Securing
MBA 100% Result
(All First Class and First-Class Distinctions)
In the 2nd Semester Results of 2021 – 23 batch

Admissions Open
for 2023 – 2025 Batch
Avail Merit
SCHOLARSHIP* IN MBA
REGISTER NOW
Last Date:
04-08-2023
www.mcm.edu.in

*** Merit in MBA Admission Test - MCMAT**
Day & Date of MCMAT: Sunday, August 06, 2023
Time: 10:30 – 11:30am | Venue: MCM Campus

SCAN THE QR
Campus Address:
#8, Bore Bank Road, Benson Town
Bengaluru – 560 046

E-Mail: mqicollegeofmanagement@gmail.com
Website: www.mcm.edu.in
Contact : 080 – 48904713
Whatsapp : +91 7975961901
ROUNAQH

ಗುತ್ತಿಗೆದಾರನಿಗೆ ₹ 25 ಲಕ್ಷ ವಂಚನೆ

₹2,000 ಮುಖಬೆಲೆ ನೋಟು ರದ್ದಾಗುವ ನೆಪ ಹೇಳಿ ಹಣ ಪಡೆದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 500 ಮುಖಬೆಲೆ ನೋಟುಗಳನ್ನು ನೀಡಿದರೆ ಕಮಿಷನ್ ಸಮೇತ ₹ 2,000 ಮುಖಬೆಲೆಯ ನೋಟುಗಳನ್ನು ವಾಪಸು ನೀಡುವುದಾಗಿ ಹೇಳಿ ನಗರದ ಗುತ್ತಿಗೆದಾರರೊಬ್ಬರಿಂದ ₹ 25 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ಗುತ್ತಿಗೆದಾರ ಸುರೇಶ್ ದೂರು ನೀಡಿದ್ದಾರೆ. ಆರೋಪಿಗಳಾದ ಶಿವಕುಮಾರ್, ಶ್ರೀನಿವಾಸ್ ಹಾಗೂ ಶಿವು ವಿರುದ್ಧ ಎಫ್ಐಆರ್ ದಾಖಲಾಗಿದೆ. ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಿ ಕಮಿಷನರ್ ಆದೇಶ ಹೊರಡಿಸಿದ್ದಾರೆ. ಸಿಸಿಬಿ ಅಧಿಕಾರಿಗಳು, ತನಿಖೆ ಮುಂದುವರಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನೋಟು ರದ್ದಾಗುವುದಾಗಿ ಹೇಳಿ ಕೃತ್ಯ: 'ದೂರುದಾರರಿಗೆ ಸ್ನೇಹಿತರ ಮೂಲಕ ಆರೋಪಿಗಳ ಪರಿಚಯವಾಗಿತ್ತು. '₹2000 ಮುಖಬೆಲೆಯ ನೋಟುಗಳನ್ನು ಕೇಂದ್ರ ಸರ್ಕಾರ ರದ್ದು ಮಾಡುತ್ತಿದೆ. ನಮ್ಮ ಬಳಿ ನೂರಾರು ಕೋಟಿ ಇದ್ದು, ಎಲ್ಲವೂ ₹ 2,000 ಮುಖಬೆಲೆ ನೋಟುಗಳಿವೆ. ನೀವು ₹ 500 ಮುಖಬೆಲೆ ನೋಟುಗಳನ್ನು ಕೊಟ್ಟರೆ, ಕಮಿಷನ್ ಸಮೇತ ₹ 2,000 ಮುಖಬೆಲೆಯ ನೋಟುಗಳನ್ನು ಕೊಡುತ್ತೇವೆ' ಎಂಬುದಾಗಿ ಆರೋಪಿಗಳು ಹೇಳಿದ್ದರು' ಎಂದು ಮೂಲಗಳು ತಿಳಿಸಿವೆ.

'ಆರೋಪಿಗಳ ಮಾತು ನಂಬಿದ್ದ ದೂರುದಾರ, ಹಣ ನೀಡಲು ಒಪ್ಪಿದ್ದರು. ₹ 25 ಲಕ್ಷ ಕೊಟ್ಟರೆ, ₹ 37.50 ಲಕ್ಷ ವಾಪಸು ನೀಡುವುದಾಗಿ ಆರೋಪಿಗಳು ಪುನಃ ಹೇಳಿದ್ದರು. ಅದನ್ನೂ ದೂರುದಾರ ನಂಬಿದ್ದರು' ಎಂದು ಹೇಳಿವೆ.

ನೆಲ್ಲೂರಿಗೆ ಕರೆಸಿ ಹಣ ಪಡೆದಿದ್ದ ಆರೋಪಿಗಳು: 'ಹಣ ತೆಗೆದುಕೊಂಡು ಮಂತ್ರಾಲಯಕ್ಕೆ ಬರುವಂತೆ ಆರೋಪಿಗಳು ಹೇಳಿದ್ದರು. ದೂರುದಾರ ಸುರೇಶ್, ಮಂತ್ರಾಲಯಕ್ಕೆ ಹೋಗಲು ಸಜ್ಜಾಗಿದ್ದರು. ಕೊನೆಗಳಿಗೆಯಲ್ಲಿ ಸ್ಥಳ ಬದಲಿಸಿದ್ದ ಆರೋಪಿಗಳು, ತಿರುಪತಿಗೆ ಬನ್ನಿ ಎಂದಿದ್ದರು. ಕೆಲ ಹೊತ್ತಿನ ಬಳಿಕ, ಪುನಃ ಸ್ಥಳ ಬದಲಿಸಿ ನೆಲ್ಲೂರಿಗೆ ಬರುವಂತೆ ತಿಳಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೆಲ್ಲೂರಿಗೆ ಹೋಗಿದ್ದ ದೂರುದಾರರನ್ನು ಭೇಟಿಯಾಗಿದ್ದ ಆರೋಪಿ, ಕಚೇರಿಯೊಂದಕ್ಕೆ ಕರೆದೊಯ್ದು ₹ 2,000 ಮುಖಬೆಲೆಯ ನೋಟುಗಳನ್ನು ತೋರಿಸಿದ್ದ. ನಂತರ, ದೂರುದಾರರ ಬಳಿಯ ₹ 5,00 ಮುಖಬೆಲೆಯ ನೋಟುಗಳನ್ನು ಒಳಗೊಂಡ ₹ 25 ಲಕ್ಷ ಪಡೆದಿದ್ದ. ಕಚೇರಿಯಲ್ಲಿ ಕಾಯುವಂತೆ ಹೇಳಿ ಹೊರಟು ಹೋಗಿದ್ದ ವ್ಯಕ್ತಿ, ವಾಪಸು ಬಂದಿರಲಿಲ್ಲ.'

'ನೆಲ್ಲೂರು ಟೋಲ್‌ಗೇಟ್ ಬಳಿ ಕಾರಿನಲ್ಲಿ ಹೋದರೆ ಹಣ ನೀಡುವುದಾಗಿ ಆರೋಪಿಗಳು ಹೇಳಿದ್ದರು. ನಂತರ, ದೂರುದಾರ ಟೋಲ್‌ಗೇಟ್ ಬಳಿ ಹೋಗಿದ್ದರು. ಆದರೆ, ಯಾವುದೇ ಹಣ ಸಿಕ್ಕಿರಲಿಲ್ಲ. ಆರೋಪಿಗಳಿಗೆ ಕರೆ ಮಾಡಿದಾಗ, ಬೆಂಗಳೂರಿಗೆ ಬಂದ ನಂತರ ಹಣ ನೀಡುವುದಾಗಿ ಪುನಃ ಹೇಳಿದ್ದರು. ದೂರುದಾರ ನಗರಕ್ಕೆ ಬಂದಾಗ, ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಫೋಟಕ ಸಂಗ್ರಹ: ಮೂವರ ಬಂಧನ

ಬೆಂಗಳೂರು: ಮನೆಯಲ್ಲಿ ಅಕ್ರಮವಾಗಿ ಸ್ಫೋಟಕಗಳನ್ನು ಸಂಗ್ರಹಿಸಿದ್ದ ಮೂವರು ಆರೋಪಿಗಳನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೆಸರಘಟ್ಟ ಬಳಿಯ ಕಲ್ಲು ಗುಡ್ಡದಹಳ್ಳಿ ನಿವಾಸಿಗಳಾದ ಶಂಕರ್ (30), ಕುಮಾರ್ (21) ಹಾಗೂ ಶ್ರೀನಿವಾಸ್ ಬಂಧಿತರು. ಸಲ್ಫರ್ ಪೌಡರ್, ನೈಟ್ರೇಟ್, ಸ್ಫೋಟಕ ಮದ್ದು ಹಾಗೂ ರಾಸಾಯನಿಕ ಪೇಸ್ಟ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೂವರು ಆರೋಪಿಗಳು, ಬಂಡೆಗಳನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಕಲ್ಲು ಗುಡ್ಡದಹಳ್ಳಿಯಲ್ಲಿ ಸಣ್ಣ ಪ್ರಮಾಣದ ಕ್ವಾರಿಗಳಿದ್ದು, ಅಲ್ಲಿ ಕಲ್ಲುಗಳನ್ನು ಒಡೆಯಲು ಸ್ಫೋಟಕಗಳನ್ನು ಬಳಸಲಾಗುತ್ತಿತ್ತು. ಈ ಬಗ್ಗೆ ಆರೋಪಿಗಳು ಹೇಳಿಕೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ. 'ಮನೆಯಲ್ಲಿ ಸ್ಫೋಟಕಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದ ಬಗ್ಗೆ ಮಾಹಿತಿ ಬಂದಿತ್ತು. ಪಿಎಸ್ಐ ನೇತೃತ್ವದ ತಂಡ ಮನೆಯಲ್ಲಿ ಶೋಧ ನಡೆಸಿತ್ತು. ಅದೇ ಸಂದರ್ಭದಲ್ಲಿ ಸ್ಫೋಟಕಗಳು ಪತ್ತೆಯಾದವು. ಬಳಿಕ, ಮೂವರನ್ನು ಬಂಧಿಸಲಾಯಿತು.'

'ಆರೋಪಿಗಳ ವಿರುದ್ಧ ಈ ಹಿಂದೆ ಯಾವುದೇ ಪ್ರಕರಣಗಳಿಲ್ಲ. ಬಂಡೆ ಒಡೆಯಲು ಸ್ಫೋಟಕ ತಂದಿದ್ದಾಗಿ ಆರೋಪಿಗಳು ಹೇಳುತ್ತಿದ್ದಾರೆ' ಎಂದು ಮೂಲಗಳು ಹೇಳಿವೆ.

ಮರಕ್ಕೆ ಕಾರು ಡಿಕ್ಕಿ: ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಮರಕ್ಕೆ ಕಾರು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಚಾಲಕ ನಿಖಿಲ್‌ಕುಮಾರ್ (35) ಮೃತಪಟ್ಟಿದ್ದಾರೆ.

'ತಾತಗುಣಿ ನಿವಾಸಿ ನಿಖಿಲ್‌ಕುಮಾರ್, ಕನಕಪುರದಿಂದ ಬೆಂಗಳೂರಿನತ್ತ ಕಾರಿನಲ್ಲಿ ಬರುತ್ತಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ನೈಸ್ ರಸ್ತೆಯ ಮಾಗಡಿ ಟೋಲ್‌ಗೇಟ್ ಬಳಿಯ ವೃಷಭಾವತಿ ಸೇತುವೆ ಬಳಿ ನಿಖಿಲ್ ಹೊರಟಿದ್ದರು. ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ್ದ ಕಾರು, ಪಾದಚಾರಿ ಮಾರ್ಗಕ್ಕೆ ನುಗ್ಗಿ ಮರಕ್ಕೆ ಡಿಕ್ಕಿ ಹೊಡೆದು ಉರುಳಿಬಿದ್ದಿತ್ತು. ಕಾರು ಭಾಗಶಃ ಜಖಂಗೊಂಡಿತ್ತು.

ತೀವ್ರ ಗಾಯಗೊಂಡು ನಿಖಿಲ್ ಕುಮಾರ್ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

ಮಹದೇವಪುರದ ಹಗದೂರು ವಾರ್ಡ್ ವ್ಯಾಪ್ತಿಯಲ್ಲಿ ಫಲಾನುಭವಿಗಳಿಗೆ ವಲಯ ಜಂಟಿ ಆಯುಕ್ತೆ ದಾಕ್ಷಾಯಿಣಿ ಅವರು ಹೊಲಿಗೆ ಯಂತ್ರಗಳನ್ನು ವಿತರಿಸಿದರು

ಹೊಲಿಗೆ ಯಂತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ವಲಯ ಹಗದೂರು ವಾರ್ಡ್ ವ್ಯಾಪ್ತಿಯಲ್ಲಿ ಸ್ವಾವಲಂಬಿ ಜೀವನ ಸಾಗಿಸಲು ವಲಯ ಜಂಟಿ ಆಯುಕ್ತೆ ದಾಕ್ಷಾಯಿಣಿ ಅವರು ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಿದರು.

ಬಿಬಿಎಂಪಿ ವ್ಯಾಪ್ತಿಯ ಎಲ್ಲ 8 ವಲಯಗಳಲ್ಲಿ ಕಲ್ಯಾಣ ವಿಭಾಗದ ವತಿಯಿಂದ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ನೀಡಲಾಗುತ್ತಿದೆ. 2019 ರಿಂದ 22ರ ವರೆಗೆ ಹೊಲಿಗೆ ತರಬೇತಿ ಪಡೆದಿದ್ದ 15 ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

'ಸ್ವಾವಲಂಬಿ ಜೀವನ ಕಟ್ಟಿಕೊಳ್ಳಲು 4 ವರ್ಷಗಳ ಹಿಂದೆ ಹೊಲಿಗೆ ತರಬೇತಿ ಪಡೆದೆ. ಆದರೆ, ಹೊಲಿಗೆ ಯಂತ್ರ ಸಿಕ್ಕಿರಲಿಲ್ಲ. ವಲಯ ಜಂಟಿ ಆಯುಕ್ತರು ಕಾಳಜಿ ವಹಿಸಿದ್ದರಿಂದ ಈಗ ಹೊಲಿಗೆ ಯಂತ್ರ ಸಿಕ್ಕಿದೆ' ಎಂದು ಫಲಾನುಭವಿ ಕುಸುಮಾ ಅಭಿಪ್ರಾಯ ಹಂಚಿಕೊಂಡರು.

ಮನೋಗಣಿತ ಉತ್ಸವ

ಬ್ರೈನೋಬ್ರೇನ್ ಇಂಟರ್‌ನ್ಯಾಷನಲ್ ಸಂಸ್ಥೆ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಬ್ರೈನೋಬ್ರೇನ್ 2023' ಚಿಣ್ಣರ ಮನೋಗಣಿತ ಉತ್ಸವದಲ್ಲಿ ಮಕ್ಕಳೊಂದಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆನಂದ ಸುಬ್ರಮಣ್ಯಮ್ ಹಾಗೂ ಪ್ರಾದೇಶಿಕ ನಿರ್ದೇಶಕ ಅರುಳ್ ಸುಬ್ರಮಣ್ಯಮ್ ಇದ್ದಾರೆ

ಪುದುಶ್ಶೇರಿ ಹೆದ್ದಾರಿಯಲ್ಲಿ ಕಾರು ಅಡ್ಡಗಟ್ಟಿ ₹4.5 ಕೋಟಿ ದರೋಡೆ

ಪಾಲಕ್ಕಾಡ್ (ಕೇರಳ) (ಪಿಟಿಐ): ಇಲ್ಲಿಗೆ ಸಮೀಪದ ಪುದುಶ್ಶೇರಿಯ ಹೆದ್ದಾರಿಯಲ್ಲಿ, ಬೆಂಗಳೂರಿನಿಂದ ಮಲಪ್ಪುರಂ ಕಡೆಗೆ ಹೋಗುತ್ತಿದ್ದ ಕಾರನ್ನು ಸಿನೀಮಿಯ ರೀತಿ ಅಡ್ಡಗಟ್ಟಿದ ದರೋಡೆಕೋರರ ಗುಂಪೊಂದು, ಕಾರಿನಲ್ಲಿದ್ದವರ ಮೇಲೆ ದಾಳಿ ನಡೆಸಿ, ಅವರ ಬಳಿ ಇದ್ದ ₹ 4.5 ಕೋಟಿ ನಗದು ದೋಚಿಕೊಂಡು ಪರಾರಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುಮಾರು 15 ಮಂದಿ ದರೋಡೆಕೋರರ ತಂಡವು ಶನಿವಾರ ನಸುಕಿನ 3 ಗಂಟೆ ಸುಮಾರಿಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರಿ ಟ್ರಕ್‌ವೊಂದನ್ನು ಆಯಕಟ್ಟಿನ ಸ್ಥಳದಲ್ಲಿ ನಿಲ್ಲಿಸಿ, ಕಾರನ್ನು ಅಡ್ಡಗಟ್ಟಿದೆ. ಕಾರಿನಲ್ಲಿದ್ದವರ ಮೇಲೆ

ಅಪರಾಧ ಸುದ್ದಿ

ದಾಳಿ ನಡೆಸಿ, ಹಣ ಕಸಿದು ಪರಾರಿಯಾಗಿದ್ದಾರೆ. ದಾಳಿಗೊಳಗಾದ, ಕಾರಿನಲ್ಲಿದ್ದ ಮೂವರು ಪ್ರಯಾಣಿಕರು ಶನಿವಾರ ರಾತ್ರಿ ಪಾಲಕ್ಕಾಡ್ ಜಿಲ್ಲೆಯ ಕಸಬಾ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಹಲವು ಕಾರುಗಳಲ್ಲಿ ಬಂದಿರುವ ದರೋಡೆಕೋರರ ತಂಡವು, ಕಾರಿನಲ್ಲಿದ್ದ ಮೂವರ ಮೇಲೆ ದಾಳಿ ಮಾಡಿ, ಅವರ ಬಳಿ ಇದ್ದ ನಗದು ಲೂಟಿ ಮಾಡಿದೆ. ಅಲ್ಲದೆ, ಅವರನ್ನು ತಮ್ಮ ವಾಹನದಲ್ಲಿ ಕರೆದೊಯ್ದು ತ್ರಿಶ್ಶೂರ್ ಬಳಿ ವಾಹನದಿಂದ ಕೆಳಕ್ಕೆ ಎಸೆದು ಹೋಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಟೋಲ್ ಬೂತ್‌ಗಳಲ್ಲಿರುವ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಲಾಗಿದೆ. ಆದರೆ, ದಾಳಿಕೋರರು ತಮ್ಮ ಕಾರುಗಳಿಗೆ ನಕಲಿ ಸಂಖ್ಯೆಯ ನೋಂದಣಿ ಫಲಕಗಳನ್ನು ಬಳಸಿರುವುದು ಕಂಡುಬಂದಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಕಾರು ಬೆಂಗಳೂರಿಂದ ಮಲಪ್ಪುರಂಗೆ ತೆರಳುತ್ತಿತ್ತು. ಹಣದ ಮೂಲದ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಾಯಿ – ಮಕ್ಕಳ ವಿಭಾಗ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ವರ್ತೂರಿನಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಿರ್ಮಿಸಿದ ನವೀಕೃತ 'ತಾಯಿ ಮತ್ತು ಮಕ್ಕಳ ವಿಭಾಗ'ದ ನೂತನ ಕಟ್ಟಡ ವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಮತ್ತು ಶಾಸಕಿ ಮಂಜುಳಾ ಲಿಂಬಾವಳಿ ಉದ್ಘಾಟಿಸಿದರು.

ಪ್ರಾಥಮಿಕ ಆರೋಗ್ಯ ಕ್ಷೇಂದ್ರವನ್ನು ಉತ್ತಮ ದರ್ಜೆಗೆ ಏರಿಸುವ ಉದ್ದೇಶದಿಂದ ಹೊಸದಾಗಿ ನವೀಕೃತ ಮಾಡುವ ಜೊತೆಗೆ ಉತ್ತಮ ಸೌಲಭ್ಯಗಳನ್ನು ನೀಡಲಾಗಿದೆ. ಹಲವಾರು ದಾನಿಗಳು ಸಹಕರಿಸಿದ್ದಾರೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

'ಬೆಂಗಳೂರಿನಲ್ಲಿ ಈ ಹಿಂದೆ ಕೋವಿಡ್ ವೇಳೆ ಎಲ್ಲಾ ನಗರ ಆರೋಗ್ಯ ಕೇಂದ್ರಗಳನ್ನು ಬಿಬಿಎಂಪಿಗೆ ಹಸ್ತಾಂತರ ಮಾಡಲಾಗಿತ್ತು. ಈಗ ಸರ್ಕಾರದ ವ್ಯಾಪ್ತಿಗೆ ಒಳಪಡಿಸುವ ಚಿಂತನೆ ನಡೆಸಿದೆ. ಬೆಂಗಳೂರು ಹೊರ ವಲಯದಲ್ಲಿರುವ ಆರೋಗ್ಯ ಕೇಂದ್ರಗಳನ್ನು ವಾಪಸ್ಸು ಪಡೆದು ಉತ್ತಮ ಸೇವೆ ನೀಡಲಾಗುವುದು' ಎಂದರು.

ವರ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರದ 'ತಾಯಿ – ಮಕ್ಕಳ ವಿಭಾಗ'ದ ಕಟ್ಟಡವನ್ನು ಸಚಿವ ದಿನೇಶ್ ಗುಂಡೂರಾವ್, ಶಾಸಕಿ ಮಂಜುಳಾ ಉದ್ಘಾಟಿಸಿದರು.

ಸರ್ಕಾರಗಳು ಬಡವರಿಗೆ ಹಲವಾರು ಯೋಜನೆಗಳನ್ನು ನೀಡುತ್ತಿದ್ದು, ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಸೂಕ್ತ ಚಿಕಿತ್ಸೆ ನೀಡಬೇಕು ಎಂದು ಶಾಸಕಿ ಅರವಿಂದ ಲಿಂಬಾವಳಿ ಅಧಿಕಾರಿಗಳಿಗೆ ಸೂಚಿಸಿದರು.

ಆರೋಗ್ಯ ಮತ್ತು ಕುಟುಂಬ ಇಲಾಖೆ ನಿರ್ದೇಶಕಿ ಡಾ.ಇಂದುಮತಿ, ಅಂಜಲಿ, ಡಿಎಚ್‌ಒ ರವೀಂದ್ರ ಮೇಟಿ, ಮುಖಂಡರಾದ ಮನೋಹರ ರೆಡ್ಡಿ, ಮಹೇಂದ್ರ ಮೋದಿ, ವರ್ತೂರು ಶ್ರೀಧರ್, ಸುರೇಶ್, ಸುನೀಲ್ ಇದ್ದರು.

ಪರಮೇಶ್ವರ ಹೆಗಡೆಗೆ 'ಸಾರ್ಥಕ ಸಾಧಕ' ಪ್ರಶಸ್ತಿ

ಬೆಂಗಳೂರು: ಯಕ್ಷ ಸಿಂಚನ ಟ್ರಸ್ಟ್ ನೀಡುವ ಸಾರ್ಥಕ ಸಾಧಕ ಪ್ರಶಸ್ತಿಗೆ ಯಕ್ಷಗುರು ಐನಬೈಲ್ ಪರಮೇಶ್ವರ ಹೆಗಡೆ ಅವರನ್ನು ಆಯ್ಕೆ ಮಾಡಲಾಗಿದೆ.

40 ವರ್ಷಕ್ಕೂ ಅಧಿಕ ಕಾಲದಿಂದ ಯಕ್ಷಗಾನ ಕ್ಷೇತ್ರದಲ್ಲಿ ಇರುವ ಐನಬೈಲ್ ಅವರಿಗೆ ಉದಯ ಕಲಾ–ಸಂಘದಲ್ಲಿ ಆ.6ರಂದು ನಡೆಯಲಿರುವ ಯಕ್ಷಸಿಂಚನ ಟ್ರಸ್ಟ್‌ನ 14ನೇ ವರ್ಷದ ಬಡಗುತಿಟ್ಟು ಪೌರಾಣಿಕ ಯಕ್ಷೋತ್ಸವದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಟ್ರಸ್ಟ್‌ನ ಕಾರ್ಯದರ್ಶಿ ತಿಳಿಸಿದ್ದಾರೆ.

ಪರಮೇಶ್ವರ ಹೆಗಡೆ

ಮೋದಿ ನಡೆ ಆತಂಕಕಾರಿ ಬೆಳವಣಿಗೆ: ಬಿಕೆಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಯುವ ಸಂಸತ್ತಿಗೆ ಪ್ರಧಾನಿ ಮೋದಿ ಗೌರವ ನೀಡದಿರುವುದು ಆತಂಕಕಾರಿ ಬೆಳವಣಿಗೆ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

'ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷದ ವಿಚಾರದಲ್ಲಿ ಪ್ರಧಾನಿಯ ದಿವ್ಯ ಮೌನ ಹಲವು ವ್ಯಾಖ್ಯಾನಗಳಿಗೆ ವಸ್ತುವಾಗಿದೆ. ಅವರು ಮೌನವನ್ನು ರಾಜಕೀಯಕ್ಕಾಗಿ ಜಾಣತನದಿಂದ ಉಪ ಯೋಗಿಸುತ್ತಿದ್ದಾರೆಯೇ. ಸಂಭಾಷಣೆಯಿಂದ ಯಾವುದೇ ಪ್ರಯೋಜನವಿಲ್ಲ ಎಂದು ಮೋದಿ ಅವರಿಗೆ ಅನಿಸಿರಬಹುದೇ? ಪ್ರಶ್ನಿಸುವ ವರನ್ನು ಹತಾಶರಾಗಿಸುವುದು ಉದ್ದೇಶವೇ? ಸಂಸತ್ತಿನ ಪ್ರಶ್ನೆಗಳು ನಿಷ್ಪ್ರಯೋಜಕ ಎಂಬ ನಂಬಿಕೆಯೇ' ಎಂದೂ ಕೇಳಿರುವ ಚಂದ್ರಶೇಖರ್, 'ಏನೇ ಇದ್ದರೂ ಪ್ರಧಾನಿಯವರು ಜನರ ನಂಬಿಕೆ ಕಳೆದುಕೊಂಡಿರುವುದು ಸ್ಪಷ್ಟ' ಎಂದಿದ್ದಾರೆ.

'ಮಣಿಪುರದ ಘಟನೆಯ ಕುರಿತ ವಿರೋಧ ಪಕ್ಷಗಳ ಪ್ರಶ್ನೆಗೆ ಉತ್ತರ ನೀಡಲಾಗದೆ ಮೋದಿ ಹೇಳಿಕೆ ನೀಡಲು ತಪ್ಪಿಸಿಕೊಳ್ಳುತ್ತಿರಬಹುದೇ' ಎಂದೂ ಪ್ರಶ್ನಿಸಿದ್ದಾರೆ.





ಶಿಕ್ಷಣ

ವಿದೇಶಗಳಲ್ಲಿ ಉನ್ನತ ವಿದ್ಯಾಭ್ಯಾಸ ಕೈಗೊಳ್ಳುವವರಿಗಾಗಿ ನಡೆಸುವ ಭಾಷಾ ಪ್ರವೇಶ ಪರೀಕ್ಷೆಯಲ್ಲಿ 'ಐಲ್ಟ್ಸ್'(IELTS-International English Language Testing System) ಕೂಡ ಒಂದು. ಈ ಪರೀಕ್ಷೆ ಕೇವಲ ಉನ್ನತ ಅಧ್ಯಯನಕ್ಕೆ ಮಾತ್ರವಲ್ಲ, ವಿದೇಶಗಳಲ್ಲಿ ಉದ್ಯೋಗ ಪರವಾನಗಿ ಪಡೆಯಲು ಸಹ ನೆರವಾಗುತ್ತದೆ.

ಉದ್ಯೋಗ ಭರವಸೆಯ ಫಾರ್ಮಸಿ ಕ್ಷೇತ್ರ

ಫಾರ್ಮ ಔದ್ಯೋಗಿಕ ಕ್ಷೇತ್ರದಲ್ಲಿ ನೂತನ ಔಷಧಗಳ ಪ್ರಯೋಗಗಳು ನಡೆಯುತ್ತಿವೆ. ಸೂತ್ರೀಕರಣ ಮತ್ತು ರಚನೆ, ಉತ್ಪಾದನೆ, ಗುಣಮಟ್ಟದ ನಿಯಂತ್ರಣ, ಸರಕುಗಳ ಸಂಗ್ರಹಣೆ ಮತ್ತು ಸಾಗಣೆ, ಪ್ರಚಾರ ಮತ್ತು ಮಾರಾಟ ಮುಂತಾದ ವಿಭಾಗಗಳಲ್ಲಿ ಫಾರ್ಮ ಪದವೀಧರರಿಗೆ ಬೇಡಿಕೆಯಿದೆ.

ಸಾಂದರ್ಭಿಕ ಚಿತ್ರ

ಪ್ರದೀಪ್ ವೆಂಕಟರಾಮ್

'ನಾನು ಮೂರನೇ ವರ್ಷದ ಫಾರ್ಮ್.ಡಿ ಕೋರ್ಸ್ ಮಾಡುತ್ತಿದ್ದೇನೆ. ಮುಂದೆ ಬ್ರಿಟನ್/ಅಮೆರಿಕ ದೇಶಗಳಲ್ಲಿ ವೃತ್ತಿಯನ್ನು ಅರಸಬೇಕು ಎಂದುಕೊಂಡಿರುವೆ. ಆ ದೇಶಗಳಲ್ಲಿ ಅದೇನೋ ಪರವಾನಗಿ ಪಡೆಯಬೇಕು ಎಂಬ ಮಾನದಂಡವಿದೆಯಂತೆ. ಅದಕ್ಕಾಗಿ ಅರ್ಹತಾ ಪರೀಕ್ಷೆಯೂ ಇದೆ ಎಂದು ಕೇಳಿರುವೆ. ಈ ಬಗ್ಗೆ ಮಾರ್ಗದರ್ಶನ ನೀಡಿ...'

***

ನಾನು ಬಿ.ಫಾರ್ಮಾ ಮುಗಿಸಿ ಎಂ.ಫಾರ್ಮಾ ಮಾಡಬೇಕೆಂದಿದ್ದೇನೆ. ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಹೆಚ್ಚಿನ ಬೇಡಿಕೆಯಿದೆಯೇ? ಸೌದಿ ಅರೇಬಿಯಾದಲ್ಲಿ ಫಾರ್ಮಸಿ ಓದಿದವರಿಗೆ ಹೆಚ್ಚು ಉದ್ಯೋಗಾವಕಾಶಗಳಿವೆ ಎಂದು ಕೇಳಿರುವೆ. ಈ ಬಗ್ಗೆ ಮಾಹಿತಿ ನೀಡಿ..

***

ಇತ್ತೀಚೆಗೆ ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಿದ ವೃತ್ತಿಯೋಜನೆ ಕಾರ್ಯಾಗಾರಗಳಲ್ಲಿ ಅನೇಕರು ಫಾರ್ಮಸಿ ಕೋರ್ಸ್ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ.

ಒಂದು ಕಾಲದಲ್ಲಿ ಡಿ.ಫಾರ್ಮ್ ಮುಗಿಸಿದ ಬಹಳ ಮಂದಿ ಔಷಧ ಅಂಗಡಿ ತೆರೆಯುತ್ತಿದ್ದರು. ಇಲ್ಲವೇ ಮೆಡಿಕಲ್ ರೆಪ್ರೆಸೆಂಟೇಟಿವ್ ಆಗುತ್ತಿದ್ದರು. ಆದರೆ, ಈಗೀಗ ಫಾರ್ಮಸಿ ಕ್ಷೇತ್ರ ವಿಸ್ತಾರಗೊಳ್ಳುತ್ತಿದ್ದು, ಉದ್ಯೋಗಾವಕಾಶಗಳು ಹೆಚ್ಚಾಗುತ್ತಿವೆ.

ಇದೇ ವೇಳೆ, ವೈದ್ಯಕೀಯ ಪದವಿ ಕಲಿಯಲು ಅವಕಾಶ ಸಿಗದವರು, ಪ್ಯಾರಾಮೆಡಿಕಲ್ ಕ್ಷೇತ್ರ ಪರ್ಯಾಯ ಆಯ್ಕೆಯಾಗಿದ್ದರೂ ವೈವಿಧ್ಯಮಯ ವೃತ್ತಿಯ ಅವಕಾಶಗಳಿರುವ ಫಾರ್ಮಸಿ ಕ್ಷೇತ್ರದತ್ತ ಆಕರ್ಷಿತರಾಗುತ್ತಿದ್ದಾರೆ.

ವಿಸ್ತಾರಗೊಳ್ಳುತ್ತಿದೆ ಫಾರ್ಮಸಿ ಕ್ಷೇತ್ರ

ನಮ್ಮ ದೇಶದ ಫಾರ್ಮಸಿ ಉದ್ಯಮದಲ್ಲಿನ ಉತ್ಪಾದನಾ ಮೌಲ್ಯ ಸುಮಾರು ₹3 ಲಕ್ಷ ಕೋಟಿ ದಾಟುತ್ತದೆ. ಇಡೀ ಜಗತ್ತಿನ ಫಾರ್ಮಾ ಉದ್ಯಮದ ಒಟ್ಟು ಉತ್ಪಾದನೆಯಲ್ಲಿ, ಭಾರತ ಮೂರನೆಯ ಸ್ಥಾನದಲ್ಲಿದೆ. ನಮ್ಮ ದೇಶದಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚಿನ ಫಾರ್ಮಾ ಕಂಪನಿಗಳಿದ್ದು, 10 ಸಾವಿರಕ್ಕೂ ಹೆಚ್ಚಿನ ಉತ್ಪಾದನಾ ಕಾರ್ಖಾನೆಗಳಿವೆ.

ಇಷ್ಟೊಂದು ಬೃಹತ್ ಪ್ರಮಾಣದ ಉತ್ಪಾದನೆಗೆ ಕಾರಣಗಳೂ ಇವೆ; ದೇಶದ ಆಂತರಿಕ ಬೇಡಿಕೆಯ ಜೊತೆಗೆ ಅಮೆರಿಕ, ಯೂರೋಪ್, ಬ್ರಿಟನ್, ರಷ್ಯಾ, ದಕ್ಷಿಣ ಆಫ್ರಿಕ ಸೇರಿದಂತೆ ಬಹುತೇಕ ರಾಷ್ಟ್ರಗಳಿಗೆ ನಮ್ಮ ದೇಶದಲ್ಲಿ ಉತ್ಪಾದನೆಯಾಗುವ ಔಷಧಗಳೇ ರಫ್ತಾಗುತ್ತವೆ. ಅದೇ ರೀತಿ, ದೇಶದಲ್ಲಿ ಸುಮಾರು, 703 ಮೆಡಿಕಲ್ ಕಾಲೇಜುಗಳು, 75 ಸಾವಿರಕ್ಕೂ ಹೆಚ್ಚಿನ ಆಸ್ಪತ್ರೆಗಳು ಮತ್ತು 8 ಲಕ್ಷಕ್ಕೂ ಹೆಚ್ಚಿನ ಔಷಧದ ಅಂಗಡಿಗಳಿವೆ ಎಂದು ಹೇಳಲಾಗುತ್ತದೆ. ಈ ಕಾರಣಗಳೂ ವಿದ್ಯಾರ್ಥಿಗಳನ್ನು ಫಾರ್ಮ ಕ್ಷೇತ್ರ ಸೆಳೆಯುತ್ತಿವೆ.

ಇಂಗ್ಲಿಷ್ ಭಾಷಾ ಪರಿಣತಿ ಪರೀಕ್ಷೆಗಳ ವಿವರಕ್ಕಾಗಿ ಇಲ್ಲಿ ಲಿಂಕ್‌ಗಳನ್ನು ನೀಡಿದ್ದು, ಅವುಗಳ ಮೂಲಕ ವಿವರ ತಿಳಿಯಬಹುದು.
ಟಿಒಇಎಫ್‌ಎಲ್: https://www.ets.org/toefl.html
ಐಇಎಲ್‌ಟಿಎಸ್: https://www.ieltsidpindia.com/
ಅಮೆರಿಕ: https://nabp.pharmacy/programs/foreign-pharmacy/
ಬ್ರಿಟನ್: https://www.pharmacyregulation.org/registration/registering-pharmacist/overseas-non-eea-qualified-pharmacists
ಆಸ್ಟ್ರೇಲಿಯಾ: https://www.pharmacycouncil.org.au/
ಯೂರೋಪ್: https://epheu.eu/free-circulation-of-pharmacists-pharmacists-from-ohter-countries/
ಸೌದಿ ಅರೇಬಿಯಾ: https://saudiarabia.blsattestation.com/pharmacy-certificate-attestation.php

ವಿದೇಶದಲ್ಲಿ ವೃತ್ತಿಯ ಅವಕಾಶಗಳು

ಈ ಕ್ಷೇತ್ರದ ಪದವೀಧರರಿಗೆ ವಿದೇಶಗಳಲ್ಲಿ ವೃತ್ತಿಯನ್ನು ಅರಸುವ ಆಕರ್ಷಕ ಅವಕಾಶಗಳಿವೆ. ಅಮೆರಿಕ, ಯೂರೋಪ್, ಬ್ರಿಟನ್, ಮಧ್ಯಪ್ರಾಚ್ಯ ದೇಶಗಳು, ಆಸ್ಟ್ರೇಲಿಯ, ನ್ಯೂಜಿಲೆಂಡ್ ಮುಂತಾದ ದೇಶಗಳಲ್ಲಿ ವೃತ್ತಿಯನ್ನು ಅರಸಬೇಕಾದರೆ, ಸ್ಥಳೀಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. ಸ್ಥಳೀಯ ವೃತ್ತಿಪರ ಅರ್ಹತಾ ಪರೀಕ್ಷೆ, ಫಾರ್ಮಸಿ ಲೈಸೆನ್ಸ್ ಪರೀಕ್ಷೆ ಇತ್ಯಾದಿ ಪ್ರಕ್ರಿಯೆಗಳಿರುತ್ತವೆ.

ಫಾರ್ಮಾ .ಡಿ ಕೋರ್ಸ್ (ಡಾಕ್ಟರೇಟ್ ಕೋರ್ಸ್) ಮಾಡಿದ ನಂತರ ಅಮೆರಿಕದಲ್ಲಿ ವೃತ್ತಿ ಅರಸಲು, ಮೊದಲು ಇಂಗ್ಲಿಷ್ ಭಾಷಾ ಪರಿಣತಿ (The Test of English Language as a Foreign Language – TOEFL) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ನಂತರ ಸ್ಥಳೀಯ ಅರ್ಹತಾ ಪರೀಕ್ಷೆ (Foreign Pharmacy Graduate Equivalency Examination– ಎಫ್‌ಪಿಜಿಇ) ಯಲ್ಲಿ ಉತ್ತೀಣರಾಗಬೇಕು. ಇದಾದ ನಂತರ, ನಾರ್ತ್ ಅಮೆರಿಕ ಫಾರ್ಮಾಸಿಸ್ಟ್ ಲೈಸೆನ್ಸ್ (ಎನ್‌ಎಪಿಎಲ್‌ಇ) ಎಕ್ಸಾಂ ಮೂಲಕ ಫಾರ್ಮಸಿ ಲೈಸೆನ್ಸ್ ಪಡೆಯಬೇಕು. ಬ್ರಿಟನ್ ದೇಶದಲ್ಲಿಯೂ ಸ್ಥಳೀಯ ಅರ್ಹತಾ ಪರೀಕ್ಷೆ ಮತ್ತು ಪ್ರಾಯೋಗಿಕ ತರಬೇತಿಯ ನಂತರ ಲೈಸೆನ್ಸ್ ಪಡೆಯಬಹುದು.



ಯಾವ ಕೋರ್ಸ್? ಪ್ರವೇಶ ಹೇಗೆ?

ಬಿ.ಫಾರ್ಮಾ ಕೋರ್ಸ್‌ನಲ್ಲಿ ಅನಾಟಮಿ, ರೆಮಿಡಿಯಲ್ ಬಯಾಲಜಿ, ಬಯೋಕೆಮಿಸ್ಟ್ರಿ, ಮೆಡಿಸಿನಲ್ ಕೆಮಿಸ್ಟ್ರಿ, ಫಾರ್ಮಾಸ್ಯೂಟಿಕ್ಸ್, ಫಾರ್ಮಾಕಾಲಜಿ, ಪ್ಯಾಥೊ ಫಿಸಿಯಾಲಜಿ, ಇಂಡಸ್ಟ್ರಿಯಲ್ ಫಾರ್ಮಸಿ, ಕಾಸ್ಮೆಟಿಕ್ ಸೈನ್ಸ್, ಫಾರ್ಮ ಮಾರ್ಕೆಟಿಂಗ್ ಇತ್ಯಾದಿ ವಿಷಯಗಳ ಸಂಪೂರ್ಣ ಕಲಿಕೆಯಾಗುತ್ತದೆ.

ಈ ಕೋರ್ಸ್ ಕಲಿಯಲು ವಿದ್ಯಾರ್ಥಿಗಳು, ಪಿಯುಸಿ/10 + 2 ತರಗತಿಯಲ್ಲಿ ಭೌತವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವವಿಜ್ಞಾನ ಅಥವಾ ಗಣಿತ ವಿಷಯಗಳನ್ನು ಓದಿರಬೇಕು. ವಿದ್ಯಾರ್ಥಿಗಳು ಪಿಯುಸಿ ನಂತರ ನಾಲ್ಕು ವರ್ಷದ ಬಿ.ಫಾರ್ಮಾ ಅಥವಾ ಎರಡು ವರ್ಷದ ಡಿ.ಫಾರ್ಮಾ ಮಾಡಬಹುದು.

ಡಿ.ಫಾರ್ಮಾ ನಂತರ ಲ್ಯಾಟರಲ್ ಎಂಟ್ರಿ ಮೂಲಕ ಎರಡನೇ ವರ್ಷದ ಬಿ.ಫಾರ್ಮಾ ಕೋರ್ಸ್‌ಗೆ ಸೇರಬಹುದು. ಬಿ.ಫಾರ್ಮಾ ಕೋರ್ಸಿಗೆ ಸಿಇಟಿ ಪ್ರವೇಶ ಪ್ರಕ್ರಿಯೆ ಮೂಲಕ ಸೀಟ್ ಹಂಚಿಕೆಯಾಗುತ್ತದೆ. ಪ್ರಮುಖ ವಾಗಿ, ಈ ವೃತ್ತಿಯಲ್ಲಿ ಯಶಸ್ವಿಯಾಗಲು ಫಾರ್ಮಾ ವಿಷಯದ ಬಗ್ಗೆ ಒಲವು, ವಿವರಗಳಿಗೆ ಗಮನ, ಅಂತರ್‌ವೈಯಕ್ತಿಕ ನೈಪುಣ್ಯತೆ, ಸಂವಹನ, ವಿಶ್ಲೇಷಣೆ ಮುಂತಾದ ಕೌಶಲಗಳನ್ನು ಬೆಳೆಸಿಕೊಳ್ಳಬೇಕು.

ಈ ಕ್ಷೇತ್ರದಲ್ಲಿ ತಜ್ಞತೆಯನ್ನು ಬಯಸುವ ಬಿ.ಫಾರ್ಮಾ ಪದವೀಧರರು ಎಂ.ಫಾರ್ಮಾ ಮಾಡಬಹುದು ಅಥವಾ ನೇರವಾಗಿ ಫಾರ್ಮಾ .ಡಿ (ಡಾಕ್ಟರೇಟ್ ಇನ್ ಫಾರ್ಮಸಿ) ಕೋರ್ಸ್ ಮಾಡಿ ಉನ್ನತ ಹುದ್ದೆಗಳನ್ನು ಪಡೆಯಬಹುದು. ಫಾರ್ಮಾ ಕ್ಷೇತ್ರದಲ್ಲಿ ಸಂಶೋಧನೆಯನ್ನು ಮಾಡಲಿಚ್ಛಿಸುವ ಅಭ್ಯರ್ಥಿಗಳು ಪಿಎಚ್.ಡಿ ಮಾಡಬಹುದು.

ವೃತ್ತಿಯಲ್ಲಿ ವೈವಿಧ್ಯತೆ

ಫಾರ್ಮ ಔದ್ಯೋಗಿಕ ಕ್ಷೇತ್ರದಲ್ಲಿ ನೂತನ ಔಷಧಗಳ ಪ್ರಯೋಗಗಳು ನಡೆಯುತ್ತಿವೆ. ಸೂತ್ರೀಕರಣ ಮತ್ತು ರಚನೆ, ಉತ್ಪಾದನೆ, ಗುಣಮಟ್ಟದ ನಿಯಂತ್ರಣ, ಸರಕುಗಳ ಸಂಗ್ರಹಣೆ ಮತ್ತು ಸಾಗಣೆ, ಪ್ರಚಾರ ಮತ್ತು ಮಾರಾಟ ಮುಂತಾದ ವಿಭಾಗಳಲ್ಲಿ ಫಾರ್ಮ ಪದವೀಧರರಿಗೆ ಬೇಡಿಕೆಯಿದೆ.

ಮೆಡಿಕಲ್ ಕಾಲೇಜುಗಳು ಮತ್ತು ಆಸ್ಪತ್ರೆಗಳಲ್ಲಿ ಫಾರ್ಮಸಿಸ್ಟ್, ಸರ್ಕಾರದ ಡ್ರಗ್ ಇನ್‌ಸ್ಪೆಕ್ಟರ್ ಹುದ್ದೆಗಳನ್ನೂ ಫಾರ್ಮ ಪದವೀಧರರು ಪಡೆದುಕೊಳ್ಳಬಹುದು. ಔಷಧಿಗಳ ಉತ್ಪಾದನೆ, ಸಂರಕ್ಷಣೆ, ಪ್ಯಾಕಿಂಗ್ ಮತ್ತು ಮಾರಾಟ ಪ್ರಕ್ರಿಯೆಗಳು ಕ್ರಮಬದ್ಧವಾಗಿ ನಡೆಯುತ್ತಿದೆಯೇ ಎನ್ನುವುದರ ಮೇಲ್ವಿಚಾರಣೆ ಮತ್ತು ನಿಯಂತ್ರಣದಂತಹ ಪ್ರಮುಖ ಜವಾಬ್ದಾರಿಯನ್ನು ಡ್ರಗ್ ಇನ್‌ಸ್ಪೆಕ್ಟರ್‌ಗಳು ನಿರ್ವಹಿಸುತ್ತಾರೆ. ಸೌಂದರ್ಯವರ್ಧಕ ಉತ್ಪಾದನಾ ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು, ಪ್ರಯೋಗಾಲಯಗಳು, ಮೆಡಿಕಲ್ ಟ್ರಾನ್ಸ್ಕ್ರಿಪ್ಷನ್ ನಂತಹ ಕ್ಷೇತ್ರಗಳಲ್ಲಿಯೂ ಅಪಾರವಾದ ಅವಕಾಶಗಳಿವೆ.

ಬಿ.ಫಾರ್ಮಾ ಪದವಿಯ ನಂತರ ಔಷಧಿಗಳ ಮಾರಾಟಕ್ಕೆ ಡ್ರಗ್ ಕಂಟ್ರೋಲ್ ಇಲಾಖೆಯಿಂದ ಸಿಗುವ ಪರವಾನಗಿಯಿಂದ ಮೆಡಿಕಲ್ ಸ್ಟೋರ್ ವ್ಯವಹಾರವನ್ನು ನಡೆಸಬಹುದು. ಅನುಭವ ಮತ್ತು ನಿಬಂಧನೆಗಳ ಪ್ರಕಾರ ಔಷಧಿಗಳ ಉತ್ಪಾದನೆ ಮತ್ತು ಸಗಟು ವ್ಯಾಪಾರಕ್ಕೂ ಪರವಾನಗಿಯನ್ನು ಪಡೆದು ಉದ್ಯಮಿಗಳಾಗಬಹುದು.

ಎಲ್ಲಾ ಪದವೀಧರರಿಗೆ ಅನ್ವಯವಾಗುವ ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ಆರ್‌ಆರ್‌ಬಿ (ರೈಲ್ವೇಸ್), ಎಸ್‌ಎಸ್‌ಸಿ(ಸಿಬ್ಬಂದಿ ನೇಮಕಾತಿ ಆಯೋಗ) ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ವಲಯದ ಅನ್ಯ ಹುದ್ದೆಗಳನ್ನೂ ಪಡೆದುಕೊಳ್ಳಬಹುದು.

(ಲೇಖಕರು ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

ವಿದೇಶ ವಿದ್ಯಾಭ್ಯಾಸಕ್ಕೆ ರಹದಾರಿ

'ಐಲ್ಟ್ಸ್'–ಇಂಗ್ಲಿಷ್ ಭಾಷಾ ಪರೀಕ್ಷೆ

ಗುರುರಾಜ್ ಎಸ್. ದಾವಣಗೆರೆ

ಶಿಕ್ಷಣ ಪುರವಣಿಯ ಜುಲೈ 10 ಮತ್ತು 17ರ ಸಂಚಿಕೆಯಲ್ಲಿ ಇಂಗ್ಲಿಷ್ ಮೂಲ ಭಾಷೆಯಾಗಿ ಮಾತನಾಡುವ ವಿದೇಶಗಳಲ್ಲಿ ಉನ್ನತ ವಿದ್ಯಾಭ್ಯಾಸ ಕೈಗೊಳ್ಳ ಬಯಸುವವರು ಎದುರಿಸಬೇಕಾದ ಇಂಗ್ಲಿಷ್ ಭಾಷಾ ಪರೀಕ್ಷೆಗಳ ಕುರಿತ ಲೇಖನಗಳು ಪ್ರಕಟವಾಗಿದ್ದವು. ಆ ಲೇಖನಗಳಲ್ಲಿ ಇಂಗ್ಲಿಷ್ ಭಾಷಾ ಪರೀಕ್ಷೆಗಳ ಪೈಕಿ 'ಐಲ್ಟ್ಸ್' ಕೂಡ ಎಂದು ತಿಳಿಸಲಾಗಿತ್ತು.

ಐಲ್ಟ್ಸ್(IELTS) ಪೂರ್ಣ ರೂಪ ಇಂಟರ್‌ನ್ಯಾಷನಲ್ ಇಂಗ್ಲಿಷ್ ಲ್ಯಾಂಗ್ವೇಜ್ ಟೆಸ್ಟಿಂಗ್ ಸಿಸ್ಟಂ. ಇದನ್ನು 'ಆಯಲ್ಟ್ಸ್' ಎಂದೂ ಉಚ್ಚರಿಸುತ್ತಾರೆ. ಇಂಗ್ಲಿಷ್ ಭಾಷೆಯನ್ನು ಓದುವ, ಬರೆಯುವ, ಕೇಳಿಸಿಕೊಳ್ಳುವ ಮತ್ತು ಮಾತನಾಡುವ ಕ್ಷಮತೆ ತಿಳಿಯಲು ಐಲ್ಟ್ಸ್ ಪರೀಕ್ಷೆ ನಡೆಸಲಾಗುತ್ತದೆ. ಟೊಫೆಲ್, ಪಿಟಿಇ ಮತ್ತು ಡುವೊಲಿಂಗೊ ಪರೀಕ್ಷೆಗಳ ಮಾದರಿಯಲ್ಲೇ 'ಐಲ್ಟ್ಸ್' ಪರೀಕ್ಷೆಯೂ ಅಭ್ಯರ್ಥಿಗಳ ವಿದೇಶ ವಿದ್ಯಾಭ್ಯಾಸದ ಕನಸುಗಳನ್ನು ನನಸಾಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಎಲ್ಲೆಲ್ಲಿ ಮಾನ್ಯತೆ ?

1989ರಿಂದ ಜಾರಿಯಲ್ಲಿರುವ ಈ ಪರೀಕ್ಷೆ ಈವರೆಗೆ ಮೂರು ಕೋಟಿ ಬಾರಿ ನಡೆದಿದೆ. ಸರಾಸರಿ ಲೆಕ್ಕದಂತೆ ವಾರಕ್ಕೆ 60 ಸಾವಿರ ಜನ ಐಲ್ಟ್ಸ್ ಪರೀಕ್ಷೆ ಬರೆಯುತ್ತಾರೆ. ವರ್ಷಕ್ಕೆ 48 ಬಾರಿ ಪರೀಕ್ಷೆ ನಡೆಯುತ್ತದೆ. ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಐಲ್ಟ್ಸ್ ಪರೀಕ್ಷಾ ಫಲಿತಾಂಶಕ್ಕೆ ಪ್ರಥಮ ಮಾನ್ಯತೆ ಇದೆ. ವಿಶ್ವದ 11 ಸಾವಿರಕ್ಕೂ ಹೆಚ್ಚು ಶೈಕ್ಷಣಿಕ ಸಂಸ್ಥೆಗಳು ಐಲ್ಟ್ಸ್ ಪರೀಕ್ಷೆಯನ್ನು ಮಾನ್ಯ ಮಾಡುತ್ತವೆ. ಅಮೆರಿಕ ಸಹ ಐಲ್ಟ್ಸ್ ಪರೀಕ್ಷೆಯ ಫಲಿತಾಂಶವನ್ನು ಪರಿಗಣಿಸುತ್ತದೆ. ಆದರೂ ಟೊಫೆಲ್‌ಗೆ(Test of English as foreign language) ಪ್ರಥಮ ಮಾನ್ಯತೆ.

ಐಲ್ಟ್ಸ್‌ನ ಅಂತರರಾಷ್ಟ್ರೀಯ ಪಾಲುದಾರಿಕೆ

ಬ್ರಿಟಿಷ್ ಕೌನ್ಸಿಲ್, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಕೇಂಬ್ರಿಡ್ಜ್ ಇಂಗ್ಲಿಷ್ ಮತ್ತು ಐಡಿಪಿ (ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಪ್ರೊಗ್ರಾಂ), ಐಲ್ಟ್ಸ್-ಆಸ್ಟ್ರೇಲಿಯಾ – ಇವೆಲ್ಲ ಒಟ್ಟಿಗೆ ಸೇರಿ ಮಾನ್ಯತೆ ನೀಡುತ್ತಿರುವ ಐಲ್ಟ್ಸ್ ಪರೀಕ್ಷೆಗೆ ವಿಶ್ವದಾದ್ಯಂತ ಪರೀಕ್ಷಾ ಕೇಂದ್ರಗಳಿವೆ. ಅಮೆರಿಕದಲ್ಲೂ ಈ ಪರೀಕ್ಷೆಗೆ ಪ್ರಥಮ ಮಾನ್ಯತೆ ನೀಡುವ ಸಲುವಾಗಿ ಐಲ್ಟ್ಸ್– ಯುಎಸ್‌ಎ ಎಂಬ ಪ್ರತ್ಯೇಕ ಪಾಲುದಾರಿಕೆಯೇ ಇದೆ. ಪಾಲುದಾರಿಕೆ ಇರುವ ಎಲ್ಲ ಸಂಸ್ಥೆಗಳೂ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಪೂರ್ವತಯಾರಿಗಾಗಿ ಪುಸ್ತಕ, ಪ್ರಶ್ನೆ ಪತ್ರಿಕೆ ಮಾದರಿ, ಪಠ್ಯಕ್ರಮ, ಚಿತ್ರ–ವಿಡಿಯೊ ಮಾಹಿತಿ, ಅಗತ್ಯವಿದ್ದವರಿಗೆ ತರಬೇತಿಯನ್ನೂ ನೀಡುತ್ತವೆ.

ಪರೀಕ್ಷೆ ಮನುಷ್ಯರಿಂದ, ಯಂತ್ರಗಳಿಂದಲ್ಲ

ಭಾಷಾ ಪರೀಕ್ಷೆ ಬೇರೆ ವಿಷಯಗಳ ಪರೀಕ್ಷೆಯಷ್ಟು ಸುಲಭದ್ದಲ್ಲ. ಅದರಲ್ಲೂ ನಮ್ಮನ್ನು(ಅಭ್ಯರ್ಥಿಗಳನ್ನು) ಕಂಪ್ಯೂಟರ್ ಪರೀಕ್ಷಿಸುತ್ತದೆ ಎಂದರೆ ತುಂಬಾ ಒತ್ತಡ – ಆತಂಕ ಎದುರಾಗುತ್ತದೆ. ಅದನ್ನು ನಿವಾರಿಸಿ, ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಸರಾಗವಾಗಿ ಎದುರಿಸುವಂತೆ ಮಾಡಲು ಐಲ್ಟ್ಸ್‌ನಲ್ಲಿರುವ ಸಂಭಾಷಣೆ ಪರೀಕ್ಷೆಯನ್ನು ನುರಿತ ಅಧ್ಯಾಪಕರೇ ನಡೆಸುತ್ತಾರೆ. ಟೊಫೆಲ್ ಮತ್ತಿತರ ಪರೀಕ್ಷೆಗಳಲ್ಲಿ ಇದಕ್ಕೆ ಕಂಪ್ಯೂಟರ್ ಬಳಸುತ್ತಾರೆ. ಅಭ್ಯರ್ಥಿಗಳು / ವಿದ್ಯಾರ್ಥಿಗಳು ಮಾತನಾಡುವುದನ್ನು ಅಧ್ಯಾಪಕರು ಸರಿಯಾಗಿ ಗ್ರಹಿಸಿಕೊಂಡು ಅದಕ್ಕೆ ತಕ್ಕುದಾದ ಅಂಕಗಳನ್ನು ನೀಡುತ್ತಾರೆ. ಶೈಲಿ–ಉಚ್ಚಾರಣೆ, ಧ್ವನಿಯ ಏರಿಳಿತಗಳನ್ನು ಗುರುತಿಸಿ ವಿದ್ಯಾರ್ಥಿಗಳಿಗೆ ನೆರವಾಗುತ್ತಾರೆ.

ಒಂದಿಷ್ಟು ಮಾಹಿತಿ ನೆನಪಿಡಿ

- ಐಲ್ಟ್ಸ್(IELTS) ಪರೀಕ್ಷೆಯ ನೋಂದಣಿ ಶುಲ್ಕ ₹16,250
- ಪರೀಕ್ಷೆ ಫಲಿತಾಂಶ ಎರಡು ವರ್ಷಗಳವರೆಗೆ ಮಾನ್ಯತೆ ಹೊಂದಿರುತ್ತದೆ
- ಫಲಿತಾಂಶದ ಬಗ್ಗೆ ನಿಮಗೆ ಸಮಾಧಾನ ಇರದೇ ಇದ್ದಲ್ಲಿ ₹ 8,745 ಶುಲ್ಕ ಸಂದಾಯ ಮಾಡಿ ಮರುಮೌಲ್ಯಮಾಪನ ಮಾಡಿಸಿಕೊಳ್ಳಬಹುದು.
- ಪರೀಕ್ಷಾ ನೋಂದಣಿಗೆ ಮಾನ್ಯತೆ ಇರುವ ಪಾಸ್ ಪೋರ್ಟ್ ಕಡ್ಡಾಯ.

ಸಾಂದರ್ಭಿಕ ಚಿತ್ರ

ಪರೀಕ್ಷಾ ವಿಧಗಳು

ಪೆನ್ನು–ಪೇಪರ್ ಬಳಸಿ ಪರೀಕ್ಷೆ ಬರೆಯುವ ಹಾಗೂ ಕಂಪ್ಯೂಟರ್ ಬಳಸಿ ಉತ್ತರಿಸುವ ಎರಡೂ ಆಯ್ಕೆಗಳು ವಿದ್ಯಾರ್ಥಿಗಳಿಗೆ ಲಭ್ಯವಿವೆ. ಜೊತೆಗೆ ಆನ್‌ಲೈನ್ ಪರೀಕ್ಷಾ ಸೌಲಭ್ಯವೂ ಇದೆ. 160 ದೇಶಗಳ 1600 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಸೌಲಭ್ಯವಿದೆ.

ಪ್ರಶ್ನೆ ಪತ್ರಿಕೆ ಮಾದರಿ

ಪರೀಕ್ಷೆ ತೆಗೆದುಕೊಳ್ಳುವವರು ಲಿಸನಿಂಗ್ (ಕೇಳಿಸಿಕೊಳ್ಳುವುದು), ರೀಡಿಂಗ್(ಓದುವುದು), ರೈಟಿಂಗ್(ಬರೆಯುವುದು) ಮತ್ತು ಸ್ಪೀಕಿಂಗ್ (ಮಾತನಾಡುವುದು) – ಹೀಗೆ ನಾಲ್ಕು ವಿಭಾಗಗಳಿಗೆ ಉತ್ತರಿಸಬೇಕಾಗುತ್ತದೆ. ವಿವರಗಳು ಈ ಕೆಳಗಿನಂತಿವೆ.

ವಿಷಯ/ ಅವಧಿ	ವಿವರಣೆ	ಪ್ರಶ್ನೆಗಳ ಸಂಖ್ಯೆ
ಲಿಸನಿಂಗ್ 30 ನಿಮಿಷ	ಅಭ್ಯರ್ಥಿಯು ನಾಲ್ಕು ಏಕವ್ಯಕ್ತಿ ಸಂಭಾಷಣೆ ಕೇಳಿಸಿಕೊಂಡು ಪ್ರಶ್ನೆಗಳಿಗೆ ಉತ್ತರಿಸಬೇಕು	40
ರೀಡಿಂಗ್ 60 ನಿಮಿಷ	ನಾಲ್ಕು ಪ್ಯಾರಾಗ್ರಾಫ್‌ಗಳನ್ನು ಓದಿ ಅದರಲ್ಲಿರುವ ಚಿತ್ರ, ಗ್ರಾಫ್, ಹೇಳಿಕೆಗಳ ಕುರಿತು ವಿಶ್ಲೇಷಣಾತ್ಮಕ ಉತ್ತರ ಬರೆಯಬೇಕು	40
ರೈಟಿಂಗ್ 60 ನಿಮಿಷ	250 ಪದಗಳ ಒಂದು ಕಿರುಪ್ರಬಂಧ ಮತ್ತು 150 ಪದಗಳ ಒಂದು ಸಾರಾಂಶ, ವಿಶ್ಲೇಷಣೆ ಬರೆಯಬೇಕು	02
ಸ್ಪೀಕಿಂಗ್ 11ರಿಂದ 14 ನಿಮಿಷ	ವಿವಿಧ ವಿಷಯಗಳ ಕುರಿತು ವಿಸ್ತೃತ ಸಂಭಾಷಣೆ, ಪ್ರಶ್ನೋತ್ತರ ಮತ್ತು ಅಭ್ಯರ್ಥಿಯ ಆಸಕ್ತಿಯ ವಿಷಯದ ಮಾತುಕತೆ	03

ಫಲಿತಾಂಶ ಮಾನದಂಡ

ಮೇಲಿನ ನಾಲ್ಕೂ ವಿಭಾಗಗಳಲ್ಲಿ ಅಭ್ಯರ್ಥಿಯು ಉತ್ತರಿಸಿದ ಉತ್ತರಗಳ ಮೌಲ್ಯಮಾಪನವನ್ನು ಸೊನ್ನೆಯಿಂದ ಒಂಬತ್ತರವರೆಗಿನ ಶ್ರೇಣಿ(0–9)ಗೆ ಅನ್ವಯಿಸಲಾಗುತ್ತದೆ. ಅತ್ಯಂತ ಚೆನ್ನಾಗಿ ಉತ್ತರಿಸಿದರೆ 9 ಶ್ರೇಣಿ ಮತ್ತು ತೀರಾ ಕೆಟ್ಟದಾಗಿ ಉತ್ತರಿಸಿದವರಿಗೆ ಒಂದು ಅಥವಾ ಸೊನ್ನೆ ಶ್ರೇಣಿ ನೀಡಲಾಗುತ್ತದೆ. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಲೇಬೇಕೆಂದು ನಿರ್ಧರಿಸಿರುವವರು 6.5 ರಿಂದ 7ರ ಶ್ರೇಣಿಯನ್ನು ಪಡೆಯಲೇಬೇಕು. 16 ವರ್ಷ ತುಂಬಿರುವ ವಿದ್ಯಾರ್ಥಿಗಳು 'ಐಲ್ಟ್ಸ್' ಪರೀಕ್ಷೆ ಬರೆಯಲು ಅರ್ಹರಾಗಿರುತ್ತಾರೆ.

ಐಲ್ಟ್ಸ್ ಪರೀಕ್ಷೆ ಕೇವಲ ಉನ್ನತ ಅಧ್ಯಯನಕ್ಕೆ ಮಾತ್ರವಲ್ಲ, ವಿದೇಶಗಳಲ್ಲಿ ಉದ್ಯೋಗ ಪರವಾನಿಗೆ ಪಡೆಯಲು ಸಹ ನೆರವಾಗುತ್ತದೆ.

ಲೇಖಕರು: ಪ್ರಾಚಾರ್ಯರು, ವಿದಿಯ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು

ವಿದ್ಯಾರ್ಥಿ ವೇತನ ಕೈಪಿಡಿ

ಇನ್‌ಸ್ಪೈರ್ ಅವಾರ್ಡ್ಸ್ (ಎಂ ಎ ಎನ್ ಎ ಕೆ) ಮನಕ್ ಸ್ಕೀಮ್

6ನೇ ತರಗತಿಯಿಂದ 10ನೇ ತರಗತಿವರೆಗೆ ಓದುತ್ತಿರುವ ವಿದ್ಯಾರ್ಥಿಗಳನ್ನು ಬೆಂಬಲಿಸುವುದಕ್ಕಾಗಿ ರೂಪಿಸಿರುವ ಕೇಂದ್ರ ಸರ್ಕಾರದ ಯೋಜನೆ ಇನ್‌ಸ್ಪೈರ್ ಅವಾರ್ಡ್ಸ್ (ಎಂ ಎ ಎನ್ ಎ ಕೆ) ಮನಕ್ ಸ್ಕೀಮ್ 2023-24. ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (ಡಿಎಸ್‌ಟಿ), ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಈ ಕಾರ್ಯಕ್ರಮವನ್ನು ಜಾರಿಗೊಳಿಸಿದೆ.

ಅರ್ಹತೆ: 10 ರಿಂದ15 ವರ್ಷ ವಯಸ್ಸಿನ ಮತ್ತು 6 ರಿಂದ 10 ನೇ ತರಗತಿಯಲ್ಲಿ ಓದುತ್ತಿರುವ ಅಭ್ಯರ್ಥಿಗಳು ಈ ಯೋಜನೆಗೆ ಅರ್ಜಿ ಸಲ್ಲಿಸಬಹುದು.
ಆರ್ಥಿಕ ಸಹಾಯ: ₹10,000 (ಒಂದು ಬಾರಿ)
ಅರ್ಜಿ ಸಲ್ಲಿಸಲು ಕೊನೆ ದಿನ: 31/8/2023
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಹೆಚ್ಚಿನ ಮಾಹಿತಿಗೆ: www.b4s.in/praja/IAMS2

ಎಂಜಿನಿಯರಿಂಗ್ ವಿದ್ಯಾರ್ಥಿನಿಯರಿಗೆ ರೋಲ್ಸ್-ರಾಯ್ಸ್ ಉನ್ನತಿ ಸ್ಕಾಲರ್‌ಷಿಪ್

ಎಐಸಿಟಿಇ ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಎಂಜಿನಿಯರಿಂಗ್ ಪದವಿ ಓದುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಆರ್ಥಿಕ ಬೆಂಬಲ ನೀಡುವುದಕ್ಕಾಗಿ ರೋಲ್ಸ್ ರಾಯ್ಸ್ ಇಂಡಿಯಾ ರೂಪಿಸಿರುವ ಸ್ಕಾಲರ್‌ಷಿಪ್ ಯೋಜನೆ 'ರೋಲ್ಸ್-ರಾಯ್ಸ್ ಉನ್ನತಿ ಸ್ಕಾಲರ್‌ಶಿಪ್ ಫಾರ್ ವಿಮೆನ್ ಎಂಜಿನಿಯರಿಂಗ್ ಸ್ಟೂಡೆಂಟ್ಸ್'.

ಅರ್ಹತೆ: ಎಐಸಿಟಿಇ-ಮಾನ್ಯತೆ ಪಡೆದ ಶಿಕ್ಷಣ ಎಂಜಿನಿಯರಿಂಗ್ ಕಾಲೇಜುಗಳಲ್ಲಿ 1ನೇ/2ನೇ/3ನೇ ವರ್ಷದಲ್ಲಿ (ಏರೋಸ್ಪೇಸ್, ಮೆರೈನ್, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ಸ್ ಇತ್ಯಾದಿ ಕ್ಷೇತ್ರಗಳಲ್ಲಿ) ಓದುತ್ತಿರುವ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು.

ಅರ್ಜಿದಾರರು ತಮ್ಮ 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 4 ಲಕ್ಷವನ್ನು ಮೀರಬಾರದು.

ಅಂಗವಿಕಲರು, ಏಕ ಪೋಷಕರು (ಸಿಂಗಲ್ ಪೇರೆಂಟ್) ಮತ್ತು ಅನಾಥರಂಥ ವಿಶೇಷ ವರ್ಗಕ್ಕೆ ಆದ್ಯತೆ.

ಈ ಹಿಂದೆ 2022ರಲ್ಲಿ ಇದೇ 'ರೋಲ್ಸ್- ರಾಯ್ಸ್' ಸಂಸ್ಥೆಯ ಸ್ಕಾಲರ್‌ಷಿಪ್ ಪಡೆದಿರುವ ಮತ್ತು ಪ್ರಸ್ತುತ 4ನೇ ವರ್ಷದ ಎಂಜಿನಿಯರಿಂಗ್ ಪದವಿ ಓದುತ್ತಿರುವ ವಿದ್ಯಾರ್ಥಿನಿಯರೂ ಅರ್ಜಿ ಸಲ್ಲಿಸಬಹುದು.

ಆರ್ಥಿಕ ಸಹಾಯ: ₹35,000
ಅರ್ಜಿ ಸಲ್ಲಿಸಲು ಕೊನೆ ದಿನ: 31-08-2023
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಹೆಚ್ಚಿನ ಮಾಹಿತಿಗೆ: www.b4s.in/praja/UNS5

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

'ಡಿಜಿಟಲ್ ಮಾರ್ಕೆಟಿಂಗ್' ನಂತರ ಮುಂದೇನು?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ
ಪ್ರದೀಪ್ ಕುಮಾರ್ ವಿ.

- **ನಾನು ಡಿ.ಇಡಿ ಮುಗಿಸಿದ್ದು, ಈಗ ಬಿ.ಇಡಿ ತತ್ಸಮಾನ ಇಂಟಿಗ್ರೇಟೆಡ್ ಕೋರ್ಸ್ ಮಾಡಲು ಬಯಸಿದ್ದೇನೆ. ಯಾವ ವಿಶ್ವವಿದ್ಯಾಲಯದಲ್ಲಿ ಮಾಡಬಹುದು?**

ಗಜೇಂದ್ರ, ಬಳ್ಳಾರಿ

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯದಂತೆ ಐಟಿಇಪಿ (ಇಂಟಿಗ್ರೇಟೆಡ್ ಟೀಚರ್ ಎಜುಕೇಷನ್ ಪ್ರೋಗ್ರಾಮ್) ಅನುಸಾರ ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ ಕೋರ್ಸನ್ನು ವಿಜ್ಞಾನ(ಬಿ.ಎಸ್ಸಿ), ವಾಣಿಜ್ಯ (ಬಿಕಾಂ) ಕಲಾ (ಬಿಎ) ವಿಭಾಗಗಳೊಂದಿಗೆ ಮಾಡುವುದು ನಿಮ್ಮ ಭವಿಷ್ಯದ ದೃಷ್ಟಿಯಿಂದ ಸೂಕ್ತವೆನಿಸುತ್ತದೆ. ಉದಾಹರಣೆಗೆ, ವಿಜ್ಞಾನದ ವಿಷಯಗಳನ್ನು ಬೋಧಿಸುವ ಆಸಕ್ತಿಯಿದ್ದರೆ, ಬಿ.ಎಸ್ಸಿ, ಬಿ.ಇಡಿ ಕೋರ್ಸ್ ಮಾಡಬಹುದು. ಈ ಕೋರ್ಸನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಮೈಸೂರು ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಮಾಡಬಹುದು. ಪ್ರವೇಶ ಪ್ರಕ್ರಿಯೆ ನ್ಯಾಷನಲ್ ಕಾಮನ್ ಎಂಟ್ರನ್ಸ್ ಟೆಸ್ಟ್ (ಎನ್‌ಸಿಇಟಿ) ಮೂಲಕ ನಡೆಯುತ್ತದೆ. ಇದಲ್ಲದೆ, ಅನೇಕ ಖಾಸಗಿ ವಿಶ್ವವಿದ್ಯಾಲಯಗಳಲ್ಲಿಯೂ ಇಂಟಿಗ್ರೇಟೆಡ್ ಬಿ.ಇಡಿ ಕೋರ್ಸ್ ಮಾಡಬಹುದು.

ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://ncet.samarth.ac.in

- **ನಾನು ಮೂರು ವರ್ಷದ ಪ್ಯಾರಮೆಡಿಕಲ್ ಕೋರ್ಸ್ ಮುಗಿಸಿದ್ದು, ಈಗ ಬಿಕಾಂ ಮಾಡಬಹುದೇ? ಅಥವಾ ಈ ಕೋರ್ಸ್ ಪಿಯುಸಿಗೆ ಸಮಾನವೇ?**

ಪ್ರಜ್ವಲ್, ಹುಮನಾಬಾದ್

ನಮ್ಮ ಅಭಿಪ್ರಾಯದಂತೆ, ಮೂರು ವರ್ಷದ ಪ್ಯಾರಮೆಡಿಕಲ್ ಕೋರ್ಸ್ ಪಿಯುಸಿಗೆ ತತ್ಸಮಾನವೆಂದು ಪರಿಗಣಿಸಲಾಗುತ್ತದೆ. ಹಾಗಾಗಿ, ನಿಮಗೆ ಬಿಕಾಂ ಮಾಡುವ ಅರ್ಹತೆಯಿರುತ್ತದೆ. ನಿಖರವಾದ ಮಾಹಿತಿಗಾಗಿ, ನೀವು ಬಿ.ಕಾಂ ಮಾಡಬಯಸುವ ಕಾಲೇಜನ್ನು ಸಂಪರ್ಕಿಸಿ.

- **ಡಿಜಿಟಲ್ ಮಾರ್ಕೆಟಿಂಗ್ ಕಲಿಯುವುದರಿಂದ ಆಗುವ ಪ್ರಯೋಜನಗಳೇನು? ಇದರ ಬಗ್ಗೆ ಮಾಹಿತಿ ನೀಡಿ.**

ಜೀವನ್, ಕೊಡಗು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ, ಉದ್ಯಮವನ್ನು ಅಭಿವೃದ್ಧಿಪಡಿಸಲು ಡಿಜಿಟಲ್ ಮಾರ್ಕೆಟಿಂಗ್ ಪ್ರಮುಖವಾದ ಮತ್ತು ಪರಿಣಾಮಕಾರಿಯಾದ ಸಾಧನವಾಗಿದೆ. ಗ್ರಾಹಕರ ಗಮನವನ್ನು ಸೆಳೆಯುವುದು, ಪದಾರ್ಥ ಮತ್ತು ಸೇವೆಗಳನ್ನು ಡಿಜಿಟಲ್ ಮಾಧ್ಯಮದ ಮೂಲಕ ಒದಗಿಸುವುದು, ಗ್ರಾಹಕರ ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ, ವಿಶ್ವಾಸಾರ್ಹ ಬ್ರ್ಯಾಂಡ್ ನಿರ್ಮಾಣ ಮುಂತಾದ ಉದ್ಯಮ ಕ್ಷೇತ್ರದ ಬಹುತೇಕ ಕಾರ್ಯಗಳಲ್ಲಿ ಡಿಜಿಟಲ್ ಮಾರ್ಕೆಟಿಂಗ್ ಸಿದ್ಧಾಂತಗಳ ಬಳಕೆಯಾಗುತ್ತದೆ. ಈ ಕ್ಷೇತ್ರದಲ್ಲಿ ಆಸಕ್ತಿಯಿದ್ದರೆ ಬಿಬಿಎ/ಎಂಬಿಎ ಪದವಿಗಳಲ್ಲದೆ, ಅರೆಕಾಲಿಕ ಸರ್ಟಿಫಿಕೆಟ್/ಡಿಪ್ಲೊಮಾ ಕೋರ್ಸ್‌ಗಳನ್ನು ಮಾಡಿ ಬೇಡಿಕೆಯಲ್ಲಿರುವ ಈ ಕ್ಷೇತ್ರದಲ್ಲಿ ಉದ್ಯೋಗವನ್ನು ಪಡೆದುಕೊಳ್ಳಬಹುದು.

- **ನಾನು ಬಿಕಾಂ ಮುಗಿಸಿದ್ದು, ಈಗ ಎಂಎ (ಅರ್ಥಶಾಸ್ತ್ರ) ಮಾಡುವ ಅಭಿರುಚಿಯಿದೆ. ಈ ಕೋರ್ಸ್ ನನಗೆ ಸೂಕ್ತವೇ?**

ಮಾದೇವ ಮೌರ್ಯ, ಜಮಖಂಡಿ

ನಿಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಯಾವ ಕೋರ್ಸ್ ನಿಮಗೆ ಸೂಕ್ತವೆಂದು ನಿರ್ಧರಿಸಬೇಕು. ಇಂದಿನ ಪ್ರಶ್ನೋತ್ತರದಲ್ಲಿ ವಿವರಿಸಿರುವಂತೆ ಎಂಎ (ಅರ್ಥಶಾಸ್ತ್ರ) ಬೇಡಿಕೆಯಲ್ಲಿರುವ ಕ್ಷೇತ್ರ. ಹಾಗಾಗಿ, ಎಂಎ (ಅರ್ಥಶಾಸ್ತ್ರ) ಪದವಿಯ ನಂತರ ಉಜ್ವಲವಾದ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

- **ನಾನು ಅಂತಿಮ ಸೆಮಿಸ್ಟರ್ ಬಿ.ಕಾಂ ಓದುತ್ತಿದ್ದೇನೆ. ಮುಂದೆ ಸಿಎ ಮಾಡುವ ಗುರಿ ಇದೆ. ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ತಿಳಿಸಿ.**

ಹೆಸರು, ಊರು ತಿಳಿಸಿಲ್ಲ.

ಬಿ.ಕಾಂ ಪರೀಕ್ಷೆಯಲ್ಲಿ ಶೇ 55 ಅಂಕಗಳನ್ನು ಗಳಿಸಿದಲ್ಲಿ, ಇಂಟರ್‌ಮೀಡಿಯಟ್ ಕೋರ್ಸ್‌ಗೆ ನೇರವಾಗಿ ನೋಂದಾಯಿಸಿಕೊಳ್ಳಬಹುದು. ಜೊತೆಗೆ 3 ವರ್ಷದ ಆರ್ಟಿಕಲ್ಡ್ ಟ್ರೈನಿಂಗ್‌ಗೆ ಸೇರಬೇಕು. ಇಂಟರ್‌ಮೀಡಿಯೆಟ್ ಪಾಸಾದ ನಂತರ ಫೈನಲ್‌ಗೆ ನೋಂದಾಯಿಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಫೈನಲ್ ಪರೀಕ್ಷೆಗೆ ಮುಂಚೆ ನಾಲ್ಕು ವಾರಗಳ ಐಟಿ ಮತ್ತು ಸಾಫ್ಟ್ ಸ್ಕಿಲ್ ಕೋರ್ಸ್ ಮಾಡಿರಬೇಕು. ಒಟ್ಟಾರೆ, ಸಿಎ ಕೋರ್ಸ್ ಮಾಡಲು ಕನಿಷ್ಠ 3-4 ವರ್ಷ ಬೇಕಾಗುತ್ತದೆ.

ಈ ವೃತ್ತಿಯಲ್ಲಿ ಯಶಸ್ವಿಯಾಗಲು ನಿಷ್ಠೆ, ಪ್ರಾಮಾಣಿಕತೆಯ ಜೊತೆಗೆ ಸಂಖ್ಯಾ ಕೌಶಲ, ವಿಶ್ಲೇಷಾತ್ಮಕ ಕೌಶಲ, ಆರ್ಥಿಕ ನಿರ್ವಹಣೆ ಮತ್ತು ವ್ಯಾಪಾರೋದ್ಯಮ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಚಾರ್ಟರ್ಡ್ ಅಕೌಂಟೆಂಟ್‌ಗಳಿಗೆ ಕಾರ್ಪೊರೇಟ್ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆ ಇದೆ. ಹಲವು ವರ್ಷಗಳ ಅನುಭವದ ನಂತರ ಸ್ವತಂತ್ರವಾಗಿ ಪ್ರಾಕ್ಟೀಸ್ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ:https://www.youtube.com/watch?v=fuTaa5UjZCo

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

'ದರ್ಪಣ' ಮಾದರಿ • ಪೊಲೀಸರ ಕಾರ್ಯವೈಖರಿ ಬಗ್ಗೆ ಜನರಿಂದ ಅಭಿಪ್ರಾಯ ಸಂಗ್ರಹ

ರಾಜ್ಯದಲ್ಲಿ 'ಲೋಕ ಸ್ಪಂದನ' ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಕಾರ್ಯವೈಖರಿ ಬಗ್ಗೆ ಜನರಿಂದ ಅಭಿಪ್ರಾಯ ಸಂಗ್ರಹಿಸಲು 'ಲೋಕ ಸ್ಪಂದನ' ಕ್ಯೂಆರ್ ಕೋಡ್ ವ್ಯವಸ್ಥೆ ರೂಪಿಸಲಾಗಿದ್ದು, ಪ್ರತಿಯೊಂದು ಜಿಲ್ಲೆ ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ ವ್ಯವಸ್ಥೆ ಜಾರಿಗೊಳಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಆದೇಶ ಹೊರಡಿಸಿದ್ದಾರೆ.

'ದರ್ಪಣ' ಲಾಂಛನ

'ಠಾಣೆಗೆ ಹೋದ ಸಂದರ್ಭದಲ್ಲಿ ಪೊಲೀಸರು ಸೂಕ್ತ ರೀತಿಯಲ್ಲಿ ಸ್ಪಂದಿಸುವುದಿಲ್ಲ. ಎಫ್‌ಐಆರ್ ದಾಖಲಿಸಲು ಸತಾಯಿಸುತ್ತಾರೆ. ಕೆಲವರು ಹಣ ಹೇಳುತ್ತಾರೆ. ಹೀಗಾಗಿ, ಪೊಲೀಸರ ವರ್ತನೆಯಿಂದ ನೋವು ಉಂಟಾಗುತ್ತಿದೆ' ಎಂಬುದು ಬಹುತೇಕ ಸಾರ್ವಜನಿಕರ ಅಭಿಪ್ರಾಯವಾಗಿತ್ತು.

ಜನರ ಸಮಸ್ಯೆ ಆಲಿಸಿ ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಜರುಗಿಸಲು ಮುಂದಾಗಿದ್ದ ಬೆಂಗಳೂರು ಬಂಡೇಪಾಳ್ಯ ಠಾಣೆಯ ಇನ್‌ಸ್ಪೆಕ್ಟರ್ ಎಲ್.ವೈ. ರಾಜೇಶ್, ತಮ್ಮ ಠಾಣೆಯಲ್ಲಿ 'ದರ್ಪಣ' ಕ್ಯೂ ಆರ್ ಕೋಡ್ ವ್ಯವಸ್ಥೆ ರೂಪಿಸಿದ್ದರು. ಠಾಣೆಗೆ ಬರುವ ಜನ, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಸಿಬ್ಬಂದಿ ವರ್ತನೆ ವಿರುದ್ಧ ದೂರು ನೀಡಲಾರಂಭಿಸಿದ್ದರು. ಇದರಿಂದ ಎಚ್ಚೆತ್ತ ಸಿಬ್ಬಂದಿ, ಅಮಾನತಾಗುವ ಭಯದಲ್ಲಿ ಜನರ ಜೊತೆ ಸೌಜನ್ಯದಿಂದ ವರ್ತಿಸುತ್ತಿದ್ದಾರೆ.

ಪ್ರಾಯೋಗಿಕವಾಗಿ ಜಾರಿಗೆ ತಂದಿದ್ದ ವ್ಯವಸ್ಥೆ ಯಶಸ್ವಿಯಾಗುತ್ತಿದ್ದಂತೆ ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ. ಬಾಬಾ, ತಮ್ಮ ವ್ಯಾಪ್ತಿಯ ಎಲ್ಲ ಠಾಣೆಗಳಲ್ಲಿ 'ದರ್ಪಣ' ಜಾರಿಗೊಳಿಸಿದ್ದರು. ಇದಕ್ಕೂ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

'ಲೋಕಸ್ಪಂದನ' ಕ್ಯೂ ಆರ್ ಕೋಡ್

ಇದೇ ವ್ಯವಸ್ಥೆಯನ್ನು ಬೆಂಗಳೂರು ಕಮಿಷನರೇಟ್ ವ್ಯಾಪ್ತಿಗೆ ವಿಸ್ತರಿಸಿರುವ ಕಮಿಷನರ್ ಬಿ.ದಯಾನಂದ್, 'ಲೋಕ ಸ್ಪಂದನ' ಎಂಬುದಾಗಿ ನಾಮಕರಣ ಮಾಡಿದ್ದಾರೆ. ಬೆಂಗಳೂರಿನಲ್ಲಿ ಯಶಸ್ವಿಯಾಗಿರುವ 'ಲೋಕ ಸ್ಪಂದನ' ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಇದೀಗ ರಾಜ್ಯವ್ಯಾಪಿ ವಿಸ್ತರಣೆ ಮಾಡಲಾಗಿದೆ. ಇದರ ಜೊತೆಯಲ್ಲಿ ಕೆಲ ಜಿಲ್ಲೆಯಲ್ಲೂ ಇದೇ ರೀತಿಯ ಕ್ಯೂಆರ್ ಕೋಡ್ ವ್ಯವಸ್ಥೆ ಈಗಾಗಲೇ ಜಾರಿಯಲ್ಲಿದೆ.

ಪ್ರತಿಯೊಂದು ಜಿಲ್ಲೆ ಹಾಗೂ ಕಮಿಷನರೇಟ್ ವ್ಯಾಪ್ತಿಯ ಠಾಣೆಗಳಲ್ಲಿ 'ಲೋಕ ಸ್ಪಂದನ' ಕ್ಯೂಆರ್ ಕೋಡ್ ಅಳವಡಿಸುವಂತೆ ಡಿಜಿ–ಐಜಿಪಿ ಹೇಳಿದ್ದಾರೆ. ವ್ಯವಸ್ಥೆ ಬಗ್ಗೆ ಜನರಿಗೆ ತಿಳಿಸಿ, ಅವರಿಂದ ಪ್ರತಿಕ್ರಿಯೆ ದಾಖಲಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವ್ಯವಸ್ಥೆಯ ಬಳಕೆ ಹೇಗೆ?

ಪೊಲೀಸ್ ಠಾಣೆ ಹಾಗೂ ಅಧಿಕಾರಿಗಳ ಕಚೇರಿಯ ಪ್ರವೇಶ ದ್ವಾರದಲ್ಲಿ 'ಲೋಕ ಸ್ಪಂದನ' ಕ್ಯೂಆರ್ ಕೋಡ್ ಅಳವಡಿಸಲಾಗಿರುತ್ತದೆ. ಠಾಣೆ ಹಾಗೂ ಕಚೇರಿಗೆ ಹೋದ ಸಂದರ್ಭದಲ್ಲಿ ಜನರು, ತಮ್ಮ ಮೊಬೈಲ್ ಬಳಸಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಬೇಕು. ಅವಾಗಲೇ ಪ್ರತ್ಯೇಕ ಲಿಂಕ್ ತೆರೆದುಕೊಳ್ಳುತ್ತದೆ. ಹೆಸರು ಹಾಗೂ ವಿಳಾಸ ನಮೂದಿಸಬೇಕು.

ಯಾವ ಕೆಲಸಕ್ಕೆ ಬಂದಿದ್ದಿರಾ? ಸಿಬ್ಬಂದಿ ವರ್ತನೆ ಹೇಗಿತ್ತು ? ನಿಮ್ಮ ಸಮಸ್ಯೆ ಆಲಿಸಿದ್ದಾರೆಯೇ ? ಏನಾದರೂ ದೂರು ನೀಡಬೇಕು ? ಎಂಬಿತ್ಯಾದಿ ಮಾಹಿತಿಯನ್ನು ಜನರು ಭರ್ತಿ ಮಾಡಬೇಕು. ಜನರ ಅಭಿಪ್ರಾಯಗಳು, ಆಯಾ ಜಿಲ್ಲೆಯ ಎಸ್ಪಿ, ಕಮಿಷನರೇಟ್ ವ್ಯಾಪ್ತಿಯ ಡಿಸಿಪಿಗಳಿಗೆ ಹೋಗುತ್ತವೆ. ಏನಾದರೂ ಗಂಭೀರ ದೂರುಗಳಿದ್ದರೆ ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲಿದ್ದಾರೆ.

ಸುಳ್ಳು ಸುದ್ದಿ ನಿಯಂತ್ರಣ: ಸಚಿವರೊಂದಿಗೆ ಸಿ.ಎಂ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸುವುದನ್ನು ನಿಯಂತ್ರಿಸುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಸಚಿವ ಜಿ. ಪರಮೇಶ್ವರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಜತೆ ಭಾನುವಾರ ಚರ್ಚೆ ನಡೆಸಿದ್ದಾರೆ.

ಉಡುಪಿಯಲ್ಲಿ ನರ್ಸಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ವಿಡಿಯೊ ಚಿತ್ರೀಕರಣ ಮಾಡಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಹಾಗೂ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ನಂದಿ ಆಶ್ರಮದ ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರ ಕೊಲೆ ಪ್ರಕರಣದಲ್ಲಿ ರಾಜ್ಯ ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರಲು ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿರುವ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

'ಎರಡೂ ಪ್ರಕರಣಗಳಲ್ಲಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರಲು ಯತ್ನಿಸುತ್ತಿದ್ದಾರೆ. ಉಡುಪಿ ಪ್ರಕರಣದಲ್ಲಿ ತಮಿಳುನಾಡಿನ ವಿಡಿಯೊ ತುಣುಕೊಂದನ್ನು ಬಳಸಿಕೊಂಡು ಅಪಪ್ರಚಾರ ನಡೆಸಲಾಗುತ್ತಿದೆ. ಜೈನ ಮುನಿ ಕೊಲೆ ಪ್ರಕರಣದಲ್ಲಿ ಸಿದ್ದರಾಮಯ್ಯ ಕೊಲೆಗಡುಕ ಎಂದು ವಾಟ್ಸ್ ಆ್ಯಪ್ ಗುಂಪುಗಳಲ್ಲಿ ಪ್ರಚಾರ ಮಾಡಲಾಗಿದೆ. ಇಂತಹ ಬೆಳವಣಿಗೆಗಳಿಂದ ರಾಜ್ಯಕ್ಕೆ ಹೂಡಿಕೆ ಹರಿದುಬರುವುದು ಕಡಿಮೆಯಾಗಲಿದೆ' ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಗೊತ್ತಾಗಿದೆ.

ಸುಳ್ಳು ಸುದ್ದಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವ ಕುರಿತು ಮುಖ್ಯಮಂತ್ರಿಯವರು ಒಲವು ತೋರಿದ್ದಾರೆ. ಈ ದಿಸೆಯಲ್ಲಿ ಹೇಗೆ ಮುಂದುವರಿಯಬಹುದು ಎಂಬುದನ್ನು ಪರಿಶೀಲಿಸುವಂತೆ ಸಭೆಯಲ್ಲಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರಿಗೆ ಸೂಚಿಸಿದ್ದಾರೆ ಎಂದು ಹೇಳಿವೆ.

ಪರಮೇಶ್ವರ ಜತೆ ರಹಸ್ಯ ಸಭೆ

ಗೃಹ ಸಚಿವ ಜಿ. ಪರಮೇಶ್ವರ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಕೆಲಕಾಲ ರಹಸ್ಯ ಸಭೆ ನಡೆಸಿದ್ದಾರೆ. ಮಧ್ಯಾಹ್ನ ತಮ್ಮ ನಿವಾಸದಿಂದ ಗೃಹ ಸಚಿವರು ಹಾಗೂ ಡಿಜಿಪಿ ಜತೆ ರಹಸ್ಯ ಸ್ಥಳಕ್ಕೆ ತೆರಳಿದ ಅವರು, ಕೆಲವು ಗಂಟೆಗಳ ಬಳಿಕ ವಾಪಸಾಗಿದ್ದಾರೆ. ಪೊಲೀಸ್ ಅಧಿಕಾರಿಗಳ ವರ್ಗಾವಣೆ ವಿಷಯದಲ್ಲಿ ಕಾಂಗ್ರೆಸ್ ಶಾಸಕರ ಅಸಮಾಧಾನವೂ ಸೇರಿದಂತೆ ಹಲವು ವಿಷಯಗಳ ಕುರಿತು ರಹಸ್ಯ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ ಎಂದೂ ಮೂಲಗಳು ಹೇಳಿವೆ.

ಟೊಮೆಟೊ ತುಂಬಿದ ಲಾರಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರದಿಂದ ಟೊಮೆಟೊ ತುಂಬಿಕೊಂಡು ಮೂರು ದಿನದ ಹಿಂದೆ ರಾಜಸ್ಥಾನದ ಜೈಪುರಕ್ಕೆ ಹೊರಟಿದ್ದ ಲಾರಿ ಭಾನುವಾರ ನಾಪತ್ತೆಯಾಗಿದ್ದು, ಇಲ್ಲಿಯ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್‌ವಿಟಿ ಟ್ರೇಡರ್ಸ್‌ನ ಮುನಿರೆಡ್ಡಿ ಎಂಬ ಮಂಡಿ ವರ್ತಕರಿಗೆ ಸೇರಿದ ಅಂದಾಜು ₹ 21 ಲಕ್ಷ ಮೌಲ್ಯದ ಟೊಮೆಟೊವನ್ನು ಎಪಿಎಂಸಿ ಯಾರ್ಡ್‌ನಿಂದ ತುಂಬಿಕೊಂಡ ಲಾರಿ ಗುರುವಾರ (ಜುಲೈ 27) ಇಲ್ಲಿಂದ ಹೊರಟಿತ್ತು. ಶನಿವಾರ (ಜುಲೈ 29) ರಾತ್ರಿ 8.30ರವರೆಗೆ ಚಾಲಕ ಸಂಪರ್ಕದಲ್ಲಿದ್ದ. ಆ ಸಂದರ್ಭದಲ್ಲಿ ಲಾರಿ ಭೋಪಾಲ್ ಟೋಲ್ ದಾಟಿತ್ತು ಎಂದು ಮಂಡಿ ಮಾಲೀಕರು ದೂರಿನಲ್ಲಿ ತಿಳಿಸಿದ್ದಾರೆ.

ಆ ಬಳಿಕ ಲಾರಿ ಚಾಲಕ ಮೊಬೈಲ್ ಸಂಪರ್ಕಕ್ಕೆ ಸಿಗದಿದ್ದರಿಂದ ಆತಂಕ್ಕೆ ಒಳಗಾದ ಅವರು ಭಾನುವಾರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಅಪಘಾತ, ಕಳ್ಳತನ ಅಥವಾ ಮೊಬೈಲ್ ನೆಟ್‌ವರ್ಕ್ ತೊಂದರೆಯಿಂದ ಸಂಪರ್ಕ ಸಾಧ್ಯವಾಗುತ್ತಿಲ್ಲವೋ ಎಂಬ ಆಯಾಮಗಳಲ್ಲಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಜೊತೆಗೆ ಅಲ್ಲಿನ ಪೊಲೀಸ್ ಠಾಣೆಯ ಸಂಪರ್ಕಕ್ಕೂ ಪ್ರಯತ್ನಿಸಿದ್ದಾರೆ.

₹4 ಕೋಟಿ ವಹಿವಾಟು

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ರೈತ ಮುರಳಿ ಎಂಬುವರು ಕೋಲಾರದ ಎಪಿಎಂಸಿಯಲ್ಲಿ 45 ದಿನಗಳಲ್ಲಿ ಸುಮಾರು ₹ 4 ಕೋಟಿ ವಹಿವಾಟು ನಡೆಸಿದ್ದಾರೆ. ಸುಮಾರು 22 ಹೆಕ್ಟೇರ್‌ನಲ್ಲಿ ಅವರು ಟೊಮೆಟೊ ಬೆಳೆದಿದ್ದಾರೆ.

ಇಳಿಯದ ಬೆಲೆ

ಈ ಮಧ್ಯೆ ಟೊಮೆಟೊ ದರ ಇಳಿಯುವ ಲಕ್ಷಣ ಕಾಣಿಸುತ್ತಿಲ್ಲ. ಭಾನುವಾರ ಹರಾಜಿನಲ್ಲಿ 15 ಕೆ.ಜಿಯ ಟೊಮೆಟೊ ಬಾಕ್ಸ್ ಮತ್ತೆ ₹ 2,200ಕ್ಕೆ ಮಾರಾಟವಾಗಿದೆ.

ಈ ತಿಂಗಳಿನಲ್ಲಿ ಮೂರನೇ ಬಾರಿ ಈ ಮೊತ್ತಕ್ಕೆ ಹರಾಜಾಗಿದೆ. ಎಪಿಎಂಸಿಗೆ ಒಟ್ಟು 52,826 ಬಾಕ್ಸ್ ಟೊಮೆಟೊ ಆವಕವಾಗಿತ್ತು.

ಮಂಗಳೂರು ಸ್ಫೋಟದ ಪ್ರಮುಖ ರೂವಾರಿ: ನಾಗಪುರ ಪೊಲೀಸರ ತನಿಖೆ

ಕುಕ್ಕರ್ ಬಾಂಬ್ ತಯಾರಿಸಲು ಅಫ್ಸರ್ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಕೊಲೆ ಬೆದರಿಕೆಯೊಡ್ಡಿದ್ದ ಪ್ರಕರಣದಲ್ಲಿ ಬಂಧಿತನಾಗಿರುವ ಶಂಕಿತ ಉಗ್ರ ಅಫ್ಸರ್ ಪಾಷಾ, ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಪ್ರಮುಖ ರೂವಾರಿಯೆಂಬ ಸಂಗತಿ ನಾಗಪುರ ಪೊಲೀಸರ ತನಿಖೆಯಿಂದ ಹೊರಬಿದ್ದಿದೆ.

'ಲಷ್ಕರ್–ಎ–ತಯಬಾ' ನಿಷೇಧಿತ ಉಗ್ರ ಸಂಘಟನೆ ಜೊತೆ ನಂಟು ಹೊಂದಿದ್ದ ಅಫ್ಸರ್ ಪಾಷಾ, ಬಾಂಗ್ಲಾದೇಶದಲ್ಲಿ ಬಾಂಬ್ ತಯಾರಿಕೆ ತರಬೇತಿ ಪಡೆದಿದ್ದಾನೆ. ಜೈಲಿನಲ್ಲಿದ್ದುಕೊಂಡೇ ಈತ ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದ. ಗೋಡೆ ಬರಹ ಪ್ರಕರಣದಲ್ಲಿ ಬಂಧಿತನಾಗಿದ್ದ ಮೊಹಮ್ಮದ್ ಶಾರೀಕ್, ಕೆಲದಿನ ಜೈಲಿನಲ್ಲಿದ್ದ. ಇದೇ ಸಂದರ್ಭದಲ್ಲಿ ಶಾರೀಕ್‌ಗೆ ಕುಕ್ಕರ್ ಬಾಂಬ್ ತಯಾರಿಸುವುದು ಹೇಗೆ? ಎಂಬುದನ್ನು ಅಫ್ಸರ್ ಪಾಷಾ ಹೇಳಿಕೊಟ್ಟಿದ್ದ' ಎಂದು ನಾಗಪುರ ಪೊಲೀಸರು ತಿಳಿಸಿದ್ದಾರೆ.

'ಮಂಗಳೂರು ಬಾಂಬ್ ಸ್ಫೋಟಕ್ಕೆ ಮುನ್ನ ಅಫ್ಸರ್ ಪಾಷಾ ಬ್ಯಾಂಕ್ ಖಾತೆಗೆ ₹ 5 ಲಕ್ಷ ಜಮೆ ಆಗಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಅಬ್ದುಲ್ ಜಲೀಲ್ ಎಂಬಾತನ ಮೂಲಕ ಹಣ ಜಮೆ ಆಗಿರುವುದು ತನಿಖೆಯಿಂದ ಗೊತ್ತಾಗಿದೆ. ಇದಾದ ನಂತರವೇ ಶಾರೀಕ್, ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸಲು ಸಜ್ಜಾಗಿದ್ದ' ಎಂದು ಹೇಳಿದ್ದಾರೆ. 'ಮಂಗಳೂರು ಬಾಂಬ್ ಸ್ಫೋಟದ ಬಗ್ಗೆ ಎನ್‌ಐಎ ತನಿಖೆ ನಡೆಸುತ್ತಿದೆ. ಆದರೆ, ಅಫ್ಸರ್ ಪಾಷಾ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದುವರೆಗೂ ಲಭ್ಯವಾಗಿರಲಿಲ್ಲ. ನಿತಿನ್ ಗಡ್ಕರಿ ಅವರಿಗೆ ಕೊಲೆ ಬೆದರಿಕೆಯೊಡ್ಡಿರುವ ಪ್ರಕರಣದಲ್ಲಿ ವಿಚಾರಣೆ ನಡೆಸಿದಾಗ, ಅಫ್ಸರ್ ಪಾಷಾ ಮಾಹಿತಿ ಬಾಯ್ಬಿಟ್ಟಿದ್ದಾನೆ. ಈ ಬಗ್ಗೆ ಎನ್‌ಐಎ, ಎಟಿಎಸ್ ಹಾಗೂ ಕೇಂದ್ರ ಗುಪ್ತದಳ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ' ಎಂದು ನಾಗಪುರ ಪೊಲೀಸರು ತಿಳಿಸಿದ್ದಾರೆ.

ಚಿಂತಾಮಣಿಯ ಅಫ್ಸರ್ ಪಾಷಾ: ಕೋಲಾರ ಜಿಲ್ಲೆಯ ಚಿಂತಾಮಣಿಯ ಅಫ್ಸರ್ ಪಾಷಾ, 2012ರಲ್ಲಿ ಲಷ್ಕರ್–ಎ–ತಯಬಾ ಸಂಘಟನೆ ಸೇರಿದ್ದ. ಕೆಲದಿನ ಜಮ್ಮು–ಕಾಶ್ಮೀರದಲ್ಲಿದ್ದ. ಐಐಎಸ್ಸಿ ಮೇಲೆ ಉಗ್ರರು ದಾಳಿ ನಡೆಸಿದ್ದ ಪ್ರಕರಣದಲ್ಲಿ ಸಿಸಿಬಿ ಪೊಲೀಸರು ಈತನನ್ನು ಬಂಧಿಸಿದ್ದರು. ಕೆಲದಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿದ್ದ ಈತನನ್ನು, ಇತ್ತೀಚೆಗಷ್ಟೇ ಬೆಳಗಾವಿಯ ಹಿಂಡಲಗಾ ಜೈಲಿಗೆ ಸ್ಥಳಾಂತರಿಸಲಾಗಿತ್ತು.

ಹಿಂಡಲಗಾ ಜೈಲಿನಲ್ಲಿದ್ದ ಜಯೇಶ್ ಪೂಜಾರಿ ಅಲಿಯಾಸ್ ಶಾಹೀರ್, ದಾವೂದ್ ಇಬ್ರಾಹಿಂ ಸಹಚರನೆಂದು ಹೇಳಿಕೊಂಡು ನಿತಿನ್ ಗಡ್ಕರಿ ಅವರ ಸಾರ್ವಜನಿಕರ ಸಂಪರ್ಕ ಅಧಿಕಾರಿಗೆ ವಿಡಿಯೊ ಕರೆ ಮಾಡಿದ್ದ. ₹ 100 ಕೋಟಿ ನೀಡದಿದ್ದರೆ, ನಿತಿನ್ ಗಡ್ಕರಿಯನ್ನು ಕೊಲೆ ಮಾಡುವುದಾಗಿ ಬೆದರಿಸಿದ್ದ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ನಾಗಪುರ ಪೊಲೀಸರು, ಹಿಂಡಲಗಾ ಜೈಲಿನಿಂದ ಅಫ್ಸರ್ ಪಾಷಾನನ್ನು ಇತ್ತೀಚೆಗೆ ಕಸ್ಟಡಿಗೆ ಪಡೆದು ಕರೆದೊಯ್ದಿದ್ದರು. ಅಫ್ಸರ್ ಪಾಷಾ, ಮುಸ್ಲಿಂನ ಕೆಲ ಯುವಕರನ್ನು ಲಷ್ಕರ್–ಎ–ತಯಬಾ ಸಂಘಟನೆಗೆ ನೇಮಿಸುತ್ತಿದ್ದ. ಈ ಪ್ರಕರಣದಲ್ಲೂ ಈತ ಸಿಕ್ಕಿಬಿದ್ದಿದ್ದ. ಬಾಂಗ್ಲಾದೇಶದ ಢಾಕಾದಲ್ಲಿ ಕೆಲವು ತಿಂಗಳು ನೆಲೆಸಿದ್ದ ಪಾಷಾ, ಅಲ್ಲಿಯೇ ಬಾಂಬ್ ತಯಾರಿಕೆ ಬಗ್ಗೆ ತರಬೇತಿ ಪಡೆದಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ.

'ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ'

ಬೆಂಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ದೊಡ್ಡ ಹುದ್ದೆ. ಅದನ್ನು ಕೇಳಿ ಪಡೆಯಲು ಆಗುವುದಿಲ್ಲ. ನಾನು ಅಧ್ಯಕ್ಷ ಸ್ಥಾನದ ಆಕಾಂಕ್ಷಿಯೂ ಅಲ್ಲ' ಎಂದು ಬಿಜೆಪಿ ಮುಖಂಡ ಸಿ.ಟಿ. ರವಿ ಹೇಳಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿ, 'ನನಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಕೊಡುತ್ತಾರೆಯೆ ಎಂದು ತಿಳಿದಿಲ್ಲ. ಭವಿಷ್ಯದ ಬಗ್ಗೆ ಏನೂ ಗೊತ್ತಿಲ್ಲ. ವರಿಷ್ಠರು ಯಾವುದೇ ಜವಾಬ್ದಾರಿ ನೀಡಿದರೂ ನಿಭಾಯಿಸುತ್ತೇನೆ. ಎಚ್‌.ಡಿ. ದೇವೇಗೌಡರು ಹಿರಿಯ ರಾಜಕಾರಣಿ. ಯಾವ ಅರ್ಥದಲ್ಲಿ ನನ್ನ ಬಗ್ಗೆ ಹೇಳಿದ್ದಾರೋ ಗೊತ್ತಿಲ್ಲ' ಎಂದರು.

ಕುಕ್ಕೆ ದೇವಳದಲ್ಲಿ ಜಯ್ ಶಾ ಆಶ್ಲೇಷ ಬಲಿ ಸೇವೆ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪುತ್ರ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಅವರು ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭಾನುವಾರ ಭೇಟಿ ನೀಡಿ, ಆಶ್ಲೇಷ ಬಲಿ ಸೇವೆ ನಡೆಸಿದರು. ಅವರೊಂದಿಗೆ ಪತ್ನಿ ರಿಷಿತಾ ಶಾ ಹಾಗೂ ಕುಟುಂಬದವರು ಇದ್ದರು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ, ಕ್ಯಾಂಪ್ಕೊ ನಿರ್ದೇಶಕ ಕೃಷ್ಣಪ್ರಸಾದ ಮಡ್ತಿಲ ಜತೆಗಿದ್ದರು.

ದೇವಳದ ಅರ್ಚಕ ಸತ್ಯನಾರಾಯಣ ನೂರಿತ್ತಾಯ ಅವರು ಜಯ್ ಶಾ ಅವರನ್ನು ಗೌರವಿಸಿ ಪ್ರಸಾದ ನೀಡಿದರು.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಅವರು ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭೇಟಿ ನೀಡಿ ಆಶ್ಲೇಷ ಬಲಿ ಸೇವೆ ಸಮರ್ಪಿಸಿದರು

ಬಳಿಕ ಹೊಸಳಿಗಮ್ಮನ ದರ್ಶನ ಪಡೆದು ಪೂಜೆ ಸಲ್ಲಿಸಿದರು. ತಂದೆ ಅಮಿತ್ ಶಾ ಅವರ ಹೆಸರಿನಲ್ಲಿ ದೇವಳದಲ್ಲಿ ನಡೆಯುವ ನಿತ್ಯ ಅನ್ನ ದಾಸೋಹಕ್ಕೆ ದೇಣಿಗೆ ನೀಡಿ ಪ್ರಸಾದ ಸ್ವೀಕರಿಸಿದರು.

ದೇವಸ್ಥಾನದ ಆಡಳಿತ ಕಚೇರಿಗೆ ಭೇಟಿ ನೀಡಿದ ಜಯ್ ಶಾ ಅವರನ್ನು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನರಾಂ ಸುಳ್ಳಿ ಶಾಲು ಹೊದಿಸಿ ಗೌರವಿಸಿದರು. ದೇವಳದ ಸಹಾಯಕ ಕಾರ್ಯ ನಿರ್ವಹಣಾಧಿಕಾರಿ ಪುಷ್ಪಲತಾ ರಾವ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಪ್ರಸನ್ನ ದರ್ಬೆ, ಶೋಭಾ ಗಿರಿಧರ್, ಶಿಷ್ಟಾಚಾರ ವಿಭಾಗದ ಪ್ರಮೋದ್ ಕುಮಾರ್ ಎಸ್., ಮನೋಜ್ ಸುಬ್ರಹ್ಮಣ್ಯ, ಸುಬ್ರಹ್ಮಣ್ಯ ಠಾಣಾಧಿಕಾರಿ ಮಂಜುನಾಥ್ ಟಿ. ಇದ್ದರು.

'ದೇಶ, ವಿದೇಶಗಳಲ್ಲಿ ಪ್ರಖ್ಯಾತಿ ಪಡೆದ ನಾಗಾರಾಧನೆಯ ಪುಣ್ಯ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದು ದೇವರ ದರ್ಶನ ಪಡೆದಿರುವುದರಿಂದ ಸಂತಸ ಉಂಟಾಗಿದೆ. ಮುಂದೆಯೂ ಕ್ಷೇತ್ರಕ್ಕೆ ಬಂದು ದೇವರ ದರ್ಶನ ಪಡೆಯುವೆ' ಎಂದು ಜಯ್ ಶಾ ತಿಳಿಸಿದರು.

ಕಲಬುರಗಿ, ಯಾದಗಿರಿಯಲ್ಲಿ ಬಿರುಸಿನ ಮಳೆ

ಕಲಬುರಗಿ: ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಭಾನುವಾರ ಕೆಲ ಹೊತ್ತು ಬಿರುಸಿನ ಮಳೆ ಸುರಿಯಿತು. ಕಳೆದೆರಡು ದಿನಗಳಿಂದ ಮಳೆ ಬಿಡುವು ನೀಡಿತ್ತು. ಬೆಳಿಗ್ಗೆಯಿಂದಲೇ ನಗರದಲ್ಲಿ ಮೋಡ ಕವಿದ ವಾತಾವರಣವಿತ್ತು. ಜಿಲ್ಲೆಯ ಚಿಂಚೋಳಿ, ಕಾಳಗಿ, ಶಹಾಬಾದ್ ಹಾಗೂ ಯಾದಗಿರಿ ಮತ್ತು ಸುರಪುರದಲ್ಲಿ ಮಳೆಯಾಯಿತು.

ಸೋಮವಾರ ನಡೆಯಲಿರುವ ಕಂದಾಯ ಸಚಿವರ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಲು ಕಲಬುರಗಿಗೆ ಜಿಲ್ಲೆ ಬಂದಿರುವ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ. ರಶ್ಮಿ ಮಹೇಶ್ ಅವರು ಕಾಗಿಣಾ ಪ್ರವಾಹದಿಂದ ಜಲಾವೃತವಾಗುವ ಚಿತ್ತಾಪುರ ತಾಲ್ಲೂಕಿನ ದಂಡೋತಿ ಸಮೀಪದ ಸೇತುವೆಯನ್ನು ವೀಕ್ಷಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	112.85	9,488	3,172
ಹಾರಂಗಿ	2,859	2,857.07	4,000	4,000
ಕಬಿನಿ	2,284	2,283.22	4,750	3,500
ಹೇಮಾವತಿ	2,922	2,912.98	4,752	200
ಲಿಂಗನಮಕ್ಕಿ	1,819	1,787	18,487	2,151
ಸೂಪಾ (ಮೀ)	564	544.30	13,202	-
ಮಾಣಿ	595	580.30	1,681	-
ತುಂಗಭದ್ರಾ	1,633	1,623.71	54,365	1,603
ಮಲಪ್ರಭಾ	2079.50	2,063.20	5,263	194
ಘಟಪ್ರಭಾ	2,175	2,152.50	13,288	1,718
ಭದ್ರಾ	186	161.6	8,394	188
ಆಲಮಟ್ಟಿ (ಮೀ)	519.60	517.85	1,36,573	75,451
ನಾರಾಯಣಪುರ (ಮೀ)	492.25	491.35	57,000	29,500

*ನೆಲಮಟ್ಟದಿಂದ

ಮಣಿಪುರದ 100 ಅಭ್ಯರ್ಥಿಗಳಿಗೆ 'ಇನ್‌ಸೈಟ್ಸ್' ಉಚಿತ ತರಬೇತಿ

ಪ್ರಜಾವಾಣಿ ವಾರ್ತೆ

ವಿನಯ್ ಕುಮಾರ್

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಮಣಿಪುರದ 100 ಅಭ್ಯರ್ಥಿಗಳಿಗೆ ಉಚಿತ ತರಬೇತಿ ನೀಡಲು ಬೆಂಗಳೂರಿನ 'ಇನ್‌ಸೈಟ್ಸ್ ಐಎಎಸ್' ಅಕಾಡೆಮಿ ಮುಂದಾಗಿದೆ.

'ಸಮುದಾಯ ಕಾರ್ಯಕ್ರಮದ ಅಡಿ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಪದವೀಧರ ಅಭ್ಯರ್ಥಿಗಳು ಮಣಿಪುರದ ನಿವಾಸಿಗಳಾಗಿರಬೇಕು. ಆಯ್ಕೆಯಾದವರಿಗೆ ಬೆಂಗಳೂರು, ದೆಹಲಿ, ಲಖನೌ, ಧಾರವಾಡ, ಬೆಳ್ಳೂಡಿ, ಮೈಸೂರು, ಹೈದರಾಬಾದ್‌ನ ಇನ್‌ಸೈಟ್ಸ್ ಸಂಸ್ಥೆಯ ಕೇಂದ್ರಗಳಲ್ಲಿ ತರಬೇತಿ ನೀಡಲಾಗುವುದು. ಆನ್‌ಲೈನ್ ಅಥವಾ ಆಫ್‌ಲೈನ್ ಎರಡು ವಿಧಾನಗಳ ಮೂಲಕವೂ ತರಬೇತಿ ಪಡೆದುಕೊಳ್ಳಬಹುದು. ಮಣಿಪುರದ ಅಭ್ಯರ್ಥಿಗಳಿಗೆ ತರಬೇತಿಯು ಸಂಪೂರ್ಣ ಉಚಿತವಾಗಿರಲಿದೆ' ಎಂದು ಇನ್‌ಸೈಟ್ಸ್ ಐಎಎಸ್ ನಿರ್ದೇಶಕ ಜಿ.ಬಿ. ವಿನಯ್‌ಕುಮಾರ್ ಮಾಹಿತಿ ನೀಡಿದರು.

'ಒಂದೇ ದಿನದಲ್ಲಿ 300 ಅರ್ಜಿಗಳು ಬಂದಿವೆ. ಕೆಲವು ಮಾನದಂಡ ಆಧರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಆಗಸ್ಟ್ ಮೊದಲ ವಾರದಿಂದ ತರಬೇತಿ ಆರಂಭಿಸಲಾಗುವುದು' ಎಂದು ತಿಳಿಸಿದರು.

'ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವು ಶೈಕ್ಷಣಿಕ ಕ್ಷೇತ್ರದ ಮೇಲೂ ಪರಿಣಾಮ ಬೀರಿದೆ. ಅವರೊಂದಿಗೆ ನಾವಿದ್ದೇವೆ ಎಂದು ಧೈರ್ಯ ತುಂಬಲು ಇನ್‌ಸೈಟ್ಸ್ ಐಎಎಸ್ ಕಾರ್ಯಕ್ರಮ ರೂಪಿಸಿದೆ.

ಪಿಡಿಒ ಅಮಾನತು

ಬೀದರ್: ಶುದ್ಧ ಕುಡಿಯುವ ನೀರು ಪೂರೈಕೆ ವಿಷಯದಲ್ಲಿ ನಿರ್ಲಕ್ಷ್ಯ ತೋರಿದ ತಾಲ್ಲೂಕಿನ ಚಟ್ನಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ದೇವಪ್ಪ ಅವರನ್ನು ಅಮಾನತುಗೊಳಿಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಿಲ್ಪಾ ಎಂ. ಭಾನುವಾರ ಸಂಜೆ ಆದೇಶ ಹೊರಡಿಸಿದ್ದಾರೆ.

'ಕಲುಷಿತ ನೀರು ಸೇವಿಸಿ ತಾಲ್ಲೂಕಿನ ಬರೀದಾಬಾದ್ ಗ್ರಾಮದಲ್ಲಿ ಶನಿವಾರ ಇಬ್ಬರು ಅಸ್ವಸ್ಥರಾದ ವಿಷಯ ಗಂಭೀರವಾಗಿ ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪಿಡಿಒ ದೇವಪ್ಪ ಅವರನ್ನು ಅಮಾನತು ಮಾಡಲಾಗಿದೆ' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಬರೀದಾಬಾದ್ ಹಾಗೂ ಚಿಟಗುಪ್ಪ ತಾಲ್ಲೂಕಿನ ಬೆಳಕೇರಾ ಗ್ರಾಮದಲ್ಲಿ ಕಲುಷಿತ ನೀರು ಕುಡಿದು 40 ಮಂದಿ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಅವರು ಭಾನುವಾರ ಬೆಳಿಗ್ಗೆ ಬ್ರಿಮ್ಸ್‌ಗೆ ಭೇಟಿ ನೀಡಿ ರೋಗಿಗಳ ಯೋಗಕ್ಷೇಮ ವಿಚಾರಿಸಿದರು.

'ಪ್ರವಾಹ, ಬರ ಪರಿಸ್ಥಿತಿ ಸರ್ಕಾರ ಗಮನ ಹರಿಸುತ್ತಿಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದಲ್ಲಿ ಅತಿವೃಷ್ಟಿಯಿಂದ ಹಲವು ಮನೆಗಳಿಗೆ ಹಾನಿಯಾಗಿದೆ. ದೊಡ್ಡ ಪ್ರಮಾಣದಲ್ಲಿ ಪ್ರಾಣಹಾನಿಯೂ ಆಗಿದೆ. ಸುಮಾರು 11 ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಇದ್ದರೆ, ಉಳಿದೆಡೆ ಬರದ ಛಾಯೆ ಆವರಿಸಿದೆ. ರಾಜ್ಯ ಸರ್ಕಾರ ಈ ಬಗ್ಗೆ ಗಮನ ಹರಿಸುತ್ತಿಲ್ಲ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರಿಗೆ ತಕ್ಷಣವೇ ₹ 10 ಸಾವಿರ ತಾತ್ಕಾಲಿಕ ಪರಿಹಾರ ಕೊಡಬೇಕಿತ್ತು. ಆದರೆ, ಆ ಕೆಲಸವಾಗಿಲ್ಲ. ಬೆಳೆ ಹಾನಿಯ ಪ್ರಾಥಮಿಕ ಸಮೀಕ್ಷೆ ನಡೆದಿಲ್ಲ. ಯಾವ ಸಚಿವರೂ ಪ್ರವಾಹಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟಿಲ್ಲ. ಬರಪೀಡಿತ ಪ್ರದೇಶಗಳಲ್ಲಿ ಬೇರೆ ಬೆಳೆಗಳನ್ನು ಬೆಳೆಯಲು ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರದ ವ್ಯವಸ್ಥೆ ಮಾಡಿಲ್ಲ. ಮುಖ್ಯಮಂತ್ರಿಗಳು ವಿಡಿಯೊ ಸಂವಾದ ನಡೆಸಿದ್ದನ್ನು ಬಿಟ್ಟರೆ, ಯಾವುದೇ ಪರಿಹಾರ ಕಾರ್ಯವಾಗಿಲ್ಲ' ಎಂದು ದೂರಿದರು.

'ಆಡಳಿತ ಪಕ್ಷದವರು ಸ್ಥಾನ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಸಚಿವರು, ಶಾಸಕರ ಮಧ್ಯೆ ಉಂಟಾಗಿರುವ ಸಮರ ಬಗೆಹರಿಸುವುದರಲ್ಲೇ ಸಿ.ಎಂ ಕಾಲಹರಣ ಮಾಡುತ್ತಿದ್ದಾರೆ. ರಾಜ್ಯ ಜನರು ಸಂಕಷ್ಟದಲ್ಲಿದ್ದಾರೆ. ಆದರೆ, ಸರ್ಕಾರ ಅವರ ನೆರವಿಗೆ ಧಾವಿಸಿಲ್ಲ' ಎಂದು ಆಪಾದಿಸಿದರು.

'ರಾಜ್ಯ ಸರ್ಕಾರ ವರ್ಗಾವಣೆ ದಂಧೆಯಲ್ಲಿ ತೊಡಗಿದೆ. ಇದಕ್ಕಾಗಿ ಪೈಪೋಟಿ ನಡೆಯುತ್ತಿದೆ' ಎಂದು ಅವರು ಆರೋಪಿಸಿದರು.

ಆಗಸ್ಟ್ 2ರಂದು 'ಕೈ' ಸಭೆ: ಸಮನ್ವಯ ಸಮಿತಿ ರಚನೆ?

ಬೆಂಗಳೂರು: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಆಗಸ್ಟ್ 2ರಂದು ದೆಹಲಿಯಲ್ಲಿ ನಡೆಯಲಿರುವ ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕರ ಮತ್ತು ಸಚಿವರ ಸಭೆಯಲ್ಲಿ ಪಕ್ಷ ಮತ್ತು ಸರ್ಕಾರ ಸಮನ್ವಯದಿಂದ ಕೆಲಸ ಮಾಡುವ ಉದ್ದೇಶದಿಂದ 'ಸಮನ್ವಯ ಸಮಿತಿ' ರಚಿಸುವ ಸಾಧ್ಯತೆಯಿದೆ.

ದೆಹಲಿಯಲ್ಲಿರುವ ಪಕ್ಷದ 'ವಾರ್ ರೂಂ'ನಲ್ಲಿ ಅಂದು ಬೆಳಿಗ್ಗೆ ನಾಯಕರ ಮತ್ತು ಮಧ್ಯಾಹ್ನದ ಬಳಿಕ ಎಲ್ಲ ಸಚಿವರ ಜೊತೆ ಹೈಕಮಾಂಡ್ ಚರ್ಚೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ.

ಎಐಸಿಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಭಾಗವಹಿಸಲಿದ್ದಾರೆ.

ಲೋಕಸಭೆ ಚುನಾವಣೆ ಮುಂದಿರುವ ಹಿನ್ನೆಲೆಯಲ್ಲಿ ಸರ್ಕಾರ ಮತ್ತು ಪಕ್ಷದ ಮಧ್ಯೆ ಹೆಚ್ಚಿನ ಸಮನ್ವಯ ಅಗತ್ಯವಿದೆ. ಈಗಾಗಲೇ ಸಚಿವರ ವಿರುದ್ಧ ಪಕ್ಷದ ಕೆಲವು ಶಾಸಕರ ಮುನಿಸಿಕೊಂಡಿದ್ದು, ಇದು ಮುಂದುವರಿಯದಂತೆ ಎಚ್ಚರಿಕೆ ವಹಿಸಬೇಕಿದೆ. ಈ ಉದ್ದೇಶದಿಂದ, ಹಿರಿಯ ಸಚಿವರೊಬ್ಬರ ನೇತೃತ್ವದಲ್ಲಿ ಸಮನ್ವಯ ಸಮಿತಿ ರಚಿಸಲು ಚರ್ಚೆ ನಡೆದಿದೆ. ಎಲ್ಲ ತೀರ್ಮಾನಗಳನ್ನು ಈ ಸಮಿತಿಯಲ್ಲಿ ಚರ್ಚಿಸಿ, ಅನುಷ್ಠಾನಕ್ಕೆ ತರಲು ಉದ್ದೇಶಿಸಲಾಗಿದೆ ಎಂದೂ ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಸ್ಥಾನ ಸಿಗದ ಕಾರಣಕ್ಕೆ ಮುನಿಸಿಕೊಂಡಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಸೇರಿದಂತೆ ರಾಜ್ಯದ ಹಿರಿಯ ನಾಯಕರು ಈ ಸಭೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಸಚಿವ ಸಂಪುಟದ ಎಲ್ಲ ಸದಸ್ಯರು ಕೂಡಾ ಸಭೆಯಲ್ಲಿ ಭಾಗವಹಿಸುವ ಸಾಧ್ಯತೆ ಇದೆ.

ನೀಟ್: ಅರ್ಜಿ ಮಾಹಿತಿ ತಿದ್ದುಪಡಿಗೆ ಅವಕಾಶ

ಬೆಂಗಳೂರು: ನೀಟ್ ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಪ್ರವೇಶಕ್ಕೆ ನೋಂದಾಯಿಸಿ, ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿರುವ ಅಭ್ಯರ್ಥಿಗಳು ಜುಲೈ 31ರ ಬೆಳಿಗ್ಗೆ 11 ಗಂಟೆಯಿಂದ ಆಗಸ್ಟ್ 1ರ ಮಧ್ಯಾಹ್ನ 11.59ರವರೆಗೆ ಅರ್ಹತೆಗೆ ಅನುಗುಣವಾಗಿ ಅರ್ಜಿಯಲ್ಲಿನ ಮಾಹಿತಿಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ನೀಟ್ ಅರ್ಜಿಯಲ್ಲಿ ಘೋಷಿಸಿರುವ, ಆದರೆ ಇನ್ನೂ ಶುಲ್ಕ ಪಾವತಿ ಮಾಡದಿರುವ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸಿ ನಂತರ ತಿದ್ದುಪಡಿ ಮಾಡಿಕೊಳ್ಳಬಹುದು.

ಈ ಬಗ್ಗೆ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಮಾಹಿತಿ ಕಳುಹಿಸಲಾಗುವುದಿಲ್ಲ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನಕ್ಕೆ ತೆರೆ

ದಲಿತ ಸಾಹಿತ್ಯ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ವಿಜಯಪುರ: ದಲಿತ ಸಾಹಿತ್ಯ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ ಸೇರಿದಂತೆ ಐದು ಪ್ರಮುಖ ನಿರ್ಣಯಗಳನ್ನು ಇಲ್ಲಿ ನಡೆದ 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಭಾನುವಾರ ಕೈಗೊಳ್ಳಲಾಯಿತು.

ಗದುಗಿನ ದಲಿತ ಸಾಹಿತ್ಯ ಪರಿಷತ್ತು, ಸಾಹಿತಿ ಪ್ರೊ.ಎಚ್‌.ಟಿ.ಪೋತೆ ಅವರ ಸರ್ವಾಧ್ಯಕ್ಷತೆಯಲ್ಲಿ ಎರಡು ದಿನಗಳ ಕಾಲ ಸಮ್ಮೇಳನವನ್ನು ಆಯೋಜಿಸಿತ್ತು.

'ಡಾ.ಬಿ.ಆರ್. ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ ಮತ್ತು ನವಬೌದ್ಧರಿಗೆ ಪ್ರತ್ಯೇಕ ನಿಗಮ ಸ್ಥಾಪಿಸಬೇಕು. ಸಫಾಯಿ ಕರ್ಮಚಾರಿ ಕೆಲಸದಲ್ಲಿ ಮನುಷ್ಯರ ಬದಲು ಕಡ್ಡಾಯವಾಗಿ ಯಂತ್ರೋಪಕರಣ ಬಳಸಬೇಕು. ದಲಿತ ಸಾಹಿತ್ಯ ಪರಿಷತ್ತಿಗೆ ಶಾಶ್ವತ ಅನುದಾನ ನೀಡಬೇಕು ಎಂಬ ನಿರ್ಣಯಗಳನ್ನು ಕೈಗೊಂಡಿದ್ದು, ರಾಜ್ಯ ಸರ್ಕಾರ ಆದಷ್ಟು ಬೇಗ ಈ ಹಕ್ಕೊತ್ತಾಯಗಳಿಗೆ ಸ್ಪಂದಿಸಬೇಕು' ಎಂದು ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಅರ್ಜುನ ಗೊಳಸಂಗಿ ಎಂದು ಹೇಳಿದರು.

ವಿಜಯಪುರದಲ್ಲಿ ಭಾನುವಾರ ಸಮಾರೋಪಗೊಂಡ ಸಮ್ಮೇಳನದಲ್ಲಿ ದೇವು ಕೆ.ಅಂಬಿಗ(ಸಿನಿಮಾ), ಸೌಜನ್ಯ ಕರಡೋಣಿ(ಚಿತ್ರಕಲೆ), ಆರ್.ದೊಡ್ಡೇಗೌಡ, ಪರಶುರಾಮ ಶಿವಶರಣ, ವೀರ ಹನುಮಾನ, ಶ್ರೀಶೈಲ ನಾಗರಾಳ, ಡಾ.ಗವಿಸಿದ್ದಪ್ಪ ಪಾಟೀಲ, ಮುತುರ್ಜಾ ಬೇಗಂ ಕೊಡಗಲಿ, ಹಾರೋಹಳ್ಳಿ ರವೀಂದ್ರ ಮತ್ತು ನರೇಂದ್ರ ನಾಗವಾಲ(ಸಮಾಜ ಸೇವೆ) ಅವರಿಗೆ 'ಬೆಳ್ಳಿ ಸಂಭ್ರಮ' ಪ್ರಶಸ್ತಿ ನೀಡಲಾಯಿತು. ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಅರ್ಜುನ ಗೊಳಸಂಗಿ, ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ಸಮ್ಮೇಳನದ ಸರ್ವಾಧ್ಯಕ್ಷ ಪ್ರೊ.ಎಚ್‌ಟಿ.ಪೋತೆ ಇದ್ದರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪ್ರದಾನ: ಲೇಖಕರಿಗೆ ಪುಸ್ತಕ ಪ್ರಶಸ್ತಿ, ಸಾಧಕರಿಗೆ ಬೆಳ್ಳಿ ಸಂಭ್ರಮ ಪ್ರಶಸ್ತಿ ಹಾಗೂ ದಲಿತ ಸಾಹಿತ್ಯ ಪರಿಷತ್ ಅತ್ಯುತ್ತಮ ಸಂಘಟಕ ಸಾಧಕಶ್ರೀ ಪ್ರಶಸ್ತಿಯನ್ನು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಪ್ರದಾನ ಮಾಡಿದರು.

'ದಲಿತ ಸಾಹಿತ್ಯ ಜಗತ್ತಿನ ಇತರೆ ಭಾಷೆಗಳಿಗೆ ಹೆಚ್ಚೆಚ್ಚು ಭಾಷಾಂತರವಾಗಬೇಕಿದೆ. ದಲಿತ ಸಾಹಿತ್ಯ ಹೇಗಿದೆಯೋ ಹಾಗೇ ಅನ್ಯ ಭಾಷೆಗಳಿಗೆ ಅನುವಾದ ಮಾಡಲು ಅನ್ಯರಿಗಿಂತ ದಲಿತ ಭಾಷಾಂತರಕಾರರೇ ಹೆಚ್ಚು ಸೂಕ್ತ. ಆಗ ಮಾತ್ರ ಯಥಾಪ್ರಕಾರ ಅನುವಾದ ಸಾಧ್ಯ' ಎಂದು ಚಿನ್ನಸ್ವಾಮಿ ಅಭಿಪ್ರಾಯಪಟ್ಟರು.

'ದಲಿತ ಬರಹಗಾರರಿಗೆ ಆಳವಾದ ಮತ್ತು ವಿಸ್ತಾರವಾದ ಅಧ್ಯಯನ ಅಗತ್ಯ ಇದೆ. ದಲಿತ ಬರಹಗಾರರು, ಲೇಖಕರು ಅಧ್ಯಯನ, ಸಂಶೋಧನೆಯಲ್ಲಿ ಹೆಚ್ಚೆಚ್ಚು ತೊಡಗಿದಾಗ ಹೆಚ್ಚೆಚ್ಚು ಬರೆಯಬಹುದು, ದಲಿತರು ವಿಶ್ವ ಸಾಹಿತ್ಯ ಓದಿ, ವಿಶ್ವ ಸಾಹಿತ್ಯ ರಚಿಸುವಂತಾಗಬೇಕು' ಎಂದು ಹೇಳಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ದ್ವಿಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ
ಮುಖ್ಯ ಅಭಿಯಂತರರ ಕಛೇರಿ (ಕಾವೇರಿ–ಕಾರ್ಯಾಚರಣೆ ಮತ್ತು ನಿರ್ವಹಣೆ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009	
ನಂ. ಬೆಂಜಮಂ/ಮುಅ(ಕಾ–ಕಾ&ನಿ)ಟಿಇ/ತಾಂಸ–01/2022/459/2023–24 ದಿನಾಂಕ: 27.07.2023	
ಟಿ.ಜಿ. ಹಳ್ಳಿಯಲ್ಲಿನ 66/6.6 ಕೆವಿ ಸ್ವಿಚ್ ಯಾರ್ಡ್ ಅನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ.	ರೂ. 1,04,00,000/– / ರೂ. 1,84,000/–
ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **14.08.2023**ರ ಮಧ್ಯಾಹ್ನ **3.00** ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **16.08.2023** ರಂದು ಸಂಜೆ **4.00** ಗಂಟೆಗೆ ತೆರೆಯಲಾಗುವುದು. ಸಹಿ/– ಮುಖ್ಯ ಅಭಿಯಂತರರು (ಕಾವೇರಿ–ಕಾರ್ಯಾಚರಣೆ ಮತ್ತು ನಿರ್ವಹಣೆ)	
ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009	
ನಂ. ಬೆಂಜಮಂ/ಪ್ರಮುಅ/ಮುಅ(ದ)/ಅಮುಅ(ದ)–1/ಉಮುಅ(ನಿ)–1/ತಾಂಸ(ದ)/1310/2023–24 ದಿನಾಂಕ: 28.07.2023	
ಸಕಾನಿಅ (ದಕ್ಷಿಣ–1–1) ಉಪ ವಿಭಾಗದಡಿ ಬರುವ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಡಿಐ ವಾಲ್ವ್‌ಗಳನ್ನು ಅಳವಡಿಸುವುದರ ಜೊತೆಗೆ ಬನ್ನೇರುಘಟ್ಟ ಸರ್ಕಲ್‌ನಿಂದ (ಬನ್ನೇರುಘಟ್ಟ ಪೊಲೀಸ್ ಸ್ಟೇಷನ್ ಎದುರು) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದವರೆಗೆ 200 ಮಿಮೀ ವ್ಯಾಸದ ಡಿಐ ಫೀಡರ್ ಕೊಳವೆ ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 120.82 ಲಕ್ಷಗಳು / ರೂ. 2.14 ಲಕ್ಷಗಳು
ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **16.08.2023**ರ ಮಧ್ಯಾಹ್ನ **3.00** ಗಂಟೆಯವರೆಗೆ. ಬಿಡ್‌ಗಳನ್ನು ದಿನಾಂಕ: **18.08.2023** ರಂದು ಸಂಜೆ **4.00** ಗಂಟೆಯ ನಂತರ ತೆರೆಯಲಾಗುವುದು. ಸಹಿ/– ಮುಖ್ಯ ಅಭಿಯಂತರರು (ದಕ್ಷಿಣ)	

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/MIA/711/2023-24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಹಣವು ಸ್ವಾತಂತ್ರ್ಯ ತಂದುಕೊಡುತ್ತದೆ ಎಂಬ ಆಶಾಭಾವನೆ ನಿಮ್ಮದಾಗಿದ್ದರೆ, ಅದೆಂದೂ ಈಡೇರದು. ನಿಜವಾಗಲೂ ನಮಗೆ ಭದ್ರತಾ ಭಾವನೆ ತಂದುಕೊಡುವುದು, ನಾವು ಹೊಂದುವ ಜ್ಞಾನ, ಅನುಭವ ಮತ್ತು ಸಾಮರ್ಥ್ಯ.

-ಹೆನ್ರಿ ಫೋರ್ಡ್

ಕೋವಿಡ್: ಅಕ್ರಮ ಕುರಿತು ಸಮಗ್ರ ತನಿಖೆ ನಡೆಯಲಿ

ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿದ್ದ ಬಿಜೆಪಿ ನೇತೃತ್ವದ ಸರ್ಕಾರವು ಕೋವಿಡ್‌ನಿಂದ ಸಂಭವಿಸಿದ ಸಾವುಗಳ ಸಂಖ್ಯೆಯಲ್ಲಿ 1.20 ಲಕ್ಷದಷ್ಟು ಕಡಿಮೆ ಲೆಕ್ಕ ತೋರಿಸಿರುವುದೂ ಸೇರಿದಂತೆ ಗಂಭೀರ ಸ್ವರೂಪದ ಅಕ್ರಮಗಳನ್ನು ಎಸಗಿದೆ ಎಂದು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ (ಪಿಎಸಿ) ದೋಷಾರೋಪ ಹೊರಿಸಿದೆ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ, ಡಾ. ಕೆ.ಸುಧಾಕರ್ ಆರೋಗ್ಯ ಸಚಿವರಾಗಿದ್ದ ಅವಧಿಯಲ್ಲಿ ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆ ಹೆಸರಿನಲ್ಲಿ ಭಾರಿ ಪ್ರಮಾಣದ ಅಕ್ರಮಗಳು ನಡೆದಿವೆ ಎಂದು ಪಿಎಸಿ ವರದಿ ಹೇಳಿದೆ. ಔಷಧಿಗಳು ಹಾಗೂ ವೈದ್ಯಕೀಯ ಯಂತ್ರೋಪಕರಣಗಳ ಖರೀದಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂದು ವರದಿ ಬೊಟ್ಟು ಮಾಡಿದೆ. ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆ ಹೆಸರಿನಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ದೂರುಗಳನ್ನು ಆಧರಿಸಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಈ ಕುರಿತು ಪರಿಶೀಲನೆ ಆರಂಭಿಸಿತ್ತು. 2020 ಹಾಗೂ 2021ರ ಅವಧಿಯಲ್ಲಿ ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆಗೆ ಸಂಬಂಧಿಸಿದ ಕ್ರಮಗಳ ಕುರಿತು ಸಮಿತಿಯು ಪರಿಶೀಲನೆಗೆ ಮುಂದಾಗಿತ್ತು. ಆದರೆ, ಆರಂಭದಿಂದಲೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಮಿತಿಗೆ ಅಗತ್ಯ ಮಾಹಿತಿ, ದಾಖಲೆಗಳನ್ನು ಒದಗಿಸದೇ ಅಸಹಕಾರ ತೋರಿದ್ದರು. ವಿಶೇಷ ಲೆಕ್ಕಪರಿಶೋಧನೆ ನಡೆಸಬೇಕೆಂಬ ಸಮಿತಿಯ ಕೋರಿಕೆಯನ್ನು ತಳ್ಳಿ-ಹಾಕಲಾಗಿತ್ತು. ಈ ಎಲ್ಲ ಅಡಚಣೆಗಳ ನಡುವೆಯೂ ಲಭ್ಯವಿದ್ದ ಮಾಹಿತಿ ಮತ್ತು ದಾಖಲೆಗಳ ಆಧಾರದಲ್ಲಿ ವರದಿಯೊಂದನ್ನು ಸಿದ್ಧಪಡಿಸಿರುವ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಅದನ್ನು ವಿಧಾನಮಂಡಲಕ್ಕೆ ಒಪ್ಪಿಸಿದೆ. ಕೋವಿಡ್ ಸಾಂಕ್ರಾಮಿಕವು ತೀವ್ರವಾಗಿ ಕಾಡುತ್ತಿದ್ದ 2020 ಮತ್ತು 2021ರ ಅವಧಿಯಲ್ಲಿ ರಾಜ್ಯದಲ್ಲಿ ಸಂಭವಿಸಿದ ಸಾವುಗಳ ಸಂಖ್ಯೆಗೆ ಸಂಬಂಧಿಸಿದ ಮಾಹಿತಿಯಲ್ಲಿ ದೊಡ್ಡ ಪ್ರಮಾಣದ ವ್ಯತ್ಯಾಸ ಇರುವುದನ್ನು ಸಮಿತಿ ಗುರುತಿಸಿದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಸಮಿತಿಗೆ ಒದಗಿಸಿರುವ ಅಂಕಿಅಂಶಗಳ ಪ್ರಕಾರ, 2021ರ ಜನವರಿಯಿಂದ ಜುಲೈವರೆಗಿನ ಅವಧಿಯಲ್ಲಿ ರಾಜ್ಯದಲ್ಲಿ 4,26,943 ಸಾವುಗಳು ದಾಖಲಾಗಿವೆ. 2020ರ ಇದೇ ಅವಧಿಯಲ್ಲಿ 2,69,029 ಸಾವುಗಳು ಮಾತ್ರ ದಾಖಲಾಗಿವೆ. 2021ರ ಆಗಸ್ಟ್ 24ರವರೆಗೆ ಕೋವಿಡ್‌ನಿಂದ 37,206 ಮಂದಿ ಮಾತ್ರ ಮೃತಪಟ್ಟಿರುವುದು 'ಮರಣ ಆಡಿಟ್'ನಲ್ಲಿ ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಸಮಿತಿಗೆ ಸ್ಪಷ್ಟೀಕರಣ ನೀಡಿದ್ದರು. ಆರೋಗ್ಯ ಇಲಾಖೆ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಂಕಿಅಂಶಗಳ ಮಧ್ಯೆ ಗಣನೀಯ ವ್ಯತ್ಯಾಸ ಇರುವುದನ್ನು ಗುರುತಿಸಿರುವ ಸಮಿತಿ, ಆರೋಗ್ಯ ಇಲಾಖೆಯು ಕೋವಿಡ್ ಅವಧಿಯಲ್ಲಿನ ಸಾವುಗಳ ಸಂಖ್ಯೆಯಲ್ಲಿ 1.20 ಲಕ್ಷದಷ್ಟು ಕಡಿಮೆ ತೋರಿಸುವ ಮೂಲಕ ಘೋರ ಅಪರಾಧ ಎಸಗಿದೆ ಎಂದು ಅಭಿಪ್ರಾಯಪಟ್ಟಿದೆ.

ಕೋವಿಡ್ ಹೆಸರಿನಲ್ಲಿ ಭ್ರಷ್ಟಾಚಾರ ನಡೆದಿರುವುದು ದೃಢಪಟ್ಟರೆ, ಅಧಿಕಾರಿಗಳು ಮಾತ್ರವಲ್ಲ ಅದಕ್ಕೆ ಕಾರಣರಾದ ರಾಜಕೀಯ ನಾಯಕರ ವಿರುದ್ಧವೂ ಕ್ರಮ ಜರುಗಿಸಬೇಕು

ಐವರ್‌ಮೆಕ್ಟಿನ್ ಮಾತ್ರೆಗಳಿಂದ ಕೋವಿಡ್ ಸೋಂಕಿತರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದ ಬಳಿಕವೂ 1.10 ಕೋಟಿಯಷ್ಟು ಇದೇ ಮಾತ್ರೆಗಳನ್ನು ಖರೀದಿಸುವ ಮೂಲಕ ರಾಜ್ಯ ಆರೋಗ್ಯ ಇಲಾಖೆ ಲೋಪ ಎಸಗಿತ್ತು. ಅಷ್ಟೇ ಅಲ್ಲದೆ ಈ ಮಾತ್ರೆಗಳ ವಿತರಣೆ ಮತ್ತು ಬಾಕಿ ಉಳಿದ ಮಾತ್ರೆಗಳ ಕುರಿತು ಇಲಾಖೆಯ ಬಳಿ ಸರಿಯಾದ ಮಾಹಿತಿಯೇ ಇರಲಿಲ್ಲ ಎಂಬುದು ಪಿಎಸಿ ವರದಿಯಲ್ಲಿ ಬಹಿರಂಗವಾಗಿದೆ. ದುಬಾರಿ ದರಕ್ಕೆ ಆ್ಯಂಫೊಟೆರಿಸಿನ್ ಲಸಿಕೆ ಖರೀದಿ, ರೆಮ್‌ಡಿಸಿವಿಯರ್ ಲಸಿಕೆ ಖರೀದಿಗೆ ₹ 5 ಕೋಟಿ ಹೆಚ್ಚುವರಿ ವೆಚ್ಚ, ಆರೋಗ್ಯ ಇಲಾಖೆಯ ಸಹಾಯವಾಣಿ ಇದ್ದಾಗ್ಯೂ ದುಬಾರಿ ದರ ತೆತ್ತು ಖಾಸಗಿ ಸಹಾಯವಾಣಿ ಸೇವೆಯನ್ನು ಪಡೆದುಕೊಂಡಿರುವುದು, ವೈದ್ಯಕೀಯ ಯಂತ್ರೋಪಕರಣಗಳಿಗೆ ಮಾರುಕಟ್ಟೆ ದರದ ಹಲವು ಪಟ್ಟು ಹೆಚ್ಚು ಪಾವತಿ, ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿದ ಕಂಪನಿಗಳಿಗೆ ಪುನಃ ಗುತ್ತಿಗೆ ನೀಡಿರುವುದು ಸೇರಿದಂತೆ ಹಲವು ಬಗೆಯ ಅವ್ಯವಹಾರಗಳು ನಡೆದಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ಸಮಿತಿ ಹೇಳಿದೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ವೆಂಟಿಲೇಟರ್‌ಗಳ ಕೊರತೆ ಗಣನೀಯವಾಗಿದ್ದರೂ 'ಪಿಎಂ-ಕೇರ್ಸ್' ನಿಧಿಯ ಅಡಿಯಲ್ಲಿ ಒದಗಿಸಿದ್ದ 165 ವೆಂಟಿಲೇಟರ್‌ಗಳನ್ನು ಖಾಸಗಿ ಆಸ್ಪತ್ರೆಗಳಿಗೆ ವಿತರಿಸಿದ್ದ ಆರೋಗ್ಯ ಇಲಾಖೆಯ ಕ್ರಮವು ಜನದ್ರೋಹಿ ನಿರ್ಧಾರ ಎಂದು ಪಿಎಸಿ ದೂಷಿಸಿದೆ. ವೆಂಟಿಲೇಟರ್‌ಗಳು, ವೈದ್ಯಕೀಯ ಉಪಕರಣಗಳು, ಆಮ್ಲಜನಕ ಮತ್ತು ಔಷಧಿಗಳ ಕೊರತೆ ತೀವ್ರವಾಗಿ ಬಾಧಿಸಲು ಅಧಿಕಾರಿಗಳೇ ಕಾರಣ ಎಂದು ಹೇಳಿದೆ. ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆ ಹೆಸರಿನಲ್ಲಿ ನಡೆದಿರುವ 'ಹಗರಣ'ದ ಕುರಿತು ಪ್ರತಿಷ್ಠಿತ ಸ್ವಾಯತ್ತ ತನಿಖಾ ಸಂಸ್ಥೆಯ ಮೂಲಕ ತನಿಖೆ ನಡೆಸುವಂತೆ ಸಮಿತಿ ಶಿಫಾರಸು ಮಾಡಿದೆ. ಪಿಎಸಿ ತನಿಖೆಯಲ್ಲಿ ಪತ್ತೆಯಾಗಿರುವ ಅನೇಕ ಸಂಗತಿಗಳು ಗಂಭೀರವಾಗಿವೆ. ಈ ಕುರಿತು ತನಿಖೆ ನಡೆಯಲೇಬೇಕಿದೆ. ಕೋವಿಡ್ ಹೆಸರಿನಲ್ಲಿ ಭ್ರಷ್ಟಾಚಾರ ನಡೆದಿರುವುದು ದೃಢಪಟ್ಟರೆ ಅಧಿಕಾರಿಗಳು ಮಾತ್ರವಲ್ಲ ಅದಕ್ಕೆ ಕಾರಣರಾದ ರಾಜಕೀಯ ನಾಯಕರ ವಿರುದ್ಧವೂ ಕ್ರಮ ಜರುಗಿಸಬೇಕು. ಕೋವಿಡ್‌ನಿಂದ ಸಂಭವಿಸಿದ ಸಾವಿನ ಸಂಖ್ಯೆಯನ್ನು ಕಡಿಮೆ ತೋರಿಸುವ ದೋಷಪೂರಿತ ಕ್ರಮದಿಂದಾಗಿ ಕೋವಿಡ್ ಸಾವುಗಳೆಂದು ದಾಖಲಾಗದ ಪ್ರಕರಣಗಳನ್ನು ಪತ್ತೆಹಚ್ಚಿ, ದಾಖಲಿಸುವುದಕ್ಕೆ ಆದ್ಯತೆ ನೀಡಬೇಕು. ತಪ್ಪು ಕ್ರಮದಿಂದ ಪರಿಹಾರ ವಂಚಿತವಾಗಿರುವ ಸಂತ್ರಸ್ತ ಕುಟುಂಬಗಳನ್ನು ಗುರುತಿಸಿ ಕೋವಿಡ್ ಮರಣ ಪರಿಹಾರ ಪಾವತಿಗೆ ಕ್ರಮ ಕೈಗೊಳ್ಳಬೇಕು.

ದಿನದ ಟ್ವೀಟ್

ಇಲ್ಲಿದೆ ಸಮಸ್ಯೆಯ ಮೂಲ

ಈ ಕಾಯಿಲೆಯ ಬಗ್ಗೆ ಕೆಲವು ದಶಕಗಳ ಹಿಂದೆ ಗೊತ್ತೇ ಇರಲಿಲ್ಲ! ಬದಲಾಗಿದ್ದು ಏನೆಂದರೆ– ಪ್ಯಾಕ್ ಆದ ಮತ್ತು ರೆಸ್ಟೋರೆಂಟ್‌ಗಳಲ್ಲಿ ದೊರೆಯುವ ಬಹುತೇಕ ಆಹಾರದಲ್ಲಿ (ವಿಶೇಷವಾಗಿ ಗ್ರೇವಿ, ಸಾಸ್ ಮತ್ತು ಸಲಾಡ್ ಡ್ರೆಸ್ಸಿಂಗ್) ಸಕ್ಕರೆ ಅಥವಾ ಎಚ್‌ಎಫ್‌ಸಿಎಸ್ (ಹೈ ಫ್ರುಕ್ಟೋಸ್ ಕಾರ್ನ್ ಸಿರಪ್) ಅನ್ನು, ಸೇವಿಸುವವರ ಅರಿವಿಗೇ ಬಾರದಂತೆ ಸೇರಿಸಲಾಗಿರುತ್ತದೆ. ಸಿಹಿ ಪೇಯಗಳು, ಹಣ್ಣಿನ ಜ್ಯೂಸ್‌ಗಳು ಮತ್ತು ಹಣ್ಣುಗಳು ಈ ಬಗೆಯ ಸಕ್ಕರೆ ಹೊಂದಿರುವ ಮತ್ತೊಂದು ಪ್ರಮುಖ ಮೂಲ. ಫ್ಯಾಟಿ ಲಿವರ್ ಸಮಸ್ಯೆ ಕೊಬ್ಬಿನ ಪದಾರ್ಥಗಳನ್ನು ಸೇವಿಸುವುದರಿಂದ ಬರುವುದಿಲ್ಲ, ಫ್ರುಕ್ಟೋಸ್ ಮತ್ತು ಕಾರ್ಬೊಹೈಡ್ರೇಟ್‌ಗಳ ಅತಿಯಾದ ಸೇವನೆಯಿಂದ ಬರುತ್ತದೆ.

(ದೇಶದ ವಯಸ್ಕರಲ್ಲಿ ಫ್ಯಾಟಿ ಲಿವರ್ (ಪಿತ್ತಜನಕಾಂಗದಲ್ಲಿ ಕೊಬ್ಬು ಸೇರಿಕೊಳ್ಳುವುದು) ಸಮಸ್ಯೆ ಹೆಚ್ಚುತ್ತಿದೆ ಎಂಬ ಸಮೀಕ್ಷಾ ವರದಿಗೆ ಪ್ರತಿಕ್ರಿಯೆ)

ಪ್ರಮೀಳಾ ಮುಂದ್ರಾ, ಪೌಷ್ಟಿಕಾಂಶ ತಜ್ಞೆ

ಕಿಡಿನುಡಿ



ಹಾಗೇ ಆಗಲಿ ಸರ್! ನಾವು ಹಾಗೇ ಮಾಡುತ್ತೇವೆ. ನೀವು ಮಣಿಪುರಕ್ಕೆ ಹೋಗಿ ಅಲ್ಲಿನ ಸಮಸ್ಯೆ ಬಗೆಹರಿಸಿ ಎಂದು ನಾವೀಗ ನಿಮ್ಮನ್ನು ಆಗ್ರಹಿಸುತ್ತೇವೆ...

(ಸ್ವಾತಂತ್ರ್ಯ ದಿನಾಚರಣೆ ಸಲುವಾಗಿ ಮನೆಯ ಮೇಲೆ ತ್ರಿವರ್ಣ ಧ್ವಜ ಹಾರಿಸುವಂತೆ ಮನ್ ಕಿ ಬಾತ್‌ನಲ್ಲಿ ಜನರಿಗೆ ಪ್ರಧಾನಿ ಕರೆ ಕೊಟ್ಟಿರುವುದಕ್ಕೆ ಪ್ರತಿಕ್ರಿಯೆ)

ಅತುಲ್ ಖತ್ರೀ, ಸ್ಟ್ಯಾಂಡಪ್ ಕಮಿಡಿಯನ್

25 ವರ್ಷಗಳ ಹಿಂದೆ

ಶುಕ್ರವಾರ, 31-7-1998

• **ಅಪಘಾತ: ಹಿಡಿದಿದ್ದ ಇಬ್ಬರು ಕಳ್ಳರು, ಪೇದೆ ಸೇರಿ ಐವರ ಸಾವು**

ತುಮಕೂರು, ಜುಲೈ 30– ಶ್ರೀಗಂಧದ ಮರದ ತುಂಡುಗಳ ಕಳ್ಳಸಾಗಾಣಿಕೆದಾರರನ್ನು ಮೆಟಡಾರ್‌ನಲ್ಲಿ ಪೊಲೀಸರು ಕರೆದುಕೊಂಡು ಬರುತ್ತಿದ್ದಾಗ ಖಾಸಗಿ ಬಸ್ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ, ಒಬ್ಬ ಕಾನ್‌ಸ್ಟೆಬಲ್ ಮತ್ತು ಇಬ್ಬರು ಆರೋಪಿಗಳು ಸೇರಿದಂತೆ ಐವರು ಮೃತಪಟ್ಟ ಘಟನೆ ಶಿರಾ ಸಮೀಪದ ಬುಕ್ಕಾಪಟ್ಟಣದಲ್ಲಿ ನಡೆದಿದೆ.

ಸಕಲೇಶಪುರದಿಂದ ಶ್ರೀಗಂಧದ ಮರದ ತುಂಡುಗಳನ್ನು ತುಂಬಿಕೊಂಡು ಮಡಕಶಿರಾ ಕಡೆಗೆ ಹೋಗುತ್ತಿದ್ದ ಕಳ್ಳಸಾಗಾಣಿಕೆದಾರರ ಗುಂಪನ್ನು ನಿನ್ನೆ ರಾತ್ರಿ ಪೊಲೀಸರು ಬುಕ್ಕಾಪಟ್ಟಣ ಸಮೀಪ ಬಂಧಿಸಿದ್ದರು. ಇಂದು ಬೆಳಿಗ್ಗೆ ಎಂಟು ಆರೋಪಿಗಳನ್ನು ವಶಪಡಿಸಿಕೊಂಡ ಮೆಟಡಾರ್‌ನಲ್ಲಿಯೇ ಪೊಲೀಸರು ಶಿರಾಕ್ಕೆ ಕರೆದುಕೊಂಡು ಬರುತ್ತಿದ್ದರು.

ಅಪಘಾತದಲ್ಲಿ ಕಾನ್‌ಸ್ಟೆಬಲ್ ನಾಗರಾಜ್ (30), ಆರೋಪಿಗಳಾದ ಚಾಲಕ ಶೇಖರ್ (25) ಮತ್ತು ಉಮೇಶ್ ಹಾಗೂ ಪೊಲೀಸರು ತಮ್ಮ ಸಹಾಯಕ್ಕೆಂದು ಬುಕ್ಕಾಪಟ್ಟಣದಿಂದ ಕರೆದುಕೊಂಡು ಬಂದಿದ್ದ ತಿಪ್ಪೇಸ್ವಾಮಿ (45) ಹಾಗೂ ಚಿತ್ರಶೇಖರ್ (30) ಮೃತಪಟ್ಟಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 31-7-1973

• **ರಾಜ್ಯಕ್ಕೆ 'ಕರ್ನಾಟಕ' ಹೆಸರು: ವಿಧೇಯಕಕ್ಕೆ ಲೋಕಸಭೆ ಅಸ್ತು**

ನವದೆಹಲಿ, ಜುಲೈ 30– ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರಿಡಲು ವಿಧೇಯಕವನ್ನು ಲೋಕಸಭೆ ಇಂದು ಹರ್ಷೋದ್ಗಾರಗಳಿಂದ ಸ್ವಾಗತಿಸಿ ಅಂಗೀಕರಿಸಿತು. ವಿಧೇಯಕವನ್ನು ಮಂಡಿಸಿದ ಕೇಂದ್ರ ಗೃಹ ಖಾತೆಯ ಸ್ಟೇಟ್ ಸಚಿವ ಕೆ.ಸಿ. ಪಂತ್ ಅವರು ಚರ್ಚೆಗೆ ಉತ್ತರ ನೀಡಿ, ರಾಜ್ಯದ ಜನತೆಗೆ ಶುಭ ಹಾರೈಸಿದರು. ಅನೇಕ ದಿಶೆಗಳಲ್ಲಿ ರಾಜ್ಯವು 'ಅಸೂಯೆ ಪಡುವಂತಹ' ದಾಖಲೆಗಳನ್ನು ಪಡೆದಿದೆ ಎಂದರು.

ಸದಾ ಚುನಾವಣಾ ಮನಃಸ್ಥಿತಿಯ ಬಿಜೆಪಿಯು ಮೋದಿ ಸುತ್ತ ಸಂಕಥನ ರೂಪಿಸುತ್ತಲೇ ಇರುತ್ತದೆ

ಮೈಕೊಡವಿದ ಎನ್‌ಡಿಎ: ಏನು ಕಾರಣ?

ವಿಶ್ಲೇಷಣೆ

ಬಿ.ಎಸ್. ಅರುಣ್

ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟಕ್ಕೆ (ಎನ್‌ಡಿಎ) ಪುನಶ್ಚೇತನ ನೀಡಿರುವುದು ರಾಜಕೀಯ ವಿಶ್ಲೇಷಕರಲ್ಲಿ ಆಶ್ಚರ್ಯ ಮೂಡಿಸಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಭಾರಿ ಗೆಲುವು ಸಾಧಿಸಿದ ನಂತರ ಬಿಜೆಪಿಯು ತನ್ನ ಹಲವು ಮಿತ್ರಪಕ್ಷಗಳ ಕೈಬಿಟ್ಟಿತ್ತು ಅಥವಾ ಆ ಪಕ್ಷಗಳು ಮೈತ್ರಿಕೂಟವನ್ನು ತ್ಯಜಿಸಿದ್ದವು. ಉತ್ತರ ಪ್ರದೇಶದ ಅಪ್ನಾ ದಳದ ಒಂದು ಗುಂಪು (ಇಬ್ಬರು ಸಂಸದರನ್ನು ಹೊಂದಿದೆ, ಅವರಲ್ಲಿ ಒಬ್ಬರು ಸಚಿವರು), ಮಹಾರಾಷ್ಟ್ರದ ಆರ್‌ಪಿಐನ ಒಂದು ಗುಂಪು, ಬಿಹಾರದ ಲೋಕ ಜನಶಕ್ತಿಯ ಒಂದು ಗುಂಪನ್ನು ಹೊರತುಪಡಿಸಿದರೆ ಬಿಜೆಪಿಗೆ ಮಿತ್ರಪಕ್ಷಗಳು ಇರಲಿಲ್ಲ. ಶಿವಸೇನಾ ಮತ್ತು ಜೆಡಿಯುನಂತಹ ದೊಡ್ಡ ಪಕ್ಷಗಳು ಬಿಜೆಪಿಯಿಂದ ದೂರವಾದವು. ಪಕ್ಷದ ವಿಭಜನೆಯ ನಂತರದಲ್ಲಿ ಶಿವಸೇನಾದ ಒಂದು ಬಣವು ಮತ್ತೆ ಎನ್‌ಡಿಎ ಸೇರಿದೆ.

ಆದರೆ ಈಚಿನ ವಾರಗಳಲ್ಲಿನ ಚಟುವಟಿಕೆಗಳು, 2024ರ ಲೋಕಸಭಾ ಚುನಾವಣೆಯ ಫಲಿತಾಂಶದ ವಿಚಾರವಾಗಿ ಆಡಳಿತಾರೂಢ ಬಿಜೆಪಿ ಆತಂಕ ಹೊಂದಿದೆ ಎಂಬ ಮಾತನ್ನು ಹಲವರು ಹೇಳುವಂತೆ ಮಾಡಿದೆ. 2019ರಲ್ಲಿ ಬಿಜೆಪಿಯು ಶ್ಲಾಘನೀಯ ಸಾಧನೆ ತೋರಿತು ಎಂಬುದು ನಿಜ. ಅದು 303 ಸ್ಥಾನಗಳನ್ನು ಗೆದ್ದುಕೊಂಡಿತು. ಮಿತ್ರಪಕ್ಷಗಳು ಗೆದ್ದಿದ್ದನ್ನೂ ಪರಿಗಣಿಸಿದರೆ, ಎನ್‌ಡಿಎ 353 ಸ್ಥಾನ ಗೆದ್ದುಕೊಂಡಿತು. 2019ರ ನಂತರ ಹಲವು ಬೆಳವಣಿಗೆಗಳು ನಡೆದವು: ಎನ್‌ಡಿಎ ಕೂಟದಲ್ಲಿ ಬಿಜೆಪಿ ನಂತರದ ಅತಿದೊಡ್ಡ ಪಕ್ಷಗಳಾಗಿದ್ದ ಶಿವಸೇನಾ ಮತ್ತು ಜೆಡಿಯು ಹೊರನಡೆದವು. ಅಕಾಲಿದಳ ಮತ್ತು ರಾಮ್‌ವಿಲಾಸ್ ಪಾಸ್ವಾನ್ ಅವರ ಲೋಕಜನಶಕ್ತಿ ಪಕ್ಷ ಕೂಡ ಎನ್‌ಡಿಎ ತೊರೆದವು. ನಂತರದಲ್ಲಿ ಶಿವಸೇನಾ ಒಡೆಯಿತು, ಅದರಲ್ಲಿ ಒಂದು ಬಣವು ಎನ್‌ಡಿಎ ಸೇರಿದೆ. ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ ಒಡೆದು, ಅದರ ಒಂದು ಬಣವು ಎನ್‌ಡಿಎ ಸೇರಿದೆ.

ಬೇರೆ ಬೇರೆ ರಾಜ್ಯಗಳಲ್ಲಿನ ಬೆಳವಣಿಗೆಗಳು ಬಿಜೆಪಿಗೆ ಎಚ್ಚರಿಕೆಯ ಸಂದೇಶದಂತೆ ಕಾಣಿಸಿದ್ದು ಎನ್‌ಡಿಎ ಪುನಶ್ಚೇತನಕ್ಕೆ ಕಾರಣವಾಗಿರಬಹುದು: ಬಿಹಾರದಲ್ಲಿ ಮೈತ್ರಿಕೂಟ ಮುರಿದುಬಿತ್ತು, ಜೆಡಿಯು ಪಕ್ಷವು ಆರ್‌ಜೆಡಿ ಮತ್ತು ಕಾಂಗ್ರೆಸ್ ಜೊತೆ ಸೇರಿತು, ಅಲ್ಲಿನ ಸರ್ಕಾರದಲ್ಲಿ ಮುಂದುವರಿಯಿತು. ಬಿಜೆಪಿ ಅಲ್ಲಿ ಅಧಿಕಾರ ಕಳೆದುಕೊಂಡಿತು, ದೊಡ್ಡ ಮಿತ್ರಪಕ್ಷವೊಂದನ್ನು ಕಳೆದುಕೊಂಡಿತು. 2019ರ ಚುನಾವಣೆಯಲ್ಲಿ ಬಿಹಾರದಲ್ಲಿ ಎನ್‌ಡಿಎ 40 ಸ್ಥಾನಗಳ ಪೈಕಿ 39ರಲ್ಲಿ ಗೆಲುವು ಕಂಡಿತ್ತು. ಜೆಡಿಯು 16 ಸ್ಥಾನಗಳನ್ನು ಗೆದ್ದಿತ್ತು. ಈಚೆಗೆ ಎಲ್‌ಜೆಪಿಯ ಎರಡನೆಯ ಬಣವು ಎನ್‌ಡಿಎ ಜೊತೆ ಬಂದಿದೆ.

ಬಿಜೆಪಿಯ ಕೈತಪ್ಪಿದ್ದ ಇನ್ನೊಂದು ದೊಡ್ಡ ರಾಜ್ಯ ಮಹಾರಾಷ್ಟ್ರ. ಅಲ್ಲಿನ 48 ಲೋಕಸಭಾ ಸ್ಥಾನಗಳ ಪೈಕಿ 42ರಲ್ಲಿ ಎನ್‌ಡಿಎ ಜಯ ಸಾಧಿಸಿತ್ತು. ಶಿವಸೇನಾ 18ರಲ್ಲಿ ಗೆದ್ದಿತ್ತು. 2019ರ ಅಲ್ಲಿನ ವಿಧಾನಸಭಾ ಚುನಾವಣೆ ನಂತರ ಶಿವಸೇನಾ ಎನ್‌ಡಿಎ ತೊರೆಯಿತು; ಅದು ಕಳೆದ ವರ್ಷ ಎರಡು ಹೋಳಾಗಿ, ಒಂದು ಬಣವು ಈಗ ಬಿಜೆಪಿ ಜೊತೆಗಿದೆ. ಈಗ ಅಲ್ಲಿ ಬಿಜೆಪಿ, ಎನ್‌ಸಿಪಿ ಹಾಗೂ ಶಿವಸೇನಾ ಬಣಗಳ ಮೈತ್ರಿಕೂಟದ ಸರ್ಕಾರವಿದೆ.

ಈ ಎರಡು ದೊಡ್ಡ ರಾಜ್ಯಗಳಲ್ಲಿ ಎನ್‌ಡಿಎ ಸಾಧನೆ ಹೇಗಿರಲಿದೆ ಎಂಬ ವಿಚಾರವಾಗಿ ಅನಿಶ್ಚಿತತೆ ಇದೆ. ಇದಲ್ಲದೆ, ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ಆಡಳಿತವಿರುವ, 2019ರಲ್ಲಿ ಬಿಜೆಪಿ ಉತ್ತಮ ಸಾಧನೆ ತೋರಿದ್ದ ಎರಡು ರಾಜ್ಯಗಳು ಕೂಡ ಈಗ ಬಿಜೆಪಿಯಲ್ಲಿ ಅಭದ್ರತೆಯ ಭಾವ ಮೂಡಲು ಕಾರಣವಾಗಿವೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ 42 ಸ್ಥಾನಗಳ ಪೈಕಿ 18ರಲ್ಲಿ ಗೆದ್ದಿತ್ತು, ಕರ್ನಾಟಕದಲ್ಲಿ 28 ಸ್ಥಾನಗಳ ಪೈಕಿ 25ರಲ್ಲಿ ಜಯ ಕಂಡಿತ್ತು. ಗುಜರಾತ್, ರಾಜಸ್ಥಾನದಲ್ಲಿ ಅಷ್ಟೂ ಸ್ಥಾನಗಳನ್ನು ಬಿಜೆಪಿ ಗೆದ್ದಿತ್ತು. ಮಧ್ಯಪ್ರದೇಶದಲ್ಲಿ 29ರಲ್ಲಿ 28 ಸ್ಥಾನಗಳನ್ನು ಗೆದ್ದಿತ್ತು. ಈ ರಾಜ್ಯಗಳಲ್ಲಿ ಬಿಜೆಪಿಯ ಸಾಧನೆಯು ಗರಿಷ್ಠ ಮಟ್ಟವನ್ನು ತಲುಪಿಯಾಗಿದೆ. ಇಲ್ಲಿ ಇನ್ನೂ ಹೆಚ್ಚಿನ ಸ್ಥಾನಗಳು ಇನ್ನು ಸಿಗುತ್ತವೆ ಎನ್ನಲಾಗದು. ಮಹಾರಾಷ್ಟ್ರ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕದಲ್ಲಿ ಈ ಬಾರಿ ಬಿಜೆಪಿಯ ಸ್ಥಾನಗಳು ಕಡಿಮೆಯಾಗಬಹುದು ಎಂಬ ಆತಂಕ ಪಕ್ಷದ ಬೆಂಬಲಿಗರಲ್ಲಿದೆ. ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿನ ಸೋಲು ಬಿಜೆಪಿಗೆ ಆಘಾತ ತಂದಿದೆ. ಇದು ಮುಂದಿನ ವರ್ಷದ ಲೋಕಸಭಾ ಚುನಾವಣೆಯ ಫಲಿತಾಂಶದ ಬಗ್ಗೆ ಆತಂಕಗೊಳ್ಳುವುದಕ್ಕೆ ಒಂದು ಮುಖ್ಯ ಕಾರಣವಾಗಿದೆ. ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ ಮತ್ತು ತೆಲಂಗಾಣದಲ್ಲಿ ಈ ವರ್ಷದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಲೋಕಸಭಾ ಚುನಾವಣೆಯಲ್ಲಿ ಅವು ಯಾವ ಫಲಿತಾಂಶ ನೀಡುವವು ಎಂಬ ಸೂಚನೆ ಸಿಗಬಹುದು. ದೇಶದ ಅತಿದೊಡ್ಡ ರಾಜ್ಯವಾದ ಉತ್ತರ ಪ್ರದೇಶದಲ್ಲಿ 2019ರಲ್ಲಿ ಎನ್‌ಡಿಎ 64 ಸ್ಥಾನ ಪಡೆದಿತ್ತು.

ಎನ್‌ಡಿಎ ಪಾಲುದಾರ ಪಕ್ಷಗಳನ್ನು ಹಾಗೂ ಸಮಾನಮನಸ್ಕ ಸಣ್ಣ ಪಕ್ಷಗಳನ್ನು ಒಂದೆಡೆ ತರಲು ಲಗುಬಗೆಯಿಂದ ಮುಂದಾಗಿದ್ದುದು ಏಕೆ ಎಂಬುದನ್ನು ಈ ಅಂಕಿ-ಅಂಶಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಇಲ್ಲಿ ಕೆಲವು ಆಸಕ್ತಿಕರ ಅಂಶಗಳೂ ಇವೆ: ಜುಲೈ 18ರಂದು ನಡೆದ ಎನ್‌ಡಿಎ ಸಭೆಯಲ್ಲಿ 38 ಪಕ್ಷಗಳು ಭಾಗವಹಿಸಿದ್ದವು; ಈ ಪೈಕಿ ಒಂಬತ್ತು ಪಕ್ಷಗಳು 2019ರ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನೇ ನಿಲ್ಲಿಸಿರಲಿಲ್ಲ; 16 ಪಕ್ಷಗಳು ಸ್ಪರ್ಧಿಸಿದ್ದರೂ ಒಂದು ಸ್ಥಾನವನ್ನೂ ಗೆದ್ದಿರಲಿಲ್ಲ; ಏಳು ಪಕ್ಷಗಳು ತಲಾ ಒಂದು ಸ್ಥಾನ ಗೆದ್ದಿದ್ದವು. 38ರಲ್ಲಿ ಐದು ಪಕ್ಷಗಳು ಮಾತ್ರ ಒಳ್ಳೆಯ ಸಾಧನೆ ತೋರಿದ್ದವು, ಒಟ್ಟು 322 ಸ್ಥಾನಗಳನ್ನು ಗೆದ್ದಿದ್ದವು. 38 ಪಕ್ಷಗಳು ಪಡೆದಿದ್ದ ಮತಗಳ ಪ್ರಮಾಣವು ಶೇ 45ರಷ್ಟು, ಇಲ್ಲಿ ಬಿಜೆಪಿಯ ಪಾಲು ಶೇ 37ರಷ್ಟಿದೆ.

ಬಿಜೆಪಿಯು ಈಚಿನ ದಿನಗಳಲ್ಲಿ ತನ್ನೆಡೆ ಸೆಳೆದಿರುವ ಸಣ್ಣ ಪಕ್ಷಗಳಲ್ಲಿ ಬಹುತೇಕ ಪಕ್ಷಗಳಿಗೆ ನೆಲೆ ಇರುವುದು ದಲಿತರು ಹಾಗೂ ಹಿಂದುಳಿದ ಸಣ್ಣ ಸಮುದಾಯಗಳಲ್ಲಿ. ಉತ್ತರಪ್ರದೇಶದಲ್ಲಿ ಬಿಜೆಪಿಯು ಸುಹೇಲ್ದೇವ್ ಭಾರತೀಯ ಸಮಾಜ ಪಕ್ಷವನ್ನು ಸೆಳೆದುಕೊಂಡಿದೆ. ಅದು ಸಮಾಜವಾದಿ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು 2022ರ ವಿಧಾನಸಭಾ ಚುನಾವಣೆಯಲ್ಲಿ ಆರು ಸ್ಥಾನಗಳನ್ನು ಗೆದ್ದಿತ್ತು. ಬೆಸ್ತ ಸಮುದಾಯದವರ ನಿಶಾದ್ ಪಕ್ಷವು ಬಿಜೆಪಿ ಜೊತೆಗಿದ್ದು ಆರು ಸ್ಥಾನ ಗೆದ್ದಿತ್ತು. ಇಬ್ಬರು ಸಂಸದರನ್ನು ಹೊಂದಿರುವ ಅಪ್ನಾ ದಳದ ಜೊತೆಗಿನ ಮೈತ್ರಿಯನ್ನು ಬಿಜೆಪಿ ಮುಂದುವರಿಸಿದೆ. ಈ ಎಲ್ಲ ಪಕ್ಷಗಳು ತಲಾ ಶೇ 1ರಷ್ಟು ಮತ ಗಳಿಸಿವೆ. ಬಿಹಾರದಲ್ಲಿ, ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಜಿ ಅವರ ಹಿಂದೂಸ್ಥಾನಿ ಅವಾಮ್ ಮೋರ್ಚಾ (ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಶೇ 2.4ರಷ್ಟು ಮತ ಗಳಿಸಿದೆ), ಉಪೇಂದ್ರ ಕುಶ್ವಾಹ ಅವರ ರಾಷ್ಟ್ರೀಯ ಲೋಕ ಸಮತಾ ಪಕ್ಷ (ಶೇ 3.6ರಷ್ಟು ಮತ) ಈಚೆಗೆ ಎನ್‌ಡಿಎ ಸೇರಿವೆ. ಎಲ್‌ಜೆಪಿಯ ಎರಡೂ ಬಣಗಳು ಈಗ ಎನ್‌ಡಿಎ ಸೇರಿವೆ (ಶೇ 6ರಷ್ಟು ಮತಗಳು). ಇದು ಬಿಜೆಪಿಯು ಸಣ್ಣ ಪಕ್ಷಗಳಿಂದ ಬರುವ ಪ್ರತಿ ಮತಕ್ಕೂ ಪ್ರಾಮುಖ್ಯ ನೀಡುತ್ತದೆ ಎಂಬುದನ್ನು ತೋರಿಸುತ್ತದೆ.

ಬಿಜೆಪಿಯು ಆಂಧ್ರಪ್ರದೇಶದಲ್ಲಿ ಚಂದ್ರಬಾಬು ನಾಯ್ಡು ಅವರ ಟಿಡಿಪಿ ಜೊತೆ ಮಾತುಕತೆ ನಡೆಸುತ್ತಿದೆ. ಕರ್ನಾಟಕದಲ್ಲಿ ಜೆಡಿಎಸ್ ಜೊತೆ ಮಾತುಕತೆ ನಡೆದಿದೆ. ಜೆಡಿಎಸ್ ಜೊತೆ ಚುನಾವಣಾ ಹೊಂದಾಣಿಕೆ ಏರ್ಪಡುವ ಸಾಧ್ಯತೆ ಹೆಚ್ಚಿದೆ. ಬಿಜೆಪಿಯು ನವದೆಹಲಿಯಲ್ಲಿ ಎನ್‌ಡಿಎ ಸಭೆ ನಡೆಸಿದ ದಿನವೇ ವಿರೋಧ ಪಕ್ಷಗಳ ಒಕ್ಕೂಟವು ಒಂದೆಡೆ ಸೇರಿದ್ದು ಕೂಡ, ಬಿಜೆಪಿಗೆ ಮೈತ್ರಿಕೂಟಕ್ಕೆ ಪುನಶ್ಚೇತನ ನೀಡುವ ಚುರುಕು ಮುಟ್ಟಿಸಿರಬಹುದು. ಅದೇನೇ ಇದ್ದರೂ, ಚುನಾವಣೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುವ ವಿಚಾರದಲ್ಲಿ ಬಿಜೆಪಿಯನ್ನು ಮೆಚ್ಚಿಕೊಳ್ಳಬೇಕು. ಪಕ್ಷವು ಯಾವಾಗಲೂ ಚುನಾವಣಾ ಮನಃಸ್ಥಿತಿಯಲ್ಲೇ ಇರುತ್ತದೆ. ಅದು ಚುನಾವಣಾ ಚಟುವಟಿಕೆಗಳಿಗೆ ಯಾವತ್ತೂ ಗೆದ್ದಲು ಹಿಡಿಯಲು ಬಿಡುವುದಿಲ್ಲ. ಮತ ಸೆಳೆಯುವ ನರೇಂದ್ರ ಮೋದಿ ಅವರ ಸುತ್ತ ಸಂಕಥನಗಳನ್ನು ರೂಪಿಸುತ್ತಲೇ ಇರುತ್ತದೆ.

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ

ಪ್ರಾಣಿಗಳೇ ವಾಸಿ!

• ಸುಮಂಗಲಾ

ಬೆಕ್ಕಣ್ಣ ಯುಟ್ಯೂಬಿನಲ್ಲಿ ವಿಡಿಯೊ ಒಂದನ್ನು ನೋಡುತ್ತ, ಪಕ್ಕದಲ್ಲೇ ಪೇಪರಿಟ್ಟುಕೊಂಡು ಅದರ ಮೇಲೂ ಕಣ್ಣಾಡಿಸುತ್ತಿತ್ತು.

'ನೋಡಿಲ್ಲಿ... ಜಪಾನಿನಾಗೆ ಒಬ್ಬನಿಗೆ ನಾಯಿ ಆಗಬೇಕು ಅಂತ ಭಯಂಕರ ಆಸೆ ಇತ್ತಂತೆ. ಅದಕ್ಕೆ 11 ಲಕ್ಷ ಖರ್ಚು ಮಾಡಿ ನಾಯಿ ಥರಾ ಡ್ರೆಸ್ಸು ಹೊಲೆಸಿಕೊಂಡು, ಅದನ್ನು ಹಾಕಿಕೊಂಡು ಥೇಟ್ ನಾಯಿ ಹಂಗೇ ನಡೆದಾಡಿಕೊಂಡು ಹೋಗಾಕೆ ಹತ್ಯಾನ. ನಮ್ಮ ದೇಶದಾಗೆ ನೀವು ಮನುಷ್ಯರು ಮನುಷ್ಯರಾಗಿ ಕಾಣಾಕ ಹಂಗೆ ಮೊದ್ಲು ಡ್ರೆಸ್ಸು ಹೊಲೆಸಿಕೊಳ್ಳಬೇಕು' ಎಂದು ಪೇಪರಿನಲ್ಲಿ ಮಣಿಪುರ ಹಿಂಸಾಚಾರದ ಸುದ್ದಿಯನ್ನು ಬೊಟ್ಟು ಮಾಡಿ ತೋರಿಸಿತು.

'ಹೊರಗಡೆ ಡ್ರೆಸ್ಸು ತಗಂಡು ಏನು ಮಾಡೂಣಲೇ... ಒಳಗಿನಿಂದ ಮನುಷ್ಯರಾಗಬೇಕಲ್ಲ' ನಾನು ವೇದಾಂತ ಹೊಸೆದೆ.

'ಅದ್ಸರಿ, ನಾವು ಮನುಷ್ಯರಿಗೆ ಪ್ರಾಣಿಗಳಾಗ ಬೇಕು ಅಥವಾ ಹಕ್ಕಿ ಹಂಗೆ ಹಾರಬೇಕು ಅಂತ ಆಸೆ ಇರತೈತಿ. ನಿನಗ ಮನುಷ್ಯನಾಗ ಬೇಕು, ಹೀಂಗ ಎರಡು ಕಾಲಿನ ಮ್ಯಾಗೆ ನಡೀಬೇಕು ಅಂತ ಆಸೆಯಾಗಿಲ್ಲನು?' ನಾನು ಕುತೂಹಲದಿಂದ ಕೇಳಿದೆ.

'ಇಲ್ಲವಾ, ತಪ್ಪಿನೂ ಮನುಷ್ಯನಾಗೂ ಆಸೆ ಇಲ್ಲ. ಎರಡು ಕಾಲಿನ ಮ್ಯಾಗೆ ನಡೆದಾಡಿಕೋತ ನೀವು ಇಡೀ ಭೂಮಂಡಲನೇ ನಮ್ಮದು ಅಂತ ಎಲ್ಲ ಹಾಳು ಮಾಡಾಕೆ ಹತ್ತೀರಲ್ಲ, ಹಂಗ ಆಗೂದು ಬ್ಯಾಡ' ಎಂದು ಕೆನ್ನೆ ಕೆನ್ನೆ ಬಡಿದುಕೊಂಡಿತು.

'ಎಲ್ಲಾ ಏನು ಹಾಳು ಮಾಡತೀವಲೇ... ನೋಡಿಲ್ಲಿ, ನಿನ್ನ ವಂಶಸ್ಥ ಹುಲಿಗಳ ಸಂಖ್ಯೆ ಎಷ್ಟ್ ಹೆಚ್ಚಾಗೈತಿ ಅಂತ. ನಮ್ಮ ಕರುನಾಡಿನಾಗೆ 563 ಐತಿ, ಇಡೀ ದೇಶದ ಲೆಕ್ಕ ಹಿಡಿದರೆ ಈ ನಾಲ್ಕು ವರ್ಷದಾಗೆ ಸುಮಾರು 700 ಹುಲಿ ಹೆಚ್ಚಾಗ್ಯಾವು' ಎಂದೆ.

'ಹಂಗೇ ಕಳ್ಳಬೇಟೆಗೆ 112 ಹುಲಿ ಬಲಿಯಾಗ್ಯಾವೆ ಅನ್ನೂ ಸುದ್ದಿನೂ ಓದು ಮತ್ತ. ಏನೇ ಹೇಳು, ನಾವು ಪ್ರಾಣಿಗಳೇ ವಾಸಿ ಬಿಡು... ನಿಮ್ಮಂಗಲ್ಲ. ಅಧಿಕಾರ, ಕುರ್ಚಿ, ಕಾಸಿಗಾಗಿ ಏನು ಮಾಡಕ್ಕೂ ತಯಾರಿರತೀರಿ. ನಾವು ಪ್ರಾಣಿಗಳಾಗಿಯೇ ಇರತೀವಿ, ನೀವು ಮದ್ಲು ಮನುಷ್ಯರಾಗ್ರಿ' ಎಂದು ನನ್ನ ಮೂತಿಗೆ ತಿವಿಯಿತು.

ಚರ್ಚೆ

ಪ್ರಶಸ್ತಿ ವಾಪಸಾತಿಯೇ ಏಕೆ?

ಸಾಹಿತಿಗಳು, ಚಿಂತಕರು ಸರ್ಕಾರದ ನಡೆಯನ್ನು ವಿರೋಧಿಸಲು ಪ್ರಶಸ್ತಿ ವಾಪಸ್ ಮಾಡುವ ಬದಲು ಪರ್ಯಾಯ ಮಾರ್ಗ ಹುಡುಕುವುದು ಒಳಿತು

• ಆರ್.ಲಕ್ಷ್ಮೀನಾರಾಯಣ

ಪ್ರಶಸ್ತಿಗೆ ಭಾಜನರಾದವರು ಮುಚ್ಚಳಿಕೆ ಬರೆದುಕೊಟ್ಟು ಅಕಾಡೆಮಿಗಳ ಪ್ರಶಸ್ತಿ ತೆಗೆದುಕೊಳ್ಳಬೇಕು ಎಂಬಂಥ ಸಲಹೆಯನ್ನು ಶಿಫಾರಸು ಮಾಡುವಷ್ಟು ಕೆಳಮಟ್ಟಕ್ಕೆ ಸಾರಿಗೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಕುರಿತ ಸಂಸದೀಯ ಸ್ಥಾಯಿ ಸಮಿತಿ ಇಳಿದಿದೆಯೆಂದರೆ, ಅದಕ್ಕಿಂತ ಘೋರವಾದದ್ದು ಇನ್ನೊಂದಿಲ್ಲ. ಅವರುಗಳ ಬುದ್ಧಿಗೆ ಏನಾಗಿದೆ ಎಂದು ಕೇಳಬೇಕಾಗುತ್ತದೆ.

'ಈ ಶಿಫಾರಸುಗಳನ್ನು ಸಮಸ್ತ ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಲಯ ಸಾರಾಸಗಟಾಗಿ ತಿರಸ್ಕರಿಸಬೇಕಿದೆ' ಎಂದು ನಾ. ದಿವಾಕರ ಅವರು ಹೇಳಿರುವುದು (ಸಂಗತ, ಜುಲೈ 29) ಅತ್ಯಂತ ಸರಿಯಾಗಿಯೇ ಇದೆ. ಅದರ ಜೊತೆಯಲ್ಲಿಯೇ ಇನ್ನೂ ಕೆಲವು ಸಂಗತಿಗಳ ಕುರಿತೂ ಪರ್ಯಾಲೋಚಿಸಬೇಕಿದೆ.

ರಾಷ್ಟ್ರ ಮಟ್ಟದ ಇಲ್ಲವೆ ರಾಜ್ಯ ಮಟ್ಟದ ಅಕಾಡೆಮಿಗಳು ಮತ್ತಿನ್ನಿತರೆ ಸಾಹಿತ್ಯಕ ಸಂಸ್ಥೆಗಳು ಸರ್ಕಾರದಿಂದ ಅನುದಾನ ಪಡೆಯುತ್ತವೆ ಎಂಬುದು ನಿಜವೇ ಆದರೂ ಆ ಸಂಸ್ಥೆಗಳಿಗೆ ನೇಮಕಗೊಂಡವರು ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ಸೇರಿದವರೇ ಆಗಿರುತ್ತಾರೆ ಎಂಬುದೂ ಸತ್ಯವೇ. ಅದರಲ್ಲೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಸಾಹಿತಿಗಳಿಂದಲೇ ನೇರವಾಗಿ ಆಯ್ಕೆಯಾದವರಾಗಿರುತ್ತಾರೆ. ಇನ್ನು ಪ್ರಶಸ್ತಿಗಳಿಗೆ ಪುಸ್ತಕಗಳನ್ನು ಅಥವಾ ಕೆಲವು ಸಲ ವ್ಯಕ್ತಿಗಳನ್ನು ಆಯ್ಕೆ ಮಾಡುವಾಗ ಅದಕ್ಕೆ ಪ್ರತ್ಯೇಕವಾದ ಸಮಿತಿಗಳಿರುತ್ತವೆ. ಆ ಸಮಿತಿಗಳಲ್ಲಿ ಇರುವವರು ಸಾಹಿತ್ಯ, ಸಾಂಸ್ಕೃತಿಕ ಲೋಕಕ್ಕೆ ಸೇರಿದವರೇ ಆಗಿರುತ್ತಾರೆ.

ದೇಶದ ಇತರ ಜನಸಾಮಾನ್ಯರ ಹಾಗೆಯೇ ಸಾಹಿತಿಗಳೂ ಪ್ರಜೆಗಳೇ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವ ಪಕ್ಷ ಬೇಕಾದರೂ ಜನರಿಂದ ಆಯ್ಕೆಯಾಗಿ ಬರಬಹುದು. ಬರಹಗಾರರಿಗೆ ಯಾವುದೇ ಒಂದು ರಾಜಕೀಯ ಪಕ್ಷದ ಬಗ್ಗೆ ಒಲವು ಇರಬಾರದೆಂದು ಯಾರೂ ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ ತಮಗೆ ಇಷ್ಟವಿಲ್ಲದ ರಾಜಕೀಯ ಪಕ್ಷವೊಂದು ಅಧಿಕಾರ ನಡೆಸುತ್ತಿರುವಾಗ, ಅದರ ನಡೆ ಯಾವುದೋ ಕಾರಣಕ್ಕೆ ಸರಿಯಿಲ್ಲ ಎಂದು ಅನ್ನಿಸಿದಾಗ, ಸರ್ಕಾರವನ್ನು ವಿರೋಧಿಸುವುದು ಅವರ ಪ್ರಜಾಸತ್ತಾತ್ಮಕ ಹಕ್ಕು. ಆದರೆ ಪ್ರಶ್ನೆಯಿರುವುದು, ವಿರೋಧ ವ್ಯಕ್ತಪಡಿಸಲು ಆಯ್ಕೆ ಮಾಡಿಕೊಳ್ಳಬೇಕಾದ ಮಾರ್ಗದ ಬಗ್ಗೆ.

ಸರ್ಕಾರದಿಂದ ನೇರವಾಗಿ ನೇಮಕವಾಗದ ಅಧ್ಯಕ್ಷರಿರುವ, ಸಾಹಿತ್ಯ, ಸಾಂಸ್ಕೃತಿಕ ಲೋಕದಲ್ಲಿ ಸಲ್ಲಿಸಿದ ಸೇವೆಯ ಮಾನದಂಡದ ಮೇರೆಗೆ ಆಯ್ಕೆ ಸಮಿತಿಗೆ ಆಯ್ಕೆಯಾದ ಸದಸ್ಯರು ಇರುವ ಸಮಿತಿಗಳು ಆಯ್ಕೆ ಮಾಡಿದ ಪ್ರಶಸ್ತಿಗಳನ್ನು ಹಿಂತಿರುಗಿಸುವುದು ಸರ್ಕಾರವನ್ನು ವಿರೋಧಿಸುವ ಸರಿಯಾದ ಮಾರ್ಗವಲ್ಲ ಅನಿಸುತ್ತದೆ. ಅದರಿಂದ, ಪ್ರಶಸ್ತಿಗೆ ಆಯ್ಕೆ ಮಾಡಿದವರನ್ನು, ಸ್ವಾಯತ್ತ ಸಂಸ್ಥೆಯಾದ ಅಕಾಡೆಮಿಯನ್ನು ಪರೋಕ್ಷವಾಗಿ ಅವಮಾನಿಸಿದಂತೆ ಆಗುವುದಿಲ್ಲವೇ ಎಂಬುದನ್ನು ಪರ್ಯಾಲೋಚಿಸಬೇಕು. ಇನ್ನು ಸರ್ಕಾರವೇ ನೇರವಾಗಿ ಬಹಳಷ್ಟು ಸಲ ತನ್ನ ರಾಜಕೀಯ ಸಿದ್ಧಾಂತದ ಬಗ್ಗೆ ಒಲವಿರುವವರನ್ನೇ ಆಯ್ಕೆ ಮಾಡಿ (ಅಪವಾದಗಳು ಇರಬಹುದು, ಇವೆ) ಕೊಡಮಾಡುವ 'ಪದ್ಮ' ಪ್ರಶಸ್ತಿಗಳನ್ನು ಬೇಕಾದರೆ ಅದನ್ನು ಪಡೆದವರು ವಿರೋಧದ ಸಂಕೇತವಾಗಿ ಸರ್ಕಾರಕ್ಕೆ ಹಿಂತಿರುಗಿಸಬಹುದು.

ಸ್ವಾತಂತ್ರ್ಯಪೂರ್ವದಲ್ಲಿ ಹಾಗೆ ಬ್ರಿಟಿಷ್ ಸರ್ಕಾರ ನೇರವಾಗಿ ನೀಡಿದ 'ಸರ್' ನೈಟ್‌ಹುಡ್ ಪ್ರಶಸ್ತಿಯನ್ನು ರವೀಂದ್ರನಾಥ ಟ್ಯಾಗೋರರು ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಸಂದರ್ಭದಲ್ಲಿ ಸರ್ಕಾರದ ನಡೆಯನ್ನು ವಿರೋಧಿಸಿ ಹಿಂತಿರುಗಿಸಿದ್ದನ್ನು, ಹಾಗೆಯೇ ತುರ್ತು ಪರಿಸ್ಥಿತಿಯನ್ನು ಹೇರಿದ ಸರ್ಕಾರದ ನಡೆ ವಿರೋಧಿಸಿ ಶಿವರಾಮ ಕಾರಂತರು 'ಪದ್ಮಭೂಷಣ' ಪ್ರಶಸ್ತಿ ಹಿಂತಿರುಗಿಸಿದ್ದನ್ನು ನೆನೆಯಬಹುದು.



ಅಕಾಡೆಮಿ ಪ್ರಶಸ್ತಿಯು ಕೃತಿ ರಚನೆ ಅಥವಾ ಸಾಹಿತ್ಯ ಸಾಧನೆಗಾಗಿ ನೀಡಿದ್ದು. ಸಾಹಿತಿಗಳು ಕೃತಿ ರಚನೆಯ ಹೊರತಾಗಿ ರಾಜಕೀಯ ಪಕ್ಷವೊಂದರ ವಕ್ತಾರರಂತೆ ನಡೆದುಕೊಳ್ಳುವುದು ನಡೆದೇ ಇದೆ. ಅದು ಅವರವರ ಸ್ವಾತಂತ್ರ್ಯ. ಆದರೆ ತನಗೆ ಇಷ್ಟವಿಲ್ಲದ ಪಕ್ಷದ ನೇತೃತ್ವದ ಸರ್ಕಾರವನ್ನು ವಿರೋಧಿಸಲೋಸುಗ, ಸಾಹಿತ್ಯ ಸಾಧನೆ ಮಾಡಿದ್ದಕ್ಕಾಗಿ ಸಾಹಿತ್ಯ ಸಂಸ್ಥೆ ನೀಡಿದ ಪ್ರಶಸ್ತಿಯನ್ನು ಹಿಂತಿರುಗಿಸಿದಾಗ ಸರ್ಕಾರಕ್ಕೂ ಅಂಥವರನ್ನು (ಎಲ್ಲರೂ ಏನೂ ಹಿಂತಿರುಗಿಸುವುದಿಲ್ಲ) ಸಾಹಿತಿಯಾಗಿ ನೋಡಬೇಕೆ ಇಲ್ಲವೆ ಅಧಿಕೃತವಾಗಿ ಪಕ್ಷದ ವಕ್ತಾರರಲ್ಲದಿದ್ದರೂ ಪಕ್ಷದ ಅಧಿಕೃತ ವಕ್ತಾರರಿಗಿಂತ ಹೆಚ್ಚಾಗಿ ನಡೆದುಕೊಳ್ಳುವವರ ಬಗ್ಗೆ ಏನೆಂದು ತಿಳಿಯಬೇಕು ಎಂದು ಗೊಂದಲವಾಗಬಹುದು. ಆದ್ದರಿಂದ ತಮ್ಮ ಸಾಹಿತ್ಯಕ ಸಾಧನೆಗಾಗಿ ಪ್ರಶಸ್ತಿ ಪಡೆದ ಇಂಥವರು ತಮ್ಮ ವಿರೋಧ ವ್ಯಕ್ತಪಡಿಸಲು ಪ್ರಶಸ್ತಿ ಹಿಂತಿರುಗಿಸುವುದರ ಬದಲು ವಿರೋಧದ ಪರ್ಯಾಯ ಮಾರ್ಗಗಳ ಬಗ್ಗೆ ಯೋಚಿಸಬಹುದು ಎನಿಸುತ್ತದೆ.

ಇನ್ನು ಈಚಿನ ದಿನಗಳಲ್ಲಿ ಕರ್ನಾಟಕವೂ ಸೇರಿದಂತೆ ಬಹುತೇಕ ಎಲ್ಲ ರಾಜ್ಯ ಸರ್ಕಾರಗಳೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಅಧ್ಯಕ್ಷರನ್ನಾಗಿ, ಸದಸ್ಯರನ್ನಾಗಿ ನೇಮಕ ಮಾಡುವಾಗ, ಮಂಡಲಿ, ಕಾರ್ಪೊರೇಷನ್‌ಗಳಿಗೆ ನೇಮಕ ಮಾಡುವಾಗ, ತಮ್ಮ ಪಕ್ಷದ ಶಾಸಕರನ್ನೋ ಕಾರ್ಯಕರ್ತರನ್ನೋ ನೇಮಕ ಮಾಡುವುದಕ್ಕೆ ಅನುಸರಿಸುವ ಮಾನದಂಡಗಳನ್ನೇ, ಅಂದರೆ ತಮ್ಮ ಪಕ್ಷದ, ಸರ್ಕಾರದ ನೀತಿಯ ಬಗೆಗಿನ ಒಲವನ್ನು ಹೊಂದಿರುವ ಬರಹಗಾರರನ್ನೇ ಪರಿಗಣಿಸುವ ಮಾರ್ಗವನ್ನು ಅನುಸರಿಸುತ್ತಿರುವುದು ಗುಟ್ಟಾಗಿಯೇನೂ ಉಳಿದಿಲ್ಲ.

ಇಂಥ ಸನ್ನಿವೇಶದಲ್ಲಿ, ನಾ.ದಿವಾಕರ ಅವರು ಹೇಳಿರುವಂತೆ, ಬಹುತೇಕ ಅಕಾಡೆಮಿಗಳು ತಮ್ಮ ಮೂಲ ಅಂತಃಸತ್ವ ನೀಗಿಕೊಂಡು ಸರ್ಕಾರಗಳ ಬಾಲಂಗೋಚಿಗಳಂತೆಯೋ ಬಾಲಬಡುಕರಂತೆಯೋ ಆಗಿವೆಯೆಂದು ಕೊರಗುವ ಕಾಲ ಬರಲು ತಡವೇನಿಲ್ಲ.

ವಾಚಕರ ವಾಣಿ

ಡೆಮು ರೈಲು: ವೇಳಾಪಟ್ಟಿ ಪಾಲನೆಯಾಗಲಿ

ದಾವಣಗೆರೆಯಿಂದ ಬಳ್ಳಾರಿಗೆ ಇದೇ 24ರಂದು ಡೆಮು ರೈಲಿನಲ್ಲಿ ಪ್ರಯಾಣ ಮಾಡಿದೆವು. ಮಧ್ಯಾಹ್ನ 2.45ಕ್ಕೆ ಬಿಟ್ಟು ರಾತ್ರಿ 9.15ಕ್ಕೆ ತಲುಪಿತು. ವೇಳಾಪಟ್ಟಿಯ ಪ್ರಕಾರ, ಅದು ದಾವಣಗೆರೆಯನ್ನು ಮಧ್ಯಾಹ್ನ 2.40ಕ್ಕೆ ಬಿಟ್ಟು ರಾತ್ರಿ 8.10ಕ್ಕೆ ಬಳ್ಳಾರಿಯನ್ನು ತಲುಪಬೇಕು. ಆದರೆ ನಾವು ಪ್ರಯಾಣಿಸಿದ ಯಾವತ್ತೂ ಸರಿಯಾದ ಸಮಯಕ್ಕೆ ಅದು ತಲುಪಿಲ್ಲ. ಆದ್ದರಿಂದ, ವೇಗವನ್ನು ಹೆಚ್ಚಿಸಿ ಪ್ರಯಾಣದ ಅವಧಿಯು ಕಡಿಮೆ ಆಗುವಂತಾದರೆ, ಹೆಚ್ಚು ಜನರು ಪ್ರಯಾಣ ಮಾಡುತ್ತಾರೆ. ರೈಲ್ವೆ ಇಲಾಖೆ ಈ ಬಗ್ಗೆ ಗಮನಹರಿಸಬೇಕು.

ತಿಮ್ಮರಾಜು ಎಸ್.ಆರ್., ದಾವಣಗೆರೆ

ಸುಳ್ಳುಸುದ್ದಿ ಹರಿಯಬಿಡುವವರಿಗಿಲ್ಲ ಪಕ್ಷಭೇದ

ರಾಜಸ್ಥಾನದ ದೇವಸ್ಥಾನವೊಂದರಲ್ಲಿ ಮುಸ್ಲಿಮರು ಪೊಲೀಸ್ ಭದ್ರತೆಯಲ್ಲಿ ನಮಾಜು ಮಾಡುತ್ತಿದ್ದಾರೆ ಎಂಬ ಸುದ್ದಿಯನ್ನು ನನ್ನ ನಿವೃತ್ತ ಉದ್ಯೋಗಿ ಮಿತ್ರರೊಬ್ಬರು ಇತ್ತೀಚೆಗೆ ನನ್ನ ವಾಟ್ಸ್‌ಆ್ಯಪ್‌ಗೆ ಕಳುಹಿಸಿದ್ದರು. ಆದರೆ ಈ ಸುದ್ದಿಯು ಪತ್ರಿಕೆಗಳಲ್ಲಿ ಎಲ್ಲೂ ಪ್ರಕಟವಾಗಿರಲಿಲ್ಲ, ದೃಶ್ಯ ಮಾಧ್ಯಮದಲ್ಲಿ ಪ್ರಸಾರವಾಗಿರಲಿಲ್ಲ. ಆದ್ದರಿಂದ ಇದು ನಿಜವೋ ಸುಳ್ಳೋ ಎಂಬ ಗೊಂದಲದಲ್ಲಿದ್ದೆ. ಆದರೆ 'ಪ್ರಜಾವಾಣಿ'ಯ ಫ್ಯಾಕ್ಟ್ ಚೆಕ್ ಅಂಕಣದಲ್ಲಿ ಅಂದೇ ಈ ಸಂದೇಶದ ಬಗ್ಗೆ ವರದಿಯಾಗಿತ್ತು. ಇದು ಸುಳ್ಳು ಸುದ್ದಿ ಎಂತಲೂ, ಸದರಿ ದೇವಸ್ಥಾನದಲ್ಲಿ ಇದು 50 ವರ್ಷಗಳಿಂದಲೂ ನಡೆದುಬಂದಿರುವ ಪದ್ಧತಿ ಎಂತಲೂ ವರದಿ ಇತ್ತು. ನಾನು ನನ್ನ ಮಿತ್ರರಿಗೆ ಪತ್ರಿಕೆಯ ಫ್ಯಾಕ್ಟ್ ಚೆಕ್ ವರದಿಯನ್ನು ಕಳುಹಿಸಿದೆ. ಅವರು ಮಾಹಿತಿ ತಿಳಿಸಿದ್ದಕ್ಕೆ ನನಗೆ ಧನ್ಯವಾದ ಸಲ್ಲಿಸಿ, ತಾವು ಮೊದಲು ಕಳುಹಿಸಿದ್ದ ಸಂದೇಶವನ್ನು ಡಿಲೀಟ್ ಮಾಡಿದರು. ಎರಡು ದಿನ ಬಿಟ್ಟು ಮತ್ತೊಂದು ಸಂದೇಶವನ್ನು ಕಳುಹಿಸಿದ್ದರು. ಅದರಲ್ಲಿ ಸೋನಿಯಾ ಗಾಂಧಿಯವರ ಭಾವಚಿತ್ರದ ಜೊತೆಗೆ 'ಈ ಚಿತ್ರವನ್ನು ಜೂಮ್ ಮಾಡಿ ನೋಡಿದರೆ, ಅವರ ಹಿಂದೆ ಕಾಣುವ ಪುಸ್ತಕವೊಂದರಲ್ಲಿ 'ಹೌ ಟು ಕನ್‌ವರ್ಟ್ ಇಂಡಿಯಾ ಇಂಟು ಕ್ರಿಶ್ಚಿಯನ್ ನೇಷನ್ ಎಂದಿದೆ' ಎಂದು ಬರೆಯಲಾಗಿತ್ತು. ಈ ಸುದ್ದಿಯ ಅಸಲಿಯತ್ತಿನ ಬಗ್ಗೆ ಕೂಡ ಅನುಮಾನಗೊಂಡ ನಾನು ಕೂಡಲೇ ಇದನ್ನು ಪತ್ರಿಕೆಯ ಫ್ಯಾಕ್ಟ್ ಚೆಕ್ ಅಂಕಣದ ನಂಬರ್‌ಗೆ ವಾಟ್ಸ್‌ಆ್ಯಪ್ ಮಾಡಿದೆ. ಇದು ಸುಳ್ಳು ಸುದ್ದಿ ಎಂತಲೂ ತಿರುಚಿ, ಎಡಿಟ್ ಮಾಡಿರುವ ವಿಡಿಯೊ ಎಂತಲೂ ಶುಕ್ರವಾರದ (ಜುಲೈ 28) ಸಂಚಿಕೆಯಿಂದ ತಿಳಿದುಬಂತು.

ಪ್ರತಿದಿನ ಸಾಮಾಜಿಕ ಜಾಲತಾಣಗಳಲ್ಲಿ ಈ ರೀತಿಯ ಸುಳ್ಳು ಸುದ್ದಿಯ, ತಿರುಚಿ ಸೃಷ್ಟಿಸಿದ ಹಲವಾರು ಸುದ್ದಿ, ವಿಡಿಯೊಗಳು ಹರಿದಾಡುತ್ತವೆ. ಇದಕ್ಕೆ ಪಕ್ಷಭೇದ ಇಲ್ಲ. ಅವರ ವಿರುದ್ಧ ಇವರು ಇವರ ವಿರುದ್ಧ ಅವರು ಸುಳ್ಳು ಸುದ್ದಿಗಳನ್ನು ಹರಿಯಬಿಡುತ್ತಾರೆ. ಇವುಗಳನ್ನು ಸೃಷ್ಟಿಸುವವರು ಮತ್ತು ಅವುಗಳನ್ನು ಪರಿಶೀಲಿಸದೇ ಒಬ್ಬರಿಂದ ಮತ್ತೊಬ್ಬರಿಗೆ ಫಾರ್ವರ್ಡ್ ಮಾಡುವವರಲ್ಲಿ ವಿದ್ಯಾವಂತರು, ಉದ್ಯೋಗಿಗಳು, ನಿವೃತ್ತರು, ಹಿರಿಯರು ಸೇರಿರುತ್ತಾರೆ ಎನ್ನುವುದು ಗಮನಾರ್ಹ. ಹಾಗೆಯೇ ಟೀಕಿಸುವ ಭರದಲ್ಲಿ ಮುಖ್ಯಮಂತ್ರಿ, ಪ್ರಧಾನಿಯವರನ್ನು ಕೆಟ್ಟ ಪದಗಳಿಂದ ನಿಂದಿಸುವುದೂ ನಡೆಯುತ್ತದೆ. ಇದು ದುರದೃಷ್ಟಕರ. ಆ ಹುದ್ದೆಗಳ ಮಹತ್ವವನ್ನಾದರೂ ಅವರು ಅರಿಯಬೇಕು.

ಮುಳ್ಳೂರು ಪ್ರಕಾಶ್, ಮೈಸೂರು

ಭಯ- ಅಭಯ

ಪ್ರಾಣಿಪ್ರಿಯರಿಗೆ ಸಂತಸದ ಸಂಗತಿ,
ಹೆಚ್ಚಳವಾಗಿದೆಯಂತೆ ರಾಜ್ಯದ
ಕಾಡುಗಳಲ್ಲಿ ಹುಲಿ ಸಂತತಿ,
ವಾಸ್ತವದಲ್ಲಿ
ಭಯ ಹುಟ್ಟಿಸುತ್ತಿರುವುದು
ನಾಡಿನಲ್ಲಿ ಗೋಮುಖ
ವ್ಯಾಘ್ರರ ಸಂತತಿ!

ಮ.ಗು.ಬಸವಣ್ಣ
ನಂಜನಗೂಡು

ರಿಕ್ಷಾ ಚಾಲಕರ ಮುಷ್ಕರ ನ್ಯಾಯಯುತವಲ್ಲ

ಸರ್ಕಾರದ 'ಶಕ್ತಿ' ಯೋಜನೆಯಿಂದಾಗಿ ರಿಕ್ಷಾದವರಿಗೆ ನಷ್ಟವಾಗುತ್ತಿದೆ ಎಂಬ ಕಾರಣಕ್ಕಾಗಿ ಮುಷ್ಕರ ಆಯೋಜಿಸಲಾಗುತ್ತಿದೆ. ಇಷ್ಟು ದಿನ, ಅನಿವಾರ್ಯವಾಗಿ, ಬಹುತೇಕ ರಿಕ್ಷಾದವರು ಕೇಳಿದ 'ಮೂರು ಪಟ್ಟು' ದುಬಾರಿ ಬಾಡಿಗೆಗೆ ಒಳಗೊಳಗೇ ಮರುಗುತ್ತ, ತೆತ್ತು ಓಡಾಡಿದ್ದಾಯಿತು. ಧಾರವಾಡದಲ್ಲಿ ಈಗಲೂ ಬರೀ ಅರ್ಧ ಕಿಲೊಮೀಟರ್‌ಗೂ ₹ 70-80 ಬಾಡಿಗೆ ಪಡೆಯಲಾಗುತ್ತಿದೆ. ಮೀಟರ್ ಅಳವಡಿಕೆಯಾಗಿದ್ದರೂ ಮೀಟರ್ ಹಾಕುವುದೇ ಇಲ್ಲ. ಮೀಟರ್ ಹಾಕಿದರೆ ಯೋಗ್ಯ ದರದ ಬಾಡಿಗೆ ಕೊಡಲು ಎಲ್ಲರಿಗೂ ಖುಷಿಯೇ. ಜರೂರತ್ತಿನ ದುರುಪಯೋಗ ಪಡೆದು ಯದ್ವಾತದ್ವಾ ಬಾಡಿಗೆ ಕೀಳುವ ರಿಕ್ಷಾ ಚಾಲಕರಿಗೆ ಮುಷ್ಕರ ನಡೆಸಲು ನೈತಿಕ ಹಕ್ಕಿಲ್ಲ.

ಕಡ್ಡಾಯವಾಗಿ ಮೀಟರ್ ಹಾಕಲು ಅಧಿಕಾರಿಗಳು ವ್ಯವಸ್ಥೆ ಮಾಡಲಿ. ಓಡುತ್ತಿರುವ ರಿಕ್ಷಾಗಳನ್ನು ಮಾರ್ಗ ಮಧ್ಯದಲ್ಲಿ ತಡೆದು, ಮೀಟರ್ ಪ್ರಕಾರ ಬಾಡಿಗೆ ನಿಗದಿಯಾದ ಬಗ್ಗೆ, ಒಳಗೆ ಕುಳಿತ ಪ್ರಯಾಣಿಕರ ವಿಚಾರಣೆ ನಡೆಸಲು ಪೊಲೀಸರಿಗೆ ಅವಕಾಶ ನೀಡಲಿ. ಆಗಮಾತ್ರವೇ ಮೀಟರ್ ಚಾಲನೆ ಶುರುವಾದೀತು. ಜೊತೆಗೆ, ಶೇರ್ ಆಟೊ ವ್ಯವಸ್ಥೆಗೆ ಜನ ಹಾಗೂ ಚಾಲಕರು ಒಗ್ಗಿಕೊಳ್ಳಬೇಕು. ಆಗ ಜನ ರಿಕ್ಷಾ ಕಡೆಗೆ ನೋಡಿಯಾರು.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಬೆಳೆ ವಿಮೆ: ರೈತರಿಗೇ ನೇರ ಅವಕಾಶ ಸಿಗಲಿ

ಮುಂಗಾರು ಹಂಗಾಮಿನ ಬೆಳೆ ವಿಮೆ ನೋಂದಣಿ ಕಾರ್ಯ ಈಗಾಗಲೇ ಮುಗಿಯುವ ಹಂತಕ್ಕೆ ಬಂದಿದ್ದು, ಸಿಎಸ್‌ಸಿಯವರು (ಕಾಮನ್ ಸರ್ವಿಸ್ ಸೆಂಟರ್) ಒಂದು ಸರ್ವೆ ನಂಬರ್‌ನ ಒಂದು ಬೆಳೆಗೆ ವಿಮೆ ಮಾಡಲು ರೈತರಿಂದ ಸೇವಾ ಶುಲ್ಕವೆಂದು ಯಾವ ರಸೀದಿಯನ್ನೂ ನೀಡದೆ ಕನಿಷ್ಠ ₹ 200 ವಸೂಲಿ ಮಾಡುತ್ತಿದ್ದಾರೆ. ಅತಿ ಸಣ್ಣ ರೈತರಿಗೆ ಕೆಲವು ಸಾರಿ ಈ ಹಣವು ವಿಮೆಯ ಹಣಕ್ಕಿಂತಲೂ ಹೆಚ್ಚಾಗಿರುತ್ತದೆ.

ವಿಮೆ ಮಾಡುವ ಸೆಂಟರ್‌ನವರಿಗೆ ಸೇವಾ ಶುಲ್ಕವೆಂದು ಹಣವು ಅವರ ಖಾತೆಗೆ ಸರ್ಕಾರದಿಂದ ಜಮಾ ಆಗೇ ಆಗುತ್ತದೆ. ಬೆಳೆ ವಿಮೆ ಮಾಡಲು ಸಂರಕ್ಷಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ರೈತರಿಗೇ ನೇರವಾಗಿ ಅವಕಾಶವನ್ನು ಯಾಕೆ ಕಲ್ಪಿಸಬಾರದು? ಕರ್ನಾಟಕ ಮತ್ತು ಗುಜರಾತ್ ಬಿಟ್ಟು ಉಳಿದ ರಾಜ್ಯಗಳಲ್ಲಿ ಇಂಥ ಅವಕಾಶವಿದೆ. ಸರ್ಕಾರ ಎಷ್ಟೋ ಯೋಜನೆಗಳ ಪರವಾಗಿ ರೈತರ ಜೇಬಿಗೆ ತುಂಬಿದ ಹಣ ಹೀಗೆ ಮಧ್ಯವರ್ತಿಗಳಿಂದ ಖಾಲಿ ಆಗುತ್ತಿರುವುದು ನಿಜಕ್ಕೂ ಮರುಕ ಹುಟ್ಟಿಸುತ್ತದೆ.

ರಾಜಶೇಖರ ಕುಕ್ಕುಂದಾ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮುಟ್ಟು-ಗುಟ್ಟು ಮೌಢ್ಯ, ತಪ್ಪುಗ್ರಹಿಕೆ ಹತ್ತು ಹಲವು

● ಸುಕೃತ ಎಸ್.

ಪ್ರಕರಣ 1: ಮೊದಲ ಬಾರಿಗೆ ರಕ್ತಸ್ರಾವ ಕಂಡ ಆಕೆಗೆ ಭಯ ಆವರಿಸಿತು. ತನಗೇನಾಗಿದೆ. ಯಾಕಾಗಿ ತನ್ನೊಳಗಿಂದ ಈ ರೀತಿ ರಕ್ತ ಹರಿಯುತ್ತಿದೆ. ಬಂಧನ ಸಿನಿಮಾದಲ್ಲಿ ವಿಷ್ಣುವರ್ಧನ್ ಅವರಿಗೆ ಆದ ಹಾಗೆಯೇ ನನಗೇನಾದರೂ ಕ್ಯಾನ್ಸರ್ ಆಗಿದೆಯೇ. ಯಾರಲ್ಲಿ ಹೇಳಿಕೊಳ್ಳುವುದು. ಅಮ್ಮ, ಅಪ್ಪ, ಟೀಚರ್, ಸ್ನೇಹಿತರು? ನನ್ನ ಸ್ನೇಹಿತರಿಗೂ ಇದೇ ರೀತಿ ಆಗಿದೆಯೇ? ಕೇಳುವುದು ಹೇಗೆ? ತನಗೆ ಕ್ಯಾನ್ಸರ್ ಇದೆ ಎಂದು ಆಕೆಗೆ ಆಕೆಯೇ ನಿರ್ಧರಿಸಿಬಿಟ್ಟಳು

ಪ್ರಕರಣ 2: ಇದೇನು ಹೀಗೆ ರಕ್ತ ಹರಿತಾ ಇದೆ. ಗಾಯವಾಗಿ ಹೀಗೆ ಆಗಿರಬೇಕು ಎಂದು ತಿಳಿದ ಆಕೆ ಮರ್ಮಾಂಗಕ್ಕೆ ಅರಿಶಿನ ಮೆತ್ತಿಕೊಂಡಳು. ಆದರೆ, ರಕ್ತಸ್ರಾವ ಕಡಿಮೆ ಆಗಲಿಲ್ಲ. ನಂತರ ಅದು ಬೇರೆಯದೇ ಆರೋಗ್ಯ ಸಮಸ್ಯೆಗೆ ಎಡೆಮಾಡಿಕೊಟ್ಟಿತು. ನಂತರ, ಆಕೆಯನ್ನು ಆಸ್ಪತ್ರೆಗೂ ಸೇರಿಸಲಾಯಿತು

ತಾವು ಮುಟ್ಟಾಗಿದ್ದೇವೆ ಎಂದು ಗೊತ್ತಾಗದ ಮತ್ತು ಹಾಗೆ ಆದಾಗ ಏನು ಮಾಡಬೇಕು ಎಂದು ಗೊತ್ತಾಗದೆ ಕೆಲವು ಬಾಲಕಿಯರು ಎದುರಿಸಿದ ಸಂದರ್ಭಗಳು ಇವು. ಬಾಲಕಿಯರು ಮುಟ್ಟಾಗುವ ಮುನ್ನವೇ ಆ ಬಗ್ಗೆ ಅವರಲ್ಲಿ ಅರಿವು ಇದ್ದಿದ್ದರೆ ಇಂತಹ ಸಂದರ್ಭಗಳನ್ನು ತಡೆಯಬಹುದಿತ್ತು. ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಮಕ್ಕಳಲ್ಲಿ ಮುಟ್ಟು ಮತ್ತು ಮುಟ್ಟಿನ ಶುಚಿತ್ವದ ಬಗ್ಗೆ ಅರಿವು ಮೂಡಿಸಲು ದುಡಿಯುತ್ತಿರುವ ಸಾಮಾಜಿಕ ಕಾರ್ಯಕರ್ತರು ಹೇಳುವ ಮಾತಿದು.

ಕರ್ನಾಟಕದ ಹೆಣ್ಣುಮಕ್ಕಳಿಗೆ ಮುಟ್ಟಿನ ಕುರಿತು ಹಲವು ತಪ್ಪು ಕಲ್ಪನೆಗಳಿವೆ. ಸಮಾಜದಲ್ಲಿ ಮುಟ್ಟಿನ ಕುರಿತು ಹಲವು ಮೌಢ್ಯಗಳೂ ಇವೆ. ಮುಟ್ಟು ಎನ್ನುವುದು ಗುಟ್ಟಿನ ವಿಷಯವಾಗಿದೆ. ಜಾತಿಯಿಂದ ಜಾತಿಗೆ, ಪ್ರದೇಶದಿಂದ ಪ್ರದೇಶಕ್ಕೆ ಈ ತಪ್ಪು ಕಲ್ಪನೆಗಳು, ಮೌಢ್ಯದ ಆಚರಣೆಗಳ ಬದಲಾಗುತ್ತವೆ. ಮುಟ್ಟಿನ ಕುರಿತು ರಾಜ್ಯದಲ್ಲಿ ಅತಿಹೆಚ್ಚು ಮೌಢ್ಯಾಚರಣೆಗಳಿವೆ ಹಾಗೂ ಶಾಲೆಗಳಲ್ಲಿ ಜಾಗೃತಿಯ ಕೊರತೆಯೂ ಇದೆ ಎಂದು ಯುನೆಸ್ಕೊ ಇತ್ತೀಚಿನ ತನ್ನ ವರದಿಯೊಂದರಲ್ಲಿ ಹೇಳಿದೆ.

'ಮುಟ್ಟಿನ ಆರೋಗ್ಯ ಮತ್ತು ಶುಚಿತ್ವ ನಿರ್ವಹಣೆ' ಸಮೀಕ್ಷಾ ವರದಿಯನ್ನು ಯುನೆಸ್ಕೊ ಬಿಡುಗಡೆ ಮಾಡಿದೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ಸಮೀಕ್ಷೆ ನಡೆಸಿ, ತುಲನಾತ್ಮಕ ಅಧ್ಯಯನದ ವರದಿ ನೀಡಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿಯೇ ಹೆಚ್ಚು ಮೌಢ್ಯಗಳಿವೆ ಎಂದೂ ವರದಿಯಲ್ಲಿ ಹೇಳಲಾಗಿದೆ.

ಶಾಲೆಯಲ್ಲಿ ಇಲ್ಲ ಪಾಠ

ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಕರ್ನಾಟಕದ ಪ್ರತಿ ಐವರಲ್ಲಿ ಒಬ್ಬ ವಿದ್ಯಾರ್ಥಿನಿ ಮಾತ್ರವೇ 'ಮುಟ್ಟಿನ ಕುರಿತ ಪಾಠವು ನಮ್ಮ ಪಠ್ಯದಲ್ಲಿದೆ' ಎಂದು ಹೇಳಿದ್ದಾಳೆ. ಎಂಟನೇ ಹಾಗೂ ಹತ್ತನೇ ತರಗತಿಗಳಲ್ಲಿ ಪಠ್ಯದಲ್ಲಿ ಸಂತಾನೋತ್ಪತ್ತಿ, ಮುಟ್ಟಿನ ಕುರಿತ ಪಠ್ಯಗಳು ಇವೆ. ಆದರೆ, ಶಿಕ್ಷಕರು ಈ ಪಾಠಗಳನ್ನು ಸೂಕ್ತ ರೀತಿಯಲ್ಲಿ ಮಾಡುತ್ತಿಲ್ಲ. ಹಲವು ಶಾಲೆಗಳಲ್ಲಿ ಶಿಕ್ಷಕರು ಈ ಪಾಠಗಳನ್ನು ಓದಿಕೊಳ್ಳುವಂತೆ ಮಕ್ಕಳಿಗೇ ಹೇಳುತ್ತಿದ್ದಾರೆ.

ಮುಜುಗರ: 'ಶಾಲೆಗಳಲ್ಲಿ ಮುಟ್ಟಿನ ಕುರಿತು ಪಾಠ ಮಾಡುವುದಕ್ಕೆ ಶಿಕ್ಷಕರಿಗೆ ಮುಜುಗರ ಅಡ್ಡಿಬರುತ್ತದೆ. ಯುವ ಶಿಕ್ಷಕರಂತೂ ಈ ಪಾಠ ಮಾಡುವುದಕ್ಕೆ ಹೆಚ್ಚು ಹಿಂಜರಿಕೆ ತೋರುತ್ತಾರೆ. ಪುರುಷ ಶಿಕ್ಷಕರಂತೂ ಭಾರಿ ಹಿಂಜರಿಕೆ ವ್ಯಕ್ತಪಡಿಸುತ್ತಾರೆ' ಎನ್ನುತ್ತಾರೆ ಶಿವಮೊಗ್ಗ ಜಿಲ್ಲೆಯ ಶಾಲೆಯೊಂದರ ವಿಜ್ಞಾನ ಶಿಕ್ಷಕ.

'ನಾವಾಗೇ ಪಾಠ ಮಾಡಿ ಮುಗಿಸುವುದಕ್ಕೆ ಸಮಸ್ಯೆ ಇಲ್ಲ. ಮಕ್ಕಳು ತಿರುಗಿ ಪ್ರಶ್ನೆ ಕೇಳುತ್ತಾರೆ. ಆಗ ಕಸಿವಿಸಿ ಆಗುತ್ತದೆ. ಗಂಡು ಮಕ್ಕಳು, ಹೆಣ್ಣುಮಕ್ಕಳು ಇಬ್ಬರೂ ಒಟ್ಟಿಗೆ ಇರುತ್ತಾರೆ. ಆಶಾ ಕಾರ್ಯಕರ್ತೆಯರು ಶಾಲೆಗೆ ಬಂದು ಮುಟ್ಟಿನ ಬಗ್ಗೆ ವಿದ್ಯಾರ್ಥಿನಿಯರಿಗೆ ಮಾಹಿತಿ ನೀಡುತ್ತಾರೆ. ಹಾಗಾಗಿ ಸ್ವಲ್ಪ ಮಟ್ಟಿನ ಮುಜುಗರ ಕಮ್ಮಿ ಆಗುತ್ತದೆ' ಎನ್ನುತ್ತಾರೆ.

ದೇಶದಲ್ಲಿ ಮುಟ್ಟು ಮತ್ತು ಮುಟ್ಟಿನ ಶುಚಿತ್ವದ ಮಾಹಿತಿಯ ಕೊರತೆ ತೀವ್ರವಾಗಿದೆ. ಭಾರತದ ಶೇ 71ರಷ್ಟು ಹೆಣ್ಣುಮಕ್ಕಳಿಗೆ ತಾವು ಮೊದಲ ಬಾರಿ ಮುಟ್ಟಾಗುವುದಕ್ಕೂ ಮುಂಚೆ, ಆ ಬಗ್ಗೆ ಅರಿವೇ ಇರುವುದಿಲ್ಲ ಎನ್ನುತ್ತದೆ ಯುನೆಸ್ಕೊ ವರದಿ. ದೇಶದ ಹಲವು ರಾಜ್ಯಗಳಲ್ಲಿ ನಡೆಸಿದ ಸಮೀಕ್ಷೆಯ ಆಧಾರದಲ್ಲಿ ಯುನೆಸ್ಕೊ ಈ ವರದಿ ಸಿದ್ಧಪಡಿಸಿದೆ. ಈ ಅರಿವಿನ ಕೊರತೆಯನ್ನು ನೀಗಿಸಲು ಸರ್ಕಾರ ಮತ್ತಷ್ಟು ಕ್ರಮ ತೆಗೆದುಕೊಳ್ಳಬೇಕು ಎನ್ನುತ್ತದೆ ಈ ವರದಿ. ಈ ಬಗ್ಗೆ ಅರಿವು ಮೂಡಿಸಲು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಸ್ವಯಂಸೇವಕರೂ ಇಂಥದ್ದೇ ಪರಿಸ್ಥಿತಿಯನ್ನು ಕಂಡಿದ್ದಾರೆ

ಆ ದಿನಗಳಲ್ಲಿ ಹೀಯಾಳಿಕೆ

ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಶೇ 15ಕ್ಕೂ ಹೆಚ್ಚು ಹೆಣ್ಣುಮಕ್ಕಳು ಮುಟ್ಟಿನ ದಿನಗಳಲ್ಲಿ ಶಾಲೆಗೆ ಹೋಗುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. 'ಮುಟ್ಟಿನ ದಿನಗಳಲ್ಲಿ ಗೆಳತಿಯರೂ ನಮ್ಮನ್ನು ಹೀಯಾಳಿಸುತ್ತಾರೆ. ಹಲವು ಸಂದರ್ಭಗಳಲ್ಲಿ ಬಾಲಕರೂ ಹೀಯಾಳಿಸುತ್ತಾರೆ. ಸಾಮಾನ್ಯ ದಿನಗಳಲ್ಲಿ ಎರಡು ಜಡೆ ಹಾಕಿ, ಹೂ ಮುಡಿದಿರುತ್ತೇವೆ. ಮುಟ್ಟಿನ ದಿನಗಳಲ್ಲಿ ನಾವು ತಲೆಸ್ನಾನ ಮಾಡಿ, ಕೂದಲನ್ನು ಇಳಿಬಿಟ್ಟಿರುತ್ತೇವೆ ಮತ್ತು ಹೂ ಮುಡಿದಿರುವುದಿಲ್ಲ. ನಾವು ಮುಟ್ಟಾಗಿದ್ದೇವೆ ಎಂಬುದನ್ನು ಇದು ಸೂಚಿಸುತ್ತದೆ. ಇದನ್ನು ಗುರಿ ಮಾಡಿಕೊಂಡು ಬಾಲಕರು, ಕೆಲವೊಮ್ಮೆ ಶಿಕ್ಷಕರೂ ಹೀಯಾಳಿಸುತ್ತಾರೆ. ಹೀಗಾಗಿ ನಾವು ಶಾಲೆಗೆ ಹೋಗುವುದಿಲ್ಲ' ಎಂದು ಸಮೀಕ್ಷೆಯಲ್ಲಿ ಭಾಗಿಯಾದ ಹಲವು ಬಾಲಕಿಯರು ಹೇಳಿಕೊಂಡಿದ್ದಾರೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

- ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಈ ರೀತಿಯ ಹೀಯಾಳಿಕೆ ಹೆಚ್ಚು
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಮುಸ್ಲಿಂ ಬಾಲಕಿಯರು ಈ ರೀತಿಯ ಹೀಯಾಳಿಕೆಗೆ ಗುರಿಯಾಗುವ ಸಾಧ್ಯತೆ ಅತ್ಯಧಿಕ
- ಅಂಗವಿಕಲ ಬಾಲಕಿಯರು ಈ ರೀತಿಯ ಹೀಯಾಳಿಕೆಗೆ ಹೆಚ್ಚು ಗುರಿಯಾಗುತ್ತಾರೆ



33%	**23.3%**	**22.34%**	**21.59%**	**15.89%**	**3.1%**
ಮುಟ್ಟಿನ ವೇಳೆ ಶಾಲೆಗೆ ಹೋಗುವುದಿಲ್ಲ ಎಂದ ಉತ್ತರ ಪ್ರದೇಶದ ಬಾಲಕಿಯರ ಪ್ರಮಾಣ	ಮುಟ್ಟಿನ ವೇಳೆ ಶಾಲೆಗೆ ಹೋಗುವುದಿಲ್ಲ ಎಂದ ತಮಿಳುನಾಡಿನ ಬಾಲಕಿಯರ ಪ್ರಮಾಣ	ಮುಟ್ಟಿನ ವೇಳೆ ಶಾಲೆಗೆ ಹೋಗುವುದಿಲ್ಲ ಎಂದ ಪಶ್ಚಿಮ ಬಂಗಾಳದ ಬಾಲಕಿಯರ ಪ್ರಮಾಣ	ಮುಟ್ಟಿನ ವೇಳೆ ಶಾಲೆಗೆ ಹೋಗುವುದಿಲ್ಲ ಎಂದ ದೆಹಲಿಯ ಬಾಲಕಿಯರ ಪ್ರಮಾಣ	ಮುಟ್ಟಿನ ವೇಳೆ ಶಾಲೆಗೆ ಹೋಗುವುದಿಲ್ಲ ಎಂದ ಕರ್ನಾಟಕದ ಬಾಲಕಿಯರ ಪ್ರಮಾಣ	ಮುಟ್ಟಿನ ವೇಳೆ ಶಾಲೆಗೆ ಹೋಗುವುದಿಲ್ಲ ಎಂದ ಮಹಾರಾಷ್ಟ್ರದ ಬಾಲಕಿಯರ ಪ್ರಮಾಣ

ಮುಟ್ಟಿನ ಆರೋಗ್ಯದ ಬಗ್ಗೆ ಅರಿವಿನ ಮೂಲ

57.58% ತಾಯಿ	**12.08%** ಸಹೋದರಿ	**20.05%** ಸ್ನೇಹಿತೆ	**5.4%** ಸಂಬಂಧಿಕರು
28.02% ಶಿಕ್ಷಕರು	**3.34%** ಮಾಧ್ಯಮ	**11.83%** ಪಾಠ	**5.4%** ಆಶಾ ಕಾರ್ಯಕರ್ತೆ

ಮುಟ್ಟು ಮತ್ತು ಮುಟ್ಟಿನ ಶುಚಿತ್ವದ ಅರಿವಿನ ಪರಿ (ಈ ಸಮೀಕ್ಷೆಯಲ್ಲಿ ಭಾಗಿಯಾದವರ ಪೈಕಿ)

70% ಮುಟ್ಟು ಎಂಬುದು ಕೊಳಕು ಎಂದು ಭಾವಿಸಿರುವ ತಾಯಂದಿರ ಪ್ರಮಾಣ

88% ಮುಟ್ಟಿನ ಸಂದರ್ಭದಲ್ಲಿ ತಾವು ಹಳೆಯ ಬಟ್ಟೆ, ಬೂದಿ ಮೆತ್ತಿದ ಬಟ್ಟೆ, ಹಿಟ್ಟು ಮೆತ್ತಿದ ಬಟ್ಟೆ ಬಳಸುತ್ತೇವೆ ಎಂದವರ ಪ್ರಮಾಣ

'ಶಾಲೆಗೆ ಬರಬೇಡಿ'

ಚಿದಾನಂದ

'ಮುಟ್ಟಿನ ಕುರಿತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 50–60 ಶಾಲೆಗಳಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಶಾಲೆಗಳಿಗೆ ಹೋಗಿ ಹೀಗೆ ಒಂದು ಜಾಗೃತಿ ಕಾರ್ಯಕ್ರಮ ಮಾಡುತ್ತೇವೆ ಎಂದರೆ, ಶಾಲೆಗಳ ಮುಖ್ಯೋಪಾಧ್ಯಾಯರು ಶಾಲೆಗೆ ಬರಬೇಡಿ ಎನ್ನುತ್ತಾರೆ. ನಾವು ಜಾಗೃತಿ ಮೂಡಿಸಿದ ಸುಮಾರು 60 ಶಾಲೆಗಳ ಪೈಕಿ ಹತ್ತು ಶಿಕ್ಷಕರು ಮಾತ್ರವೇ ಈ ಕುರಿತ ಪಾಠಗಳನ್ನು ಸೂಕ್ತ ರೀತಿಯಲ್ಲಿ ಮಾಡಿದ್ದರು' ಎಂದರು ದೊಡ್ಡಬಳ್ಳಾಪುರದ 'ಯುವ ಸಂಚಲನ'ದ ಅಧ್ಯಕ್ಷ ಚಿದಾನಂದ. ಇವರು ಬೆಂಗಳೂರಿನ 'ಮಿಟು ಫೌಂಡೇಶನ್' ಸಂಸ್ಥೆಯ ಸಹಯೋಗದೊಂದಿಗೆ 'ತಡೆ ನಡೆ ಅಭಿಯಾನ' ಎನ್ನುವ ಅಭಿಯಾನವನ್ನು ಹಮ್ಮಿಕೊಳ್ಳುತ್ತಾ ಬಂದಿದ್ದಾರೆ.

'ಮುಟ್ಟಿನ ಕುರಿತು ಶಿಕ್ಷಕರಿಗೆ ಮೌಢ್ಯಗಳಿವೆ. ನಮ್ಮ ಜಾಗೃತಿ ಕಾರ್ಯಕ್ರಮದಲ್ಲಿ ಮಕ್ಕಳೊಂದಿಗೆ ಕೂತುಕೊಳ್ಳಲೂ ಅವರು ಮುಜುಗರ ಪಡುತ್ತಾರೆ. ನಮ್ಮ ಕಾರ್ಯಕ್ರಮ ಮುಗಿದ ಮೇಲೆ ಮಕ್ಕಳು ನಮ್ಮ ಬಳಿ ಬಂದು, ಶಿಕ್ಷಕರು ಏನೂ ಹೇಳಿಕೊಡುತ್ತಿಲ್ಲ ಎನ್ನುತ್ತಾರೆ' ಎಂದರು.

'ಮುಟ್ಟಾದರೆ ಶಿಕ್ಷಕಿಯರೇ ಶಾಲೆಗೆ ಹೋಗುವುದಿಲ್ಲ'

ಜ್ಯೋತಿ ಹಿಟ್ನಾಳ್

'ಮುಟ್ಟಾದ ದಿನಗಳಲ್ಲಿ ಶಿಕ್ಷಕಿಯರೇ ಶಾಲೆಗೆ ಹೋಗುವುದಿಲ. ಯಾಕೆ ಹೀಗೆ ಎಂದು ಕೇಳಿದರೆ, ಶಾಲೆಯಲ್ಲಿ ಸರಸ್ವತಿ ನೆಲೆಸಿದ್ದಾಳೆ ಎನ್ನುತ್ತಾರೆ' ಎಂದು ತಮ್ಮ ಅನುಭವ ಹಂಚಿಕೊಂಡರು ಜ್ಯೋತಿ ಹಿಟ್ನಾಳ್. ಕೊಪ್ಪಳ ಸುತ್ತಮುತ್ತಲ ಜಿಲ್ಲೆಗಳಲ್ಲಿ ಮುಟ್ಟಿನ ಕುರಿತು ಇರುವ ಮೌಢ್ಯಗಳ ಬಗ್ಗೆ ಇವರು ಪಿಎಚ್.ಡಿ ಮಾಡುತ್ತಿದ್ದಾರೆ. ಸಮುದಾಯದಲ್ಲಿ ಮುಟ್ಟಿನ ಸಂಬಂಧ ಜಾಗೃತಿ ಮೂಡಿಸುವ ಕೆಲಸವನ್ನೂ ಇವರು ಮಾಡುತ್ತಾರೆ.

'ಸಮಾಜದಲ್ಲಿಯೇ ಮುಟ್ಟಿನ ಬಗ್ಗೆ ಹಲವು ಮೌಢಗಳಿವೆ. ಶಿಕ್ಷಕರೂ ಸಮಾಜದ ಭಾಗವೇ ಅಲ್ಲವೆ. ಇದು ಶಿಕ್ಷಕರ ತಪ್ಪು ಅಂತಲೂ ಹೇಳಲು ಬರುವುದಿಲ್ಲ. ಶಿಕ್ಷಕರಿಗೆ ತರಬೇತಿ ನೀಡುವ ಸಂದರ್ಭದಲ್ಲೇ ಇಂಥ ಮುಜುಗರವನ್ನು, ಅವರಲ್ಲೇ ಇರುವ ಮೌಢ್ಯವನ್ನು ಹೋಗಲಾಡಿಸುವ ಕೆಲಸವಾಗಬೇಕು' ಎನ್ನುವುದು ಜ್ಯೋತಿ ಅವರ ಅಭಿಪ್ರಾಯ.

ನಾವು ನೋಡಿದ ಸಿನಿಮಾ

ಸಿಂಧು ಶ್ರೀನಿವಾಸಮೂರ್ತಿ

ಒಳ್ಳೆಯ ಕಥೆಯ ಪೇಲವ ದರ್ಶನ

1960ರ 'ಸುಧಾ' ವಾರಪತ್ರಿಕೆಯಲ್ಲಿ ಬಂದ ಮಾವಿನಕಾಯಿಯ ವಿವಿಧ ಸವಿರುಚಿಗಳ ಲೇಖನದೊಂದಿಗೆ ಸಿನಿಮಾ ಪ್ರಾರಂಭವಾಗುತ್ತದೆ. ಒಂದು ಮಾವಿನಕಾಯಿ ಎಷ್ಟೆಲ್ಲ ಪದಾರ್ಥಗಳಿಗೆ ಆಕರವಾಗಬಹುದೋ, ಅದೇ ರೀತಿ ಬದುಕು ಕೂಡ ಎಂಬ ವಿಭಿನ್ನ ಆಲೋಚನೆ ಪ್ರಾರಂಭದಲ್ಲಿಯೇ ಸಿನಿಮಾ ಕುರಿತು ನಿರೀಕ್ಷೆ ಹೆಚ್ಚಾಗುವಂತೆ ಮಾಡುತ್ತದೆ. ಮಾವಿನಕಾಯಿಯೊಂದು 'ಆಚಾರ್ ಆ್ಯಂಡ್ ಕೋ.' ಉಪ್ಪಿನಕಾಯಿಯೂ ಆಗಬಹುದು ಎಂದು ಕಥೆಯ ಸುಳಿವು ನೀಡಿರುವುದು ಮಜಾ ನೀಡುತ್ತದೆ. 'ಪ್ರಜಾವಾಣಿ' ಮುಖಪುಟದಲ್ಲಿ ಅಂದು ಬಂದಿರುವ ಸುದ್ದಿಗಳನ್ನೇ ಸರಕಾಗಿಸಿಕೊಂಡಿರುವ ಸುಪ್ರಭಾತ ಗೀತೆಯೊಂದಿಗೆ ಬೆಂಗಳೂರಿನ ಮಧುಸೂದನ್ ಆಚಾರ್ ಕುಟುಂಬದ ಕಥೆ ಶುರುವಾಗುತ್ತದೆ. ಈ ಹೊಸ ಬಗೆಯ ಸವಿಗಳನ್ನು ಬಹಳ ಕಾಲ ಉಳಿಸಿಕೊಂಡಿದ್ದರೆ ನಿರ್ದೇಶಕರು ಸಿನಿಮಾವನ್ನು ಮತ್ತೊಂದು ಹಂತಕ್ಕೆ ತೆಗೆದುಕೊಂಡು ಹೋಗುವ ಅವಕಾಶವಿತ್ತು.

ಅಶೋಕ್ ಹಾಗೂ ಸುಧಾ ಬೆಳವಾಡಿ, ಆಚಾರ್ ದಂಪತಿಯಾಗಿ ಕಾಣಿಸಿಕೊಂಡಿದ್ದಾರೆ. ಪಾತ್ರಕ್ಕೆ ನ್ಯಾಯ ಒದಗಿಸುವಂತೆ ನಟಿಸಿದ್ದಾರೆ. ನಿರ್ದೇಶಕಿ ಮತ್ತು ಪ್ರಮುಖ ನಟಿಯಾಗಿ ಸಿಂಧು ಶ್ರೀನಿವಾಸ್ ಮೂರ್ತಿ ಕೂಡ ಗಮನ ಸೆಳೆಯುವ ಪಾತ್ರ ಮಾಡಿದ್ದಾರೆ.

ಆಚಾರ್ ಆ್ಯಂಡ್ ಕೋ.

- **ನಿರ್ಮಾಣ:** ಅಶ್ವಿನಿ ಪುನೀತ್‌ರಾಜ್ ಕುಮಾರ್
- **ನಿರ್ದೇಶನ:** ಸಿಂಧೂ ಶ್ರೀನಿವಾಸಮೂರ್ತಿ
- **ಪಾತ್ರವರ್ಗ:** ಸಿಂಧೂ ಶ್ರೀನಿವಾಸಮೂರ್ತಿ, ಅಶೋಕ್, ಸುಧಾ ಬೆಳವಾಡಿ, ಅನಿರುದ್ಧ್ ಆಚಾರ್ಯ ಮುಂತಾದವರು.

ಆಚಾರ್ ದಂಪತಿಗೆ ಆರು ಹೆಣ್ಣು ಮತ್ತು ಮೂರು ಗಂಡುಮಕ್ಕಳು. ಈ ದೊಡ್ಡ ಸಂಸಾರದ ದಿನನಿತ್ಯದ ಕಥೆಯೇ ಇಡೀ ಸಿನಿಮಾದ ಕಥೆಯೂ ಹೌದು. ಮಕ್ಕಳು ಬೆಳೆದು ದೊಡ್ಡರಾಗುವುದು, ಅವರಿಗೆ ಮದುವೆ, ಅವರ ಕೆಲಸ. ಅಪ್ಪನ ಸಾವಿನ ನಂತರ ಮಗ ರಘು ಕೂಡ ಸಂಸಾರದ ಜಂಜಾಟದಲ್ಲಿ ಸುಸ್ತಾಗುತ್ತಾನೆ. ದಿನ ಮನೆಯಲ್ಲಿ ನೋಡುವ ದೃಶ್ಯಗಳನ್ನೇ 1960ರ ದಶಕದ ಫ್ರೇಮ್‌ನಲ್ಲಿ ನೋಡಿದ ಅನುಭವ. ಹೀಗಾಗಿ ಪ್ರಾರಂಭವಾದ 15 ನಿಮಿಷಕ್ಕೆ ಸಿನಿಮಾ ಒಂದು ರೀತಿ ಪೇಲವವೆನಿಸಲು ಶುರುವಾಗುತ್ತದೆ.

ಬಹಳ ಒಳ್ಳೆಯ ಕಥಾವಸ್ತು. ಛಾಯಾಗ್ರಾಹಕ ಅಭಿಮನ್ಯು ಸದಾನಂದನ್ 1960ರ ದಶಕವನ್ನು ಬಹಳ ಚೆಂದವಾಗಿ ಸೆರೆ ಹಿಡಿದಿದ್ದಾರೆ. ಕಲಾ ನಿರ್ದೇಶಕ ವಿಶ್ವಾಸ್ ಕಶ್ಯಪ್ ಕೆಲಸ ಕೂಡ ಅತ್ಯುತ್ತಮವಾಗಿದೆ. ಬಿಂದುಮಾಲಿನಿ ಅವರ ಹಿನ್ನೆಲೆ ಸಂಗೀತ ಕೂಡ ಆಪ್ತವಾಗಿದೆ. ಇಷ್ಟಾಗಿಯೂ ಈ ಸಿನಿಮಾ ಧಾರಾವಾಹಿಯಂತೆ ಭಾಸವಾಗಲು ಕಾರಣ ಎಲ್ಲಿಯೂ ಸಾಗದೆ ಅಲ್ಲಿಯೇ ಸುತ್ತುವ ಚಿತ್ರಕಥೆ ಹಾಗೂ ಒಳಾಂಗಣ ದೃಶ್ಯಗಳಿಂದ ಹೆಚ್ಚು ಹೊರಗೆ ಬಾರದೇ ಇರುವುದು. ಸಿನಿಮಾದಲ್ಲಿ ಇರಬೇಕಾದ ಎಲ್ಲ ರಸಗಳನ್ನು ತೆರೆಮೇಲೆ ಮೂಡಿಸುವ ಉಮೇದಿನಿಂದ ಹೆಣೆದ ಚಿತ್ರಕಥೆಯನ್ನು ನಿರ್ದೇಶಿಸುವ ಯತ್ನವೇನೋ ಇದೆ. ಆದರೆ ಅದು ದೃಶ್ಯವತ್ತಾಗಿ ಗಟ್ಟಿಯಾಗಿ ಮೂಡಿಬಂದಿಲ್ಲ.

–ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಭಾರತೀಯ ಸೇನೆಯವರು ಭದ್ರತೆಗೆ ಬಂದರೆ ಮಣಿಪುರ ಕುಕಿ ಮಹಿಳೆಯರು, ನೀವು ಹಿಂತಿರುಗಿ ಹೋಗದಿದ್ದರೆ ಅರಿವೆ ಕಳಚಿ ಬೆತ್ತಲೆ ಆಗುತ್ತೇವೆ ಎಂದು ಬೆದರಿಕೆ ಹಾಕುತ್ತಾರೆ...' ಎಡಪಂಥೀಯ ಎಡಬಿಡಂಗಿಗಳು ದೇಶದಲ್ಲಿ ಸುರಕ್ಷತೆ ಇಲ್ಲ ಅಂತಾರೆ, ಯಾವುದು ಸತ್ಯ ಎಂದು ತಿಳಿಯದು!' ಎಂದು ವ್ಯಕ್ತಿಯೊಬ್ಬರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದು, ಇದರೊಂದಿಗೆ ಮಹಿಳೆಯರು ಸೇನಾಧಿಕಾರಿಗಳೊಂದಿಗೆ ಮಾತನಾಡುತ್ತಿರುವ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ಆದರೆ, ಇದು ತಿರುಚಲಾದ ಸುದ್ದಿ.

'ಮಣಿಪುರದ ಮೈತೇಯಿ ಮಹಿಳಾ ಹೋರಾಟಗಾರರ ಗುಂಪು 'ಮೆಇರಾ ಪೈಬಿಸ್'ನ ಸದಸ್ಯರು ಸೇನೆ ಮತ್ತು ಅರೆಸೇನಾ ಪಡೆಗಳ ಸಂಚಾರಕ್ಕೆ ತಡೆ ಒಡ್ಡುತ್ತಿದ್ದಾರೆ. ಕುಕಿ ಜನರ ಮೇಲೆ ನಡೆಯುತ್ತಿರುವ ದೌರ್ಜನ್ಯ ಕೃತ್ಯಗಳಿಗೆ ನೆರವು ನೀಡುತ್ತಿದ್ದಾರೆ. ಸೇನೆಯವರು ಹಿಂದಿರುಗದಿದ್ದರೆ ಬೆತ್ತಲೆ ಆಗುತ್ತೇವೆ ಎಂದು ಬೆದರಿಕೆ ಹಾಕುತ್ತಾರೆ' ಎಂದು ಅಸ್ಸಾಂ ರೈಫಲ್ಸ್‌ನ ಅಧಿಕಾರಿಗಳು ಆರೋಪಿಸಿದ್ದಾರೆ ಎಂದು ಪಿಟಿಐ ಈ ಹಿಂದೆ ಸುದ್ದಿ ಪ್ರಕಟಿಸಿತ್ತು. ಭಾರತೀಯ ಸೇನೆಯ ಸ್ಪಿಯರ್ ಕೋರ್ ತುಕಡಿಯ ಅಧಿಕೃತ ಟ್ವಿಟರ್ ಖಾತೆಯಲ್ಲಿ ಈ ಮಹಿಳಾ ಹೋರಾಟಗಾರರು ಹೇಗೆಲ್ಲಾ ಸೇನಾಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂಬಂಥ ಹಲವು ವಿಡಿಯೊಗಳನ್ನು ಹಂಚಿಕೊಳ್ಳಲಾಗಿದೆ. ಈ ವಿಡಿಯೊಗಳಲ್ಲಿ ಎಲ್ಲಿಯೂ ಸೈನಿಕರು 'ಕುಕಿ ಮಹಿಳೆಯರು' ಎಂದು ಹೇಳಿಲ್ಲ. ಆದರೆ ಈ ವಿಡಿಯೊಗಳನ್ನು ತಪ್ಪಾದ ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ವಿನಯವಂತಿಕೆ

ಕವಿಯಲ್ಲ, ವಿಜ್ಞಾನಿಯಲ್ಲ, ಬರಿ ತಾರಾಡಿ |
ಅವನರಿವಿಗೆಟುಕುವವೊಲೊಂದಾತ್ಮನಯವ ||
ಹವಣಿಸಿದನಿದನು ಪಾಮರ ಜನದ ಮಾತಿನಲಿ |
ಕವನ ನೆನಪಿಗೆ ಸುಲಭ – ಮಂಕುತಿಮ್ಮ || 938 ||

ಪದ-ಅರ್ಥ: ತಾರಾಡಿ = ನಿರುಪಯುಕ್ತ ವ್ಯಕ್ತಿ, ಅವನರಿವಿಗೆಟುಕುವವೊಲೊಂದಾತ್ಮನಯವ = ಅವನ + ಅರಿವಿಗೆ + ಎಟುಕುವವೊಲ್(ಎಟುಕುವಂತಿದ್ದ) + ಒಂದು + ಆತ್ಮನಯವ, ಹವಣಿಸಿದನಿದನು- = ಹವಣಿಸಿದನು(ಹೊಂದಿಸಿದನು) + ಇದನು, ಪಾಮರ = ಸಾಮಾನ್ಯ.

ವಾಚ್ಯಾರ್ಥ: ಅವನು ಕವಿಯಲ್ಲ, ವಿಜ್ಞಾನಿಯಲ್ಲ, ಬರೀ ತಿರುಗಾಡಿಕೊಂಡಿರುವ ನಿರುಪಯುಕ್ತ ವ್ಯಕ್ತಿ. ಅವನ ತಿಳಿವಳಿಕೆಗೆ ನಿಲುಕುವಂಥ ಒಂದು ಜೀವನಾದರ್ಶವನ್ನು, ಸಾಮಾನ್ಯ ಜನರ ಮಾತಿನಲ್ಲಿ ಹೊಂದಿಸಿ ಹೇಳಿದನು. ಕವನ ನೆನಪಿಗೆ ಸುಲಭವಾದ್ದರಿಂದ ಆ ವಿಧಾನವನ್ನು ಬಳಸಿದನು.

ವಿವರಣೆ: ಇದು ಮತ್ತೊಬ್ಬರನ್ನು ಉದ್ದೇಶಿಸಿ ಬರೆದಂತಿದ್ದರೂ, ಕಗ್ಗವನ್ನು ಬರೆದ ತಮ್ಮ ಬಗ್ಗೆಯೇ ಡಿ.ವಿ.ಜಿ ಹೇಳಿಕೊಳ್ಳುತ್ತಿದ್ದಾರೆ. ನನ್ನ ಮಟ್ಟಿಗೆ ಜ್ಞಾನದ ಹಿಮಾಲಯವೇ ಆಗಿದ್ದ ಡಿ.ವಿ.ಜಿ ತಮ್ಮ ಬಗ್ಗೆ ಹೀಗೆ ಹೇಳಿಕೊಳ್ಳುವುದು ಅವರ ವಿನಯವಂತಿಕೆ. ತಾನು ಕವಿಯಲ್ಲ, ವಿಜ್ಞಾನಿಯಲ್ಲ, ಬರೀ ಉಪಯೋಗವಿಲ್ಲದೆ ತಿರುಗಾಡಿಕೊಂಡಿದ್ದವನು, ಎನ್ನುತ್ತಾರೆ. ಅವರ 'ಕಗ್ಗ' ಒಂದೇ ಸಾಲದೆ ಅವರ ಕವಿತ್ವಕ್ಕೆ ಸಾಕ್ಷಿಯಾಗಿ? ಒಮ್ಮೆ ಶಿವರಾಮ ಕಾರಂತರನ್ನು ಒಬ್ಬರು ಕೇಳಿದರು, "ನೀವು ಮೆಚ್ಚುವ ಕವಿ ಯಾರು? "ಕಾರಂತರು ಒಂದು ಕ್ಷಣವೂ ರೆಪ್ಪೆ ಬಡಿಯದೆ ಹೇಳಿದರಂತೆ, "ಡಿ.ವಿ.ಜಿ". ಅಂಥ ಕವಿ, ತಾನು ಕವಿಯಲ್ಲ ಎಂದು ಹೇಳಿಕೊಳ್ಳುವುದು ವಿನಯದ ಮಾತು. ವಿಜ್ಞಾನಿಯೆಂದರೆ ಪ್ರಯೋಗಶಾಲೆಯಲ್ಲಿ ಹೊಸ ಹೊಸ ಅನ್ವೇಷಣೆ ಮಾಡುವವನು ಎಂದಲ್ಲ. ವಿಜ್ಞಾನಿ ಎಂದರೆ- ವಿಶೇಷ ಜ್ಞಾನಿ.

ಯಾವುದೋ ವಿಷಯದಲ್ಲಿ ವಿಶೇಷ ಜ್ಞಾನ ಪಡೆದವರೆಲ್ಲ ವಿಜ್ಞಾನಿಗಳೇ. ಶಾಸ್ತ್ರಾಧ್ಯಯನ ಮಾಡಿ, ಅನುಭವವನ್ನು ಮಥಿಸಿ, ದೊಡ್ಡವರ ನಡವಳಿಕೆಗಳನ್ನು ಪರಿಶೀಲಿಸಿ, ತಮ್ಮದೇ ಆದ ನಿಶಿತ ಸಿದ್ಧಾಂತಕ್ಕೆ ಬಂದವರು ಡಿ.ವಿ.ಜಿ. ಹಾಗಿರದಿದ್ದರೆ ಆರು ದಶಕಗಳ ಕಾಲದ ಸಾಮಾಜಿಕ ಜೀವನದಲ್ಲಿ, ಸಮಾಜಕ್ಕೆ ಪ್ರಯೋಜನಕಾರಿಯಾಗಿ, ಬದುಕು ಸವೆಸಲು ಸಾಧ್ಯವಾಗುತ್ತಿರಲಿಲ್ಲ. ತಮ್ಮ ಅರಿವಿಗೆ ಬಂದ ಆತ್ಮನಯವನ್ನು ಸಾಮಾನ್ಯ ಜನರ ಮಾತಿನಲ್ಲಿ ಹೇಳಿದ್ದೇನೆ ಎನ್ನುತ್ತಾರೆ. ಇನ್ನೊಂದೆಡೆಗೆ ಅವರೇ ಹೇಳುತ್ತಾರೆ, "ಯಾವ ತಿಳುವಳಿಕೆ ನಮ್ಮ ಜನರಿಗಿದ್ದರೆ ಒಳ್ಳೆಯದಾದೀತೆಂದು ನನಗೆನಿಸಿತೋ, ಅಂಥ ತಿಳಿವಳಿಕೆಯನ್ನು ನಾನು ಸಂಪಾದಿಸಿಕೊಂಡು ಇತರರಿಗೆ ತಿಳಿಯಪಡಿಸಬೇಕೆಂದೂ, ಯಾವ ಸೊಗಸನ್ನು ನಾನು ಅನುಭವಿಸಿದಾಗ ಅದನ್ನು ಇತರರೂ ಅನುಭವಿಸಿಯಾರು ಎಂದು ನನಗನ್ನಿಸಿತೋ, ಅಂಥ ಸೊಗಸನ್ನು ತೋರಿಸುವುದೂ ನನ್ನ ಎಲ್ಲ ಬರವಣಿಗೆಯಲ್ಲೂ, ಮಾತಿನಲ್ಲೂ ಇರುವ ತಾತ್ಪರ್ಯ". ಇದು ಕಗ್ಗದ ರಚನೆಗೆ ಪ್ರೇರಕವಾದದ್ದು. ಅವರ ಗದ್ಯ ಬರಹ ಸಾಕಷ್ಟು ವಿಸ್ತಾರವಾದದ್ದು. ಆದರೆ ಚುಟುಕಾಗಿ ಕವನ ರೂಪದಲ್ಲಿ ಬರೆದರೆ ನೆನಪಿಸಿಕೊಳ್ಳುವುದು ಸುಲಭ ಎಂದು ಈ ಪ್ರಕಾರದಲ್ಲಿ ಬರೆದೆ ಎನ್ನುತ್ತಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜುಲೈ 31, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ತ್ರಯೋದಶಿ ಗಂ. 07-27 ನಂತರ ಚತುರ್ದಶಿ ಗಂ. 27-52 ನಕ್ಷತ್ರ: ಪೂರ್ವಾಷಾಢ ಗಂ. 18-58 ಯೋಗ: ವಿಷ್ಕಂಭ ಗಂ. 23-05 ಕರಣ: ತೈತಿಲ ಗಂ. 07-27, ಕರ್ಕಾಟಕ ಮಾಸದ 14 ನೇ ದಿನ, ಮಳೆನಕ್ಷತ್ರ: ಪುಷ್ಯ 4.
ರಾಹುಕಾಲ : ಬೆಳಿಗ್ಗೆ 07-30 - 09-00
ಸೂರ್ಯೋದಯ : 06-19 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 12 ಮೊಹರಮ್, ಅದೃಷ್ಟ ಸಂಖ್ಯೆ : 3, 11

ಮೇಷ: ಹಣ ಬೆಳವಣಿಗೆಗಾಗಿ ಹೂಡಿಕೆ ಮಾಡುವುದಿದ್ದರೆ ನಂಬಿಕಸ್ಥರಿಂದ ಕೇಳಿ ತಿಳಿದು ನಂತರವಷ್ಟೇ ಮಾಡಿ. ವೃತ್ತಿ ಜೀವನವು ಅಭಿವೃದ್ಧಿಯ ಪಥದಲ್ಲಿ ಸಾಗಲು ಸಹಾಯವಾಗುವ ತರಹದ ಬದಲಾವಣೆಗಳು ಬರುವವು.

ವೃಷಭ: ಕ್ಷೇತ್ರದಲ್ಲಿ ಶ್ರೇಯಸ್ಸನ್ನು ಪಡೆಯಲು ಈ ಹಿಂದೆ ಉಪಯೋಗಿಸಿದ ತಂತ್ರಗಳು ಈ ಬಾರಿಗೆ ಪ್ರಯೋಜನಕ್ಕೆ ಬರುವುದಿಲ್ಲ. ಯಾವುದೇ ಸಮಸ್ಯೆಗಳಿದ್ದರೂ ಮಾತುಕತೆಯ ಮೂಲಕ ಪರಿಹರಿಸಿಕೊಳ್ಳಿರಿ.

ಮಿಥುನ: ಅಜಾನಕ್ ಆಗಿ ಧನಲಾಭವಾಗುವ ಸಾಧ್ಯತೆಗಳಿವೆ. ಗೃಹ ವಸ್ತುಗಳ ಖರೀದಿ ಮಾಡಿ ಬಂದ ನಂತರ ಕೊಟ್ಟ ಹಣ ದುಬಾರಿಯಾಯಿತೆಂಬ ಪಶ್ಚಾತಾಪವಾಗಬಹುದು. ಹುಸಿ ಭರವಸೆಯ ಮಾತುಗಳು ಸಿಗಬಹುದು.

ಕರ್ಕಾಟಕ: ಜೀವನವು ಮೇಲ್ನೋಟಕ್ಕೆ ಎಲ್ಲರ ಕಣ್ಣಿಗೂ ಉತ್ತಮ ಕಂಡು ಬಂದರೂ ಒಳಗಿನ ಸತ್ಯಾಂಶ ನಿಮಗೆ ಮಾತ್ರ ತೋರುವುದು. ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕಾದವರು ನಿರ್ಲಕ್ಷಿಸಬೇಡಿ.

ಸಿಂಹ: ದೂರದ ಪ್ರಯಾಣವನ್ನು ಮಾಡಿ ಬಂದ ನಂತರ ಹವಾ ಬದಲಾವಣೆಯಾದ ಕಾರಣದಿಂದಾಗಿ ಉಂಟಾಗುವ ಅನಾರೋಗ್ಯದ ಸಮಸ್ಯೆಗಳನ್ನು ಎದುರಿಸುವಿರಿ. ದಿನದ ಅಂತ್ಯದಲ್ಲಿ ಯಾರಿಂದಲಾದರು ಶುಭಸುದ್ದಿ ಕೇಳುವಿರಿ.

ಕನ್ಯಾ: ಕುಟುಂಬದಲ್ಲಾಗಲಿ ಅಥವಾ ಕಾರ್ಯಕ್ಷೇತ್ರದಲ್ಲಾಗಲಿ ಅಭಿಪ್ರಾಯವನ್ನು ಬಹಿರಂಗವಾಗಿ ತಿಳಿಸಲು ಸಂಕೋಚಿಸಿಕೊಂಡರೆ ನಷ್ಟವಾಗುತ್ತದೆ. ಮನಸ್ಸಿನಲ್ಲಿ ವಿಷಯದ ದ್ವಂದ್ವಗಳಿದ್ದರೆ ಅದನ್ನು ಸರಿಪಡಿಸಿಕೊಳ್ಳಿ.

ತುಲಾ: ವ್ಯವಹಾರದಲ್ಲಿ ನಿಮಗೆ ಬೇಕಾದ ರೀತಿಯಲ್ಲಿ ಲಾಭ ಮಾಡಿಕೊಳ್ಳಲು ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳುವಿರಿ. ಪ್ರಾಥಮಿಕ ಶಾಲಾ ಶಿಕ್ಷಕ ವೃತ್ತಿಯವರಿಗೆ ತರಬೇತಿಯ ಕರೆಯೋಲೆ ಬರಬಹುದು.

ವೃಶ್ಚಿಕ: ಉದಯೋನ್ಮುಖ ಸಾಹಿತಿಗಳಿಗೆ ನಿಮ್ಮ ಚಿಂತನಾಶೀಲತೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕೆಂಬ ಹಿತ ಸಲಹೆಗಳು ಅಭಿಮಾನಿ ಕಡೆಯಿಂದ ಬರಬಹುದು. ವಿವಾದ ವಿಚಾರಗಳ ಬಗ್ಗೆ ಈ ದಿನದಲ್ಲಿ ಮಾತನಾಡುವುದು ಬೇಡ.

ಧನು: ಕಠಿಣ ಪರಿಶ್ರಮದಿಂದಾಗಿ ಬೆಳೆಸಿದ ಸಂಸ್ಥೆ ಜನಮಾನಸವನ್ನು ಗೆಲ್ಲುವುದು. ವಿಷಯಗಳನ್ನು ಸೋರಿಕೆ ಮಾಡುತ್ತಿರುವವರು ಕುಟುಂಬದರೆ ಇರಬಹುದು ಎಂಬ ಅನುಮಾನದಿಂದ ಎಲ್ಲರನ್ನೂ ಪರೀಕ್ಷಿಸುವಿರಿ.

ಮಕರ: ಬೇರೆಯವರ ತಪ್ಪುಗಳನ್ನು ಎತ್ತಿ ಹಿಡಿಯುವ ವ್ಯಕ್ತಿತ್ವ ಎಲ್ಲರ ದೂಷಣೆಗೆ ಒಳಗಾಗುವುದು. ಅನುಕೂಲಕರವಾದಂಥ ವಾತಾವರಣವಿದ್ದಲ್ಲಿ ವಿಶೇಷ ದಿನಗಳಿಗೆ ಬೇಕಾದ ವಸ್ತು ಖರೀದಿ ಮಾಡಿ.

ಕುಂಭ: ಜೀವನದಲ್ಲಿ ನಿರೀಕ್ಷಿಸಿದ ಫಲಿತಾಂಶದ ಬದಲು ಬಂದಂಥ ಫಲಿತಾಂಶವು ಅಪೇಕ್ಷಿತಕ್ಕಿಂತ ಹೆಚ್ಚಿನ ಸಂತೋಷವನ್ನು ನೀಡುವುದು. ದಂಪತಿಗಳಲ್ಲಿ ಹಲವು ದಿನಗಳ ಜಗಳವು ಇತ್ಯರ್ಥಗೊಳ್ಳಲಿದೆ.

ಮೀನ: ವಿಶೇಷ ಖಾದ್ಯಗಳ ತಯಾರಕರಿಗೆ ಬೇಡಿಕೆ ಬರುವುದು. ವೃತ್ತಿಯಲ್ಲಿ ಸ್ಥಾನಪಲ್ಲಟ ಬಯಸಿದ ನಿಮಗೆ ಹೊಸ ಕಾರ್ಯಸ್ಥಾನವು ಹಳೆಯದರಕ್ಕಿಂತ ಕಳಪೆಮಟ್ಟದಲ್ಲಿ ತೋರಬಹುದು. ಅಣ್ಣತಮ್ಮಂದಿರ ಸಮಾಗಮವಾಗುವುದು.

ಪದಬಂಧ 5396

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ನೇರವಲ್ಲದ ನುಡಿ (5)
4. ವಿಷ್ಣುವಿನ ದಶಾವತಾರಗಳಲ್ಲಿ ಐದನೆಯದು (3)
5. ಸರಕ್ಕನೆ ಕಾಣಿಸಿದ ರಾಕ್ಷಸ (3)
6. ಎಲ್ಲೆಯ ಬಳಿ ತಲೆದೋರಿದ ಶೀತ (3)
8. ಮಧುರ ಫಲ ನೀಡುವ ವೃಕ್ಷ (2)
9. ಸವತಿ ಹತ್ತಿರವಿರುವ ಹೆಂಡತಿ (2)
11. ವಾರಕ್ಕೆ ಮುನ್ನವೇ ಸಿಕ್ಕಿರುವ ಒಡೆತನ! (3)
14. ಕೊನೆಗಿರುವ ಗಜವನ್ನು ನೋಡುತ್ತಿರುವ ಪರಾಕ್ರಮಿ! (3)
15. ಒಳ್ಳೆಯ ಮಂದಿ (3)
16. ಲೋಹದ ಹಕ್ಕಿಯಲ್ಲಿನ ಪಯಣ (5)

ಮೇಲಿಂದ ಕೆಳಕ್ಕೆ
1. ಬರದಲ್ಲಿ ಹೊರದೂಡುವಿಕೆ (4)
2. ಅತ್ಯಂತ ಚಲುವಾದುದು,ಸುರದೊಳಗಿದೆ (5)
3. ತರಾತುರಿಯಿಂದ ಓಡುತ್ತಿರುವ ಕುದುರೆ (3)
4. ಒಳ್ಳೆಯ ಅಥವಾ ಕೆಟ್ಟ ನಾತ (3)
7. ಗರ ಬಡಿದಂತಿರುವ ಪತಿವ್ರತೆ! (3)
8. ಬಳೆಗಳ ಗೊಂಚಲು (3)
9. ಕಡಲಿನ ಮೇಲೆ ಕೈಗೊಂಡ ಪಯಣ (5)
10. ಕೊನೆಗೆ ಮಾನವನ್ನು ಹೊಂದಿರುವ ಹೆಮ್ಮೆ! (4)
12. ಒಳ್ಳೆಯ ದಿನ (3)
13. ಗೆಲುವು ತಿರುವುಮುರುವಾಗಿದೆಯಲ್ಲಾ? (3)



5395ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕಡವರ 3.ಪಾದಾಚಾರಿ 5.ಸಿತಾರ 6.ಸುರಲೋಕ 8.ಜಠರ 10.ವಕೀಲ 12.ತರತಮ 15.ವಠಾರ 16.ಶಿರಸ್ತ್ರಾಣ 17.ಗುಣಾಕಾರ

ಮೇಲಿಂದ ಕೆಳಕ್ಕೆ: 1.ಕಡಸು 2.ರಸಿಕ 3.ಪಾರಜ 4.ರಿಪು 7.ರಜತೋತ್ಸವ 9.ರತ್ನಖಚಿತ 11.ಲವಣ 12.ತರಗು 13.ಮತ್ತರ 14.ರಾಶಿ

ಸುಡೊಕು 5782

7				1			8	
	3	6	8		9	5	1	7
4			7				9	
	7							
		4	9	3	8		7	
8		1						
	8			9			4	
1		2		8		7		
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5781 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಡೆಟ್ ಫಂಡ್‌ಗೆ ಇಂಡೆಕ್ಸೇಷನ್ ಲಾಭ ಕೈಬಿಟ್ಟ ಪರಿಣಾಮ

ಹೂಡಿಕೆ ಸೆಳೆದ ಹೈಬ್ರಿಡ್ ಫಂಡ್

ಮುಖ್ಯಾಂಶಗಳು

- ಹೈಬ್ರಿಡ್ ಫಂಡ್‌ಗಳ ನಿರ್ವಹಣಾ ಸಂಪತ್ತು ವೃದ್ಧಿ
- ಡೆಟ್ ಫಂಡ್‌ಗಳಲ್ಲಿ ತಗ್ಗಿದ ಹೂಡಿಕೆ

ನವದೆಹಲಿ (ಪಿಟಿಐ): ಸತತ ಮೂರು ತ್ರೈಮಾಸಿಕಗಳಲ್ಲಿ ಹೂಡಿಕೆಯ ಹೊರಹರಿವು ಕಂಡಿದ್ದ ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳು ಈಗ ಮತ್ತೆ ಹೂಡಿಕೆದಾರರನ್ನು ಆಕರ್ಷಿಸಿವೆ. ಜೂನ್ ತ್ರೈಮಾಸಿಕದಲ್ಲಿ ಹೂಡಿಕೆದಾರರು ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ₹14 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಿದ್ದಾರೆ.

2021ರ ಡಿಸೆಂಬರ್ ತ್ರೈಮಾಸಿಕದ ಬಳಿಕ ಆಗಿರುವ ಗರಿಷ್ಠ ಹೂಡಿಕೆ ಇದಾಗಿದೆ. ಆ ಅವಧಿಯಲ್ಲಿ ₹20,422 ಕೋಟಿ ಹೂಡಿಕೆ ಆಗಿತ್ತು.

2022ರ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಆಗಿದ್ದಕ್ಕಿಂತಲೂ (₹10,084 ಕೋಟಿ) ಹೆಚ್ಚು ಹೂಡಿಕೆ ಆಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ಹೈಬ್ರಿಡ್ ಫಂಡ್‌ಗಳ ನಿರ್ವಹಣಾ ಸಂಪತ್ತು ಮೌಲ್ಯವೂ ಹೆಚ್ಚಾಗಿದೆ. ಈಕ್ವಿಟಿ ಮತ್ತು ಡೆಟ್ ಫಂಡ್‌ಗಳ ಸಂಯೋಜನೆಯೇ ಹೈಬ್ರಿಡ್ ಫಂಡ್.

ಹೂಡಿಕೆದಾರರು ಹೈಬ್ರಿಡ್ ಫಂಡ್‌ಗಳಿಂದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹14,436 ಕೋಟಿ, ಡಿಸೆಂಬರ್ ತ್ರೈಮಾಸಿಕದಲ್ಲಿ ₹7,041 ಕೋಟಿ ಹಾಗೂ ಮಾರ್ಚ್ ತ್ರೈಮಾಸಿಕದಲ್ಲಿ ₹7,420 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದರು.

ಡೆಟ್ ಫಂಡ್‌ಗಳಿಗೆ ತೆರಿಗೆ ಲೆಕ್ಕಹಾಕುವ ವಿಚಾರದಲ್ಲಿ ಮೊದಲು ಇದ್ದ ನಿಯಮಗಳನ್ನು ಬದಲಾಯಿಸಿರುವುದು ಹೈಬ್ರಿಡ್ ಫಂಡ್‌ಗಳಲ್ಲಿ ಹೂಡಿಕೆ ಹೆಚ್ಚಾಗಲು ಕಾರಣ ಎಂದು ಕ್ಲೈಂಟ್ ಅಸೋಸಿಯೇಟ್ಸ್‌ನ ಸಹ ಸಂಸ್ಥಾಪಕ ಹಿಮಾಂಶು ಕೊಹ್ಲಿ ಹೇಳಿದ್ದಾರೆ. ಹೂಡಿಕೆದಾರರು ಡೆಟ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಪ್ರಮಾಣವನ್ನು ಕಡಿಮೆ ಮಾಡಿದ್ದು, ಹೈಬ್ರಿಡ್ ಫಂಡ್‌ಗಳಲ್ಲಿ ಮಾಡುವ ಹೂಡಿಕೆಯನ್ನು ಹೆಚ್ಚಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ ಆಗಿರುವ ಒಟ್ಟು ಹೂಡಿಕೆಯಲ್ಲಿ ಶೇ 98ರಷ್ಟು (₹13,721 ಕೋಟಿ) ಆರ್ಬಿಟ್ರೇಜ್ ಫಂಡ್‌ನಿಂದಲೇ ಬಂದಿದೆ.

2023ರ ಜೂನ್ ತ್ರೈಮಾಸಿಕದ ಅಂತ್ಯಕ್ಕೆ ಹೈಬ್ರಿಡ್ ಫಂಡ್‌ಗಳ ನಿರ್ವಹಣಾ ಸಂಪತ್ತು ಮೌಲ್ಯವು ಶೇ 11ರಷ್ಟು ಹೆಚ್ಚಾಗಿದ್ದು ₹5.25 ಲಕ್ಷ ಕೋಟಿಗೆ ಏರಿಕೆ ಕಂಡಿದೆ. 2022ರ ಜೂನ್ ತ್ರೈಮಾಸಿಕದಲ್ಲಿ ₹4.71 ಲಕ್ಷ ಕೋಟಿಯಷ್ಟು ಇತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

15ನೇ ವರ್ಷದ ಸವಿನೆನಪು

ಶ್ರೀ.ಟಿ.ಬಾಲಕೃಷ್ಣ ರೆಡ್ಡಿ
ನಿಧನ: 31-07-2008
ನಿಮ್ಮ ನೆನಪೇ ನಮಗೆ ಸದಾ ದಾರಿ ದೀಪವಾಗಿದೆ.
ನಿಮ್ಮನ್ನೆ ಸ್ಮರಿಸುವ :
ಧರ್ಮಪತ್ನಿ: ಎಲ್.ಮಹಾಲಕ್ಷ್ಮಿ

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹465
12 ಮೊಟ್ಟೆಗೆ ₹65
ಮೈಸೂರು
100 ಮೊಟ್ಟೆಗೆ ₹465

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹175-415
ದ್ವಿತಳಿ (ಬಿ.ವಿ) ₹313-590

5.83 ಕೋಟಿ ಐ.ಟಿ. ವಿವರ ಸಲ್ಲಿಕೆ

ನವದೆಹಲಿ (ಪಿಟಿಐ): 2022–23ನೆಯ ಹಣಕಾಸು ವರ್ಷದಲ್ಲಿ ಗಳಿಸಿದ ಆದಾಯಕ್ಕೆ ಸಂಬಂಧಿಸಿದಂತೆ ಒಟ್ಟು 5.83 ಕೋಟಿ ಆದಾಯ ತೆರಿಗೆ ವಿವರಗಳು ಭಾನುವಾರದವರೆಗೆ ಸಲ್ಲಿಕೆಯಾಗಿವೆ.

ಇದು ಹಿಂದಿನ ವರ್ಷ ಜುಲೈ 31ರವರೆಗೆ ಸಲ್ಲಿಕೆಯಾಗಿದ್ದ ವಿವರಗಳ ಸಂಖ್ಯೆಗಿಂತ ಹೆಚ್ಚು.

ವೇತನ ಪಡೆಯುವವರು ಹಾಗೂ ತಮ್ಮ ಖಾತೆಗಳ ಲೆಕ್ಕಪರಿಶೋಧನೆ ನಡೆಸಬೇಕಿಲ್ಲದವರು ತಮ್ಮ ಆದಾಯ ತೆರಿಗೆ ವಿವರ ಸಲ್ಲಿಸಲು ಸೋಮವಾರ (ಜುಲೈ 31) ಕಡೆಯ ದಿನ.

ಸಹಕಾರ ಬ್ಯಾಂಕ್: ಹೂಡಿಕೆಗೆ ಮುನ್ನ...

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಸಹಕಾರ ಬ್ಯಾಂಕುಗಳಲ್ಲಿ ಹಣ ಹೂಡಿಕೆ ಮಾಡುವ ಮುನ್ನ ಯಾವೆಲ್ಲ ವಿಚಾರಗಳನ್ನು ಗಮನಿಸಬೇಕು? ಈ ಪ್ರಶ್ನೆಯನ್ನು ಕೇಳುತ್ತಿರುವುದಕ್ಕೆ ಕಾರಣಗಳು ಇವೆ.

ಠೇವಣಿ ಹಣಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳಿಗಿಂತ ಹೆಚ್ಚಿನ ಬಡ್ಡಿ ಲಾಭವನ್ನು ಹಲವು ಸಹಕಾರ ಬ್ಯಾಂಕುಗಳು ನೀಡುತ್ತವೆ. ಹೆಚ್ಚುವರಿ ಬಡ್ಡಿಯ ಲಾಭದ ಆಸೆಗೆ ಬೀಳುವ ಗ್ರಾಹಕರು ಪೂರ್ವಾಪರ ಯೋಚಿಸದೆ ಸಹಕಾರ ಬ್ಯಾಂಕುಗಳಲ್ಲಿ ಠೇವಣಿ ಇಡುವುದಿದೆ. ಉದಾಹರಣೆಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿಯ ಸದ್ಯದ ಬಡ್ಡಿ ದರ ಶೇ 7ರಿಂದ ಶೇ 7.25ರಷ್ಟಿದೆ. ಸಹಕಾರ ಬ್ಯಾಂಕುಗಳಲ್ಲಿ ಶೇ 8ರಿಂದ ಶೇ 10ರವರೆಗೂ ಬಡ್ಡಿ ಇದೆ. ಈ ಕಾರಣದಿಂದಾಗಿ ತಿಂಗಳ ಆದಾಯಕ್ಕೆ ಠೇವಣಿಗಳ ಮೇಲಿನ ಬಡ್ಡಿ ಗಳಿಕೆಯನ್ನು ಅವಲಂಬಿಸಿರುವವರು, ನಿವೃತ್ತ ನೌಕರರು ಸೇರಿದಂತೆ ಅನೇಕರು ಸಹಕಾರ ಬ್ಯಾಂಕುಗಳಲ್ಲಿ ದೊಡ್ಡ ಮೊತ್ತದ ಹಣ ಹೂಡಿಕೆ ಮಾಡುವುದಿದೆ. ಹೀಗೆ ಹೂಡಿಕೆ ಮಾಡಿದವರು ಬ್ಯಾಂಕ್ ಸಂಕಷ್ಟಕ್ಕೆ ಸಿಲುಕಿದಾಗ ಹಣ ಕಳೆದುಕೊಳ್ಳುವ ಅಪಾಯ ಇರುತ್ತದೆ.

ಸಹಕಾರ ಬ್ಯಾಂಕುಗಳು ಹಣಕಾಸಿನ ಸಂಕಷ್ಟಕ್ಕೆ ಸಿಲುಕುತ್ತಿರುವ ವಿದ್ಯಮಾನವು ಗ್ರಾಹಕರನ್ನು ಚಿಂತೆಗೀಡುಮಾಡಿರಬಹುದು. ಬೆಂಗಳೂರಿನ ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕಿನಲ್ಲಿ ಅವ್ಯವಹಾರ ನಡೆದ ಕೆಲವೇ ಸಮಯದಲ್ಲಿ ಬೆಂಗಳೂರಿನ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕಿನ ವ್ಯವಹಾರಗಳ ಮೇಲೆ ಆರ್‌ಬಿಐ ನಿರ್ಬಂಧ ಹೇರಿದೆ. ಈ ವಿದ್ಯಮಾನಗಳು, ಆರ್‌ಬಿಐ ಅಡಿಯಲ್ಲಿ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸಿದರೂ ಗ್ರಾಹಕರ ಪಾಲಿಗೆ ಅವು ಎಷ್ಟು ಸುರಕ್ಷಿತ ಎನ್ನುವ ಪ್ರಶ್ನೆ ಮೂಡಿಸಿವೆ.

ಹೆಚ್ಚು ಲಾಭ, ಹೆಚ್ಚು ರಿಸ್ಕ್: ಸಹಕಾರ ಬ್ಯಾಂಕುಗಳಲ್ಲಿ ಬಡ್ಡಿ ದರವು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಬಡ್ಡಿ ದರಕ್ಕಿಂತ ಸಾಮಾನ್ಯವಾಗಿ ಶೇ 1ರಿಂದ ಶೇ 1.5ರಷ್ಟು ಹೆಚ್ಚಿಗೆ ಇರುತ್ತದೆ. ಇನ್ನೂ ಹೆಚ್ಚು ಬಡ್ಡಿ ನೀಡುವ ನಿದರ್ಶನಗಳೂ ಇದ್ದಿರಬಹುದು. ಹೆಚ್ಚಿನ ಬಡ್ಡಿಯ ಲಾಭ ಠೇವಣಿದಾರರಿಗೆ ಸಿಕ್ಕಿದರೆ ಸಮಸ್ಯೆ ಇಲ್ಲ. ಆದರೆ, ಮಾರುಕಟ್ಟೆಯಲ್ಲಿ ಸಹಜವಾಗಿರುವ ಪ್ರಮಾಣಕ್ಕಿಂತ ಬಹಳ ಹೆಚ್ಚು ಬಡ್ಡಿ ಕೊಡುತ್ತೇವೆ ಎನ್ನುವ ಯಾವುದೇ ಸಹಕಾರ ಬ್ಯಾಂಕಿನ ಪೂರ್ವಾಪರವನ್ನು ಸರಿಯಾಗಿ ಪರಿಶೀಲಿಸಬೇಕಾಗುತ್ತದೆ. ಠೇವಣಿಗೆ ಹೆಚ್ಚು ಬಡ್ಡಿ ನೀಡಲು ಬ್ಯಾಂಕ್ ಸಿದ್ಧವಿದೆ ಎಂದಾದರೆ ಸಾಲ ಪಡೆಯುವ ವ್ಯಕ್ತಿಯಿಂದ ಆ ಬ್ಯಾಂಕ್ ಹೆಚ್ಚಿನ ಬಡ್ಡಿ ಪಡೆದುಕೊಳ್ಳುತ್ತದೆ ಎಂದು ಅರ್ಥ.

ಹೆಚ್ಚಿನ ಬಡ್ಡಿಯನ್ನು ಬ್ಯಾಂಕ್ ಪಡೆಯುತ್ತಿದೆ ಎಂದಾದರೆ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ವ್ಯಕ್ತಿಗೆ ಅದು ಸಾಲ ಕೊಟ್ಟಿಲ್ಲ ಎಂದೂ ಭಾವಿಸಬಹುದು. ಹಣಕಾಸಿನ ಸ್ಥಿತಿ ಸರಿಯಿಲ್ಲದ ವ್ಯಕ್ತಿಗೆ ಹೆಚ್ಚಿನ ಬಡ್ಡಿಗೆ ಸಾಲ ನೀಡಿದಾಗ, ಆ ವ್ಯಕ್ತಿ ಸಾಲ ಮರುಪಾವತಿ ಮಾಡದಿದ್ದರೆ ಬ್ಯಾಂಕಿನ ವಸೂಲಾಗದ ಸಾಲದ (ಎನ್‌ಪಿಎ) ಪ್ರಮಾಣ ಹೆಚ್ಚಾಗುತ್ತದೆ. ಕಾಲಕಾಲಕ್ಕೆ ಎನ್‌ಪಿಎ ಹೆಚ್ಚಾದರೆ ಬ್ಯಾಂಕಿನ ಹಣಕಾಸಿನ ಸ್ಥಿತಿ ಕೆಟ್ಟು, ಠೇವಣಿದಾರರ ಹಣಕ್ಕೆ ಗ್ಯಾರಂಟಿ ಇಲ್ಲದಂತಾಗುತ್ತದೆ.

ಸಹಕಾರ ಬ್ಯಾಂಕುಗಳು ಆರ್‌ಬಿಐ ನಿಯಂತ್ರಣಕ್ಕೆ ಒಳಪಡುತ್ತವೆ, ನಿಜ. ಆದರೆ ಆರ್‌ಬಿಐ ನಿಯಂತ್ರಣ ಇದೆ ಎಂದಾಕ್ಷಣ ಬ್ಯಾಂಕಿನ ಎಲ್ಲ ವ್ಯವಹಾರಗಳು ಪಕ್ಕಾ ಇವೆ ಎಂದಲ್ಲ. ಬ್ಯಾಂಕಿನ ಲೆಕ್ಕಪತ್ರಗಳನ್ನು ಪರಿಶೀಲಿಸುವಾಗ ಕೆಲವೊಮ್ಮೆ ಅಧಿಕಾರಿಗಳಿಂದಲೇ ಲೋಪ ಆಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ಅವರು ಆರ್ಥಿಕವಾಗಿ ಎಷ್ಟು ಉತ್ತಮ ಸ್ಥಿತಿಯಲ್ಲಿದ್ದಾರೆ, ಎಷ್ಟು ವರ್ಷದಿಂದ ಬ್ಯಾಂಕ್ ಉತ್ತಮವಾಗಿ ನಡೆಯುತ್ತಿದೆ ಎನ್ನುವುದನ್ನು ಗಮನಿಸಿ ಮುಂದುವರಿಯಬೇಕು.

ಸಾಲ ಕೊಡುವ ಪ್ರಕ್ರಿಯಲ್ಲಿನ ಸಮಸ್ಯೆ: ಸಹಕಾರ ಬ್ಯಾಂಕುಗಳಲ್ಲಿ, ಯಾರಿಗೆ ಸಾಲ ಕೊಡಬೇಕು ಎನ್ನುವ ನಿರ್ಧಾರವನ್ನು ನಿರ್ದೇಶಕರ ಮಂಡಳಿ ತೆಗೆದುಕೊಳ್ಳುತ್ತದೆ. ನಿರ್ದೇಶಕರ ಮಂಡಳಿಯ ತೀರ್ಮಾನಗಳನ್ನು ಬಹುತೇಕ ಸಂದರ್ಭಗಳಲ್ಲಿ ಬ್ಯಾಂಕಿನ ಸದಸ್ಯರು ಪ್ರಶ್ನಿಸುವುದಿಲ್ಲ. ಇನ್ನೊಂದು ವಿಚಿತ್ರ ಅಂದ್ರೆ, ಈ ಬ್ಯಾಂಕುಗಳಲ್ಲಿ ಠೇವಣಿ ಇಡುವ ವ್ಯಕ್ತಿಗೆ ಸದಸ್ಯತ್ವದ ಖಾತರಿ ಇಲ್ಲ. ಅವರಿಗೆ 'ಸಹ ಸದಸ್ಯತ್ವ' ನೀಡುವುದಿದೆ. 'ಸಹ ಸದಸ್ಯ'ನಿಗೆ ಮತದಾನದ ಹಕ್ಕಿರುವುದಿಲ್ಲ. ನಿರ್ದೇಶಕರ ಮಂಡಳಿಯ ನಿರ್ಧಾರಗಳನ್ನು 'ಸಹ ಸದಸ್ಯ' ಪ್ರಶ್ನಿಸಲು ಬರುವುದಿಲ್ಲ. ಅಲ್ಲದೆ, ಸಹಕಾರ ಬ್ಯಾಂಕುಗಳಲ್ಲಿ ರಾಜಕೀಯ ಹಸ್ತಕ್ಷೇಪ ಇರುವುದೂ ಇದೆ.

ಉದಾಹರಣೆಗಾಗಿ ಹೇಳಬೇಕು ಎಂದಾದರೆ, ₹100 ಕೋಟಿ ಸಾಲವನ್ನು ಬ್ಯಾಂಕ್ ನೂರು ಮಂದಿಗೆ ಕೊಟ್ಟಿದ್ದರೆ ಸಮಸ್ಯೆ ಹೆಚ್ಚಿರುವುದಿಲ್ಲ. ಒಬ್ಬನ ಸಾಲ ಬಾಕಿಯಾದರೆ ಇನ್ನುಳಿದ 99 ಮಂದಿ ಸಾಲ ಕಟ್ಟುತ್ತಾರೆ. ಆದರೆ ₹100 ಕೋಟಿ ಸಾಲವನ್ನು ಇಬ್ಬರಿಗೆ ಮಾತ್ರ ಕೊಟ್ಟಿದ್ದು, ಒಬ್ಬ ಸಾಲ ಕಟ್ಟದಿದ್ದರೂ ಬ್ಯಾಂಕ್ ತೀವ್ರ ಸಂಕಷ್ಟಕ್ಕೆ ಸಿಲುಕಬಹುದು. ಕಡಿಮೆ ಜನರ ಕೈಯಲ್ಲಿ ಬ್ಯಾಂಕಿನ ದೊಡ್ಡ ಮೊತ್ತ ಇದ್ದರೆ ಅದು ಅಷ್ಟು ಸುರಕ್ಷಿತವಲ್ಲ.

₹5 ಲಕ್ಷಕ್ಕೆ ಮಾತ್ರ ವಿಮೆ: ಯಾವುದೇ ಬ್ಯಾಂಕಿನಲ್ಲಿ ಠೇವಣಿ ಹಣಕ್ಕೆ ವಿಮೆ ಖಾತರಿ ಇರುವುದು ₹5 ಲಕ್ಷದವರೆಗಿನ ಮೊತ್ತಕ್ಕೆ ಮಾತ್ರ. ಬ್ಯಾಂಕ್ ಒಂದೊಮ್ಮೆ ದಿವಾಳಿಯಾದರೆ ಎಷ್ಟೇ ಹಣ ಠೇವಣಿ ಇಟ್ಟಿದ್ದರೂ ವಿಮೆ ರಕ್ಷಣೆಯ ಅಡಿಯಲ್ಲಿ ಸಿಗುವುದು ₹5 ಲಕ್ಷ ಮಾತ್ರ. ಬ್ಯಾಂಕಿಗೆ ಸ್ವತ್ತುಗಳಿದ್ದು, ಅವುಗಳನ್ನು ಮಾರಾಟ ಮಾಡಿದಾಗ ಹಣ ಬಂದರೆ ಠೇವಣಿಯ ಇನ್ನುಳಿದ ಹಣ ಸಿಗುತ್ತದೆ. ಹಾಗಾಗಿ ಭಾರಿ ಮೊತ್ತವನ್ನು ಠೇವಣಿಯಾಗಿ ಇಡುವಾಗ ಯಾವ ಸಹಕಾರ ಬ್ಯಾಂಕ್ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದೆ ಎನ್ನುವುದನ್ನು ಮನಗಂಡು ಮುಂದುವರಿಯಿರಿ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಕುಸಿತ ದಾಖಲಿಸಿದ ಷೇರುಪೇಟೆ

ಸತತ ನಾಲ್ಕು ವಾರಗಳ ಕಾಲ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಜುಲೈ 28ಕ್ಕೆ ಕೊನೆಗೊಂಡ ವಾರದಲ್ಲಿ ಕುಸಿತ ಕಂಡಿವೆ. 66,160 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.78ರಷ್ಟು ಕುಸಿದಿದೆ. 19,646 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.50ರಷ್ಟು ತಗ್ಗಿದೆ.

ಇಂಗ್ಲೆಂಡ್ ಸೆಂಟ್ರಲ್ ಬ್ಯಾಂಕಿನಿಂದ ಬಡ್ಡಿ ದರ ಹೆಚ್ಚಳ, ಅಮೆರಿಕದ ಫೆಡರಲ್ ಬ್ಯಾಂಕ್‌ನಿಂದ ಬಡ್ಡಿ ದರ ಏರಿಕೆ, ಪ್ರಮುಖ ಮಾರುಕಟ್ಟೆಗಳಲ್ಲಿ ಕಂಡುಬಂದ ಅನಿಶ್ಚಿತತೆ, ಕಂಪನಿಗಳ ತ್ರೈಮಾಸಿಕ ವರದಿಗಳಲ್ಲಿ ಕಂಡುಬಂದ ಮಿಶ್ರ ಫಲಿತಾಂಶ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಮಾರುಕಟ್ಟೆ ಇಳಿಕೆಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 5ರಷ್ಟು, ಫಾರ್ಮಾ ಸೂಚ್ಯಂಕ ಶೇ 4.8ರಷ್ಟು, ನಿಫ್ಟಿ ಆರೋಗ್ಯ ಸೂಚ್ಯಂಕ ಶೇ 4.3ರಷ್ಟು, ನಿಫ್ಟಿ ಮಾಧ್ಯಮ ಮತ್ತು ಲೋಹ ಸೂಚ್ಯಂಕ ತಲಾ ಶೇ 3.5ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಬ್ಯಾಂಕ್, ಐ.ಟಿ ಮತ್ತು ಎಫ್‌ಎಂಸಿಜಿ ಸೂಚ್ಯಂಕಗಳು ತಲಾ ಶೇ 1ರಷ್ಟು ಕುಸಿತ ಕಂಡಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,074.71 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹5,233.79 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಪೇಟಿಎಂ, ಟೆಕ್ ಮಹೀಂದ್ರ, ಕೋಟಕ್ ಮಹೀಂದ್ರ ಬ್ಯಾಂಕ್, ಭಾರತ್ ಪೆಟ್ರೋಲಿಯಂ, ಐಟಿಸಿ, ಇಂಡಿಯನ್ ಆಯಿಲ್ ಕುಸಿದಿವೆ. ಟಾಟಾ ಮೋಟರ್ಸ್ ಡಿವಿಆರ್, ಸಿಪ್ಲಾ, ಅದಾನಿ ಗ್ರೀನ್ ಎನರ್ಜಿ, ಅಂಬುಜಾ ಸಿಮೆಂಟ್ಸ್ , ಜೊಮಾಟೊ, ಟಾಟಾ ಪವರ್ ಮತ್ತು ಎನ್‌ಟಿಪಿಸಿ ಗಳಿಕೆ ದಾಖಲಿಸಿವೆ.

ಮುನ್ನೋಟ: ಈ ವಾರ ಜೆಕೆ ಟೈರ್ಸ್, ಅದಾನಿ ಗ್ರೀನ್, ಅದಾನಿ ಪವರ್, ಬಾಷ್ ಲಿ., ಬಟರ್ ಫ್ಲೈ, ಗೇಲ್, ಗೋ ಕಲರ್ಸ್, ಮಾರುತಿ ಸುಜುಕಿ, ಟಿಸಿಐ, ಪಿವಿಆರ್ ಐನಾಕ್ಸ್, ಐಷರ್ ಮೋಟರ್ಸ್, ಲುಪಿನ್, ಎಂಆರ್‌ಎಫ್, ಕರ್ಣಾಟಕ ಬ್ಯಾಂಕ್, ನೀಲ್ ಕಮಲ್, ಎಲ್‌ಐಸಿ ಹೌಸಿಂಗ್ ಫೈನಾನ್ಸ್, ಇಂಡಿಗೊ ಪೇಂಟ್ಸ್, ಟೈಟನ್, ಕೆಇಐ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ವರದಿ ಪ್ರಕಟಿಸಲಿವೆ.

ಆಗಸ್ಟ್ 8ರಿಂದ 10ರವರೆಗೆ ಆರ್‌ಬಿಐ ಹಣಕಾಸು ಸಮಿತಿ ಸಭೆ ನಡೆಯಲಿದ್ದು ರೆಪೊ ದರ ಹೆಚ್ಚಳದ ಸಾಧ್ಯತೆಯಿದೆ.

ಲೈಂಗಿಕ ದೌರ್ಜನ್ಯ: ವೈದ್ಯನಿಗೆ 18 ತಿಂಗಳ ಸಜೆ

ಲಂಡನ್ (ಪಿಟಿಐ): ಮಸಾಜ್‌ಗೆ ಸಂಬಂಧಿಸಿದಂತೆ ಭಾರತದಲ್ಲಿ ಎರಡು ವರ್ಷ ತರಬೇತಿ ಪಡೆದಿದ್ದೇನೆ ಎಂದು ಹೇಳಿಕೊಂಡಿದ್ದ ಬ್ರಿಟನ್‌ನ ವೈದ್ಯರೊಬ್ಬರಿಗೆ, ಸ್ಥಳೀಯ ನ್ಯಾಯಾಲಯವು ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ 18 ತಿಂಗಳ ಸಜೆ ವಿಧಿಸಿದೆ.

ಮಹಿಳಾ ರೋಗಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧಕ್ಕಾಗಿ ಅವರ ಹೆಸರನ್ನು ಲೈಂಗಿಕ ಅಪರಾಧಿಗಳ ನೋಂದಣಿ ಪಟ್ಟಿಗೆ 10 ವರ್ಷಗಳ ಅವಧಿಗೆ ಸೇರಿಸಿದೆ. ಈಸ್ಟ್‌ಬೌರ್ನ್ ಜಿಲ್ಲಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ, 34 ವರ್ಷದ ವೈದ್ಯ ಸೈಮನ್ ಅಬ್ರಹಾಂ ಶಿಕ್ಷೆಗೆ ಒಳಗಾದವರು. ತೀವ್ರ ತಲೆಬೇನೆ ಎಂದು ಬಂದಿದ್ದ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ನಾಲ್ಕು ದಿನದ ವಿಚಾರಣೆಯ ಬಳಿಕ ಆರೋಪ ಸಾಬೀತಾಗಿದ್ದು, ಚಿಚೆಸ್ಟರ್ ಕ್ರೌನ್ ನ್ಯಾಯಾಲಯವು ಸಜೆ ವಿಧಿಸಿ ಆದೇಶಿಸಿತು ಎಂದು ವರದಿ ತಿಳಿಸಿದೆ.

ಪಾಕ್: ಆತ್ಮಾಹುತಿ ದಾಳಿ, 44 ಸಾವು

ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಕೃತ್ಯ • 200ಕ್ಕೂ ಹೆಚ್ಚು ಜನರಿಗೆ ಗಾಯ

ಪೆಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಭಾನುವಾರ ರಾಜಕೀಯ ಪಕ್ಷವೊಂದರ ಸಭೆಯ ವೇಳೆ ಆತ್ಮಾಹುತಿ ಬಾಂಬ್ ದಾಳಿ ನಡೆದಿದ್ದು, ಕನಿಷ್ಠ 44 ಮಂದಿ ಮೃತಪಟ್ಟಿದ್ದಾರೆ.

ಇಲ್ಲಿನ ಬಜೌರ್ ಖರ್‌ನಲ್ಲಿ ಜಮೀಯತ್ ಉಲೆಮಾ ಇ ಇಸ್ಲಾಂ ಫಜ್ಲ್ (ಜೆಯುಐ–ಎಫ್) ಪಕ್ಷದ ಸಭೆಯಲ್ಲಿ ಸ್ಫೋಟ ಸಂಭವಿಸಿತು. 200ಕ್ಕೂ ಅಧಿಕ ಜನರು ಗಾಯಗೊಂಡಿದ್ದು, ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದರು.

'ಇದೊಂದು ಆತ್ಮಾಹುತಿ ಸ್ಫೋಟ ಕೃತ್ಯ ಎಂದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ. ಸ್ಫೋಟದ ಸ್ವರೂಪವನ್ನು ಪರಿಶೀಲಿಸಲಾಗುತ್ತದೆ. ಯಾವುದೇ ಸಂಘಟನೆಯು ಇದುವರೆಗೂ ದಾಳಿಯ ಹೊಣೆ ಹೊತ್ತುಕೊಂಡಿಲ್ಲ' ಎಂದು ಮಲಕ್ಕಾಡ್ ವಲಯದ ಡಿಐಜಿ ಮೆಹಮೂದ್ ಸಟ್ಟಿ ತಿಳಿಸಿದರು.

'ಇದು ಆತ್ಮಾಹುತಿ ಬಾಂಬ್ ದಾಳಿ. ಕೃತ್ಯಕ್ಕೆ 12 ಕೆ.ಜಿ ಸ್ಫೋಟಕಗಳನ್ನು ಬಳಸಲಾಗಿತ್ತು ಎಂದು ತನಿಖೆ ವೇಳೆ ತಿಳಿದುಬಂದಿದೆ' ಎಂದು ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿಯೊಬ್ಬರು ಹೇಳಿದರು.

ಸ್ಫೋಟದಲ್ಲಿ ಜೆಯುಐ–ಎಫ್‌ನ ಸ್ಥಳೀಯ ನಾಯಕ ಮೌಲಾನಾ ಜಿಯಾಉಲ್ಲಾಹ್ ಜಾನ್ ಮೃತಪಟ್ಟಿದ್ದಾರೆ ಎಂದು ಜಿಲ್ಲಾ ತುರ್ತು ಅಧಿಕಾರಿ ಸಾದ್ ಖಾನ್ ತಿಳಿಸಿದ್ದಾರೆ. ಮೃತರ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವವರು ಆತಂಕ ವ್ಯಕ್ತಪಡಿಸಿದರು.

ಸ್ಫೋಟ ಸಂಭವಿಸಿದಾಗ ಸಭೆಯಲ್ಲಿ ಸುಮಾರು 500 ಜನರು ಸೇರಿದ್ದರು.

ಕೃತ್ಯವನ್ನು ಖಂಡಿಸಿರುವ ಪ್ರಧಾನಿ ಶೆಹಬಾಜ್ ಷರೀಫ್, 'ಭಯೋತ್ಪಾದಕರು ಪಾಕಿಸ್ತಾನದ ಶತ್ರುಗಳು. ಅವರನ್ನು ನಿರ್ನಾಮ ಮಾಡುತ್ತೇವೆ. ದಾಳಿಯಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.

ಅಮೆರಿಕ ಖಂಡನೆ: ಆತ್ಮಾಹುತಿ ಬಾಂಬ್ ದಾಳಿಯನ್ನು ಅಮೆರಿಕ ಖಂಡಿಸಿದೆ. 'ಪ್ರಜಾಸತ್ತಾತ್ಮಕ ಸಮಾಜದಲ್ಲಿ ಇಂಥ ಭಯೋತ್ಪಾದಕ ಕೃತ್ಯಗಳಿಗೆ ಜಾಗ ಇಲ್ಲ. ಪಾಕಿಸ್ತಾನದ ಜನರೊಂದಿಗೆ ನಾವು ನಿಲ್ಲುತ್ತೇವೆ' ಎಂದು ಹೇಳಿದೆ.



ಪಾಕಿಸ್ತಾನದ ಬಜೌರ್ ಜಿಲ್ಲೆಯಲ್ಲಿ ರಾಜಕೀಯ ಪಕ್ಷದ ಸಭೆ ವೇಳೆ ಸ್ಫೋಟ ಸಂಭವಿಸಿದ ಸ್ಥಳ –ಎಎಫ್‌ಪಿ ಚಿತ್ರ

ಇಸ್ಲಾಂ ಸ್ವೀಕರಿಸಿದ ಅಂಜುಗೆ ಭೂಮಿ, ನಗದು ಕೊಡುಗೆ ನೀಡಿದ ಉದ್ಯಮಿ

ಪೆಶಾವರ (ಪಿಟಿಐ): ಭಾರತದಿಂದ ಬಂದು ತನ್ನ ಫೇಸ್‌ಬುಕ್ ಗೆಳೆಯನನ್ನು ವಿವಾಹವಾಗಿದ್ದ ಇಬ್ಬರು ಮಕ್ಕಳ ತಾಯಿ, 34 ವರ್ಷದ ಮಹಿಳೆಗೆ, ಅವರು ಮತಾಂತರಗೊಂಡು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಕ್ಕಾಗಿ ಸ್ಥಳೀಯ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರು ನಗದು ಮತ್ತು ಭೂಮಿಯನ್ನು ಉಡುಗೊರೆ ನೀಡಿದ್ದಾರೆ.

ಭಾರತದ ಅಂಜು ಇಸ್ಲಾಂಗೆ ಮತಾಂತರಗೊಂಡ ಬಳಿಕ ಫಾತಿಮಾ ಎಂದು ಹೆಸರು ಬದಲಿಸಿಕೊಂಡಿದ್ದರು. ಜುಲೈ 25ರಂದು ತನ್ನ 29 ವರ್ಷದ ಗೆಳೆಯ ನಸ್ರುಲ್ಲಾ ಅವರನ್ನು ಉಪ್ಪೆರ್ ದಿರ್ ಜಿಲ್ಲೆಯ ಗ್ರಾಮವೊಂದರಲ್ಲಿ ಮದುವೆಯಾಗಿದ್ದರು.

ಶನಿವಾರ ಆಕೆಯನ್ನು ಭೇಟಿಯಾಗಿದ್ದ ರಿಯಲ್ ಎಸ್ಟೇಟ್ ಉದ್ಯಮಿ ಮೊಹಿಸಿನ್ ಖಾನ್ ಅಬ್ಬಾಸಿ ಅವರು, ನೆರವಿನ ಚೆಕ್ (ಮೊತ್ತ ಬಹಿರಂಗಪಡಿಸಿಲ್ಲ) ಹಾಗೂ 10 ಮಾರ್ಲಾ ಅಳತೆಯ (ಅಂದಾಜು 2,722 ಚದರ ಅಡಿ) ಭೂಮಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಸ್ತಾಂತರಿಸಿದರು.

'ಇಸ್ಲಾಂಗೆ ಮತಾಂತರಗೊಂಡಿರುವ ಅವರು ಯಾವುದೇ ತೊಡಕಿಲ್ಲದೆ ಇಲ್ಲಿ ಹೊಸ ಬದುಕು ನಡೆಸಬೇಕು ಎಂದು ಈ ಕೊಡುಗೆ ನೀಡಿದ್ದೇನೆ. ಆಕೆಯನ್ನು ನಮ್ಮ ಧರ್ಮಕ್ಕೆ ಸ್ವಾಗತಿಸುವುದು ಮತ್ತು ಮದುವೆಗಾಗಿ ಅವರನ್ನು ಅಭಿನಂದಿಸುವುದು ನನ್ನ ಉದ್ದೇಶವಾಗಿದೆ' ಎಂದು ಅಬ್ಬಾಸಿ ತಿಳಿಸಿದರು.

ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ: ಹರ್ಷವರ್ಧನ್

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷ ಸ್ಥಾನದ ಚುನಾವಣೆಗೆ ಸ್ಪರ್ಧಿಸುವುದಾಗಿ ಭಾರತ ಮೂಲದ ಎಂಜಿನಿಯರ್ ಹರ್ಷವರ್ಧನ್ ಸಿಂಗ್ ಪ್ರಕಟಿಸಿದ್ದಾರೆ.

ಭಾರತ ಮೂಲದವರಾದ ನಿಕ್ಕಿ ಹ್ಯಾಲೆ ಮತ್ತು ವಿವೇಕ್ ರಂಗಸ್ವಾಮಿ ಅವರು ತಾವು ಸ್ಪರ್ಧಿಸುವುದಾಗಿ ಈಗಾಗಲೇ ಘೋಷಿಸಿದ್ದಾರೆ.

ಟ್ವಿಟರ್‌ನಲ್ಲಿ ವಿಡಿಯೊ ಸಂದೇಶ ಪೋಸ್ಟ್ ಮಾಡಿರುವ ಅವರು, ನಾನು 'ಜೀವಿತಾವಧಿ ರಿಪಬ್ಲಿಕನ್' ಎಂದು ಘೋಷಿಸಿಕೊಂಡಿದ್ದಾರೆ.

ರಿಪಬ್ಲಿಕನ್ ಪಕ್ಷದ ಕನ್ಸರ್ವೇಟಿವ್ ವಿಭಾಗವನ್ನು ನ್ಯೂ ಜೆರ್ಸಿಯಲ್ಲಿ ಸ್ಥಾಪಿಸಲು ಒತ್ತು ನೀಡಿದ್ದೇನೆ ಎಂದು ಹರ್ಷವರ್ಧನ್ ಹೇಳಿಕೊಂಡಿದ್ದಾರೆ.

ಚುನಾವಣಾ ಆಯೋಗದ ಬಳಿ ಅಧಿಕೃತವಾಗಿ ತಮ್ಮ ಸ್ಪರ್ಧೆಯನ್ನು ಕುರಿತಂತೆ ಉಮೇದುವಾರಿಕೆಯನ್ನು ಸಲ್ಲಿಸಿದ್ದಾರೆ ಎಂದು ಸ್ಥಳೀಯ ಹಿಲ್ ದೈನಿಕ ವರದಿ ಮಾಡಿದೆ.

ದಕ್ಷಿಣ ಕರೊಲಿನಾದ ಮಾಜಿ ಗವರ್ನರ್, 51 ವರ್ಷದ ಹ್ಯಾಲೆ ಮತ್ತು ಉದ್ಯಮಿ 37 ವರ್ಷದ ರಾಮಸ್ವಾಮಿ ಅವರು ರಿಪಬ್ಲಿಕನ್ ಪಕ್ಷದಿಂದ ಸ್ಪರ್ಧಿಸುವುದಾಗಿ ಈಗಾಗಲೇ ಘೋಷಿಸಿದ್ದಾರೆ. ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಲು, ಇವರು ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಜೊತೆ ಸ್ಪರ್ಧಿಸಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಾಸ್ಕೊ ಮೇಲೆ ಉಕ್ರೇನ್ ಡ್ರೋನ್ ದಾಳಿ

ಮಾಸ್ಕೊ (ಎ.ಪಿ): 'ಉಕ್ರೇನ್ ಸೇನೆಯು ಮಾಸ್ಕೊ ನಗರವನ್ನು ಗುರಿಯಾಗಿಸಿ ಭಾನುವಾರ ಮುಂಜಾನೆ ಡ್ರೋನ್ ದಾಳಿ ನಡೆಸಿದೆ. ದಾಳಿಯಲ್ಲಿ ಒಬ್ಬರು ಗಾಯಗೊಂಡಿದ್ದು, ವಿಮಾನ ನಿಲ್ದಾಣವೊಂದರ ಕಾರ್ಯ ನಿರ್ವಹಣೆಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿತ್ತು' ಎಂದು ರಷ್ಯಾದ ಅಧಿಕಾರಿಗಳು ತಿಳಿಸಿದ್ದಾರೆ.

'ಇದು, ಕೀವ್ ಆಡಳಿತದ ಭಯೋತ್ಪಾದನಾ ದಾಳಿ ಕೃತ್ಯ' ಎಂದು ರಷ್ಯಾದ ರಕ್ಷಣಾ ಸಚಿವಾಲಯ ಪ್ರತಿಕ್ರಿಯಿಸಿದೆ. 'ಒಟ್ಟು ಮೂರು ಡ್ರೋನ್ ದಾಳಿ ನಡೆದಿದೆ. ಇವುಗಳಲ್ಲಿ ಒಂದನ್ನು ಹೊಡೆದು ಉರುಳಿಸಲಾಗಿದೆ. ಉಳಿದ ಎರಡನ್ನು ನಿಷ್ಕ್ರಿಯಗೊಳಿಸಲಾಗಿದೆ' ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಮಾಸ್ಕೊದ ಮೇಯರ್ ಸೆರ್ಗಯ್ ಸೊಬ್ಯಾನಿನ್ ಅವರು, ಡ್ರೋನ್ ದಾಳಿಯಿಂದ ಎರಡು ಕಟ್ಟಡಗಳಿಗೆ ತೀವ್ರ ಹಾನಿಯಾಗಿದೆ. ಒಬ್ಬ ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ ಮೂಲದ ಬಾಲಕನಿಗೆ ಇರಿತ

ಮೆಲ್ಬರ್ನ್ (ಪಿಟಿಐ): ಭಾರತ ಮೂಲದ 16 ವರ್ಷದ ಬಾಲಕನಿಗೆ ದುಷ್ಕರ್ಮಿಗಳ ಗುಂಪೊಂದು ಜನ್ಮದಿನದಂದೇ ಇರಿದಿದ್ದು, ಸುಲಿಗೆ ಮಾಡಿರುವ ಘಟನೆ ಮೆಲ್ಬರ್ನ್‌ನ ಟಾರ್ನೈಟ್ ಸಿಟಿಯಲ್ಲಿ ಗುರುವಾರ ನಡೆದಿದೆ. ಬಾಲಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸ್ಥಳೀಯ ಸುದ್ದಿ ವಾಹಿನಿ ವರದಿ ಮಾಡಿದೆ.

'ರಿಯಾನ್ ಸಿಂಗ್ ಇರಿತಕ್ಕೊಳಗಾದ ಬಾಲಕ. ರಿಯಾನ್‌ನ ಇಬ್ಬರು ಸ್ನೇಹಿತರಿಗೂ ದುಷ್ಕರ್ಮಿಗಳು ಇರಿದಿದ್ದಾರೆ. ಘಟನೆ ನಡೆದಾಗ ಈ ಮೂವರು ಬಾಸ್ಕೆಟ್ ಬಾಲ್ ಆಟವಾಡುತ್ತಿದ್ದರು. ಈ ವೇಳೆ ಸ್ಥಳಕ್ಕೆ ಆಗಮಿಸಿದ ದುಷ್ಕರ್ಮಿಗಳ ಗುಂಪಿನವರು, ಮೊಬೈಲ್ ಫೋನ್ ಕೊಡುವಂತೆ ಕೇಳಿದ್ದಾರೆ. ಅಲ್ಲದೇ ರಿಯಾನ್ ಆಗ ತಾನೇ ಉಡುಗೊರೆಯಾಗಿ ಸ್ವೀಕರಿಸಿದ್ದ ಶೂಗಳನ್ನು ಕೊಡುವಂತೆ ದುಷ್ಕರ್ಮಿಗಳು ಆಗ್ರಹಿಸಿದ್ದರು' ಎಂದು ವಿಕ್ಟೋರಿಯಾ ಪೊಲೀಸರು ತಿಳಿಸಿದ್ದಾರೆ.

ಬಿರುಗಾಳಿ: 3 ಮಕ್ಕಳು ಸೇರಿ 10 ಸಾವು

ಮಾಸ್ಕೊ (ಎ.ಪಿ): ರಷ್ಯಾದ ಕೇಂದ್ರ ಭಾಗದಲ್ಲಿ ಭಾನುವಾರ ಭಾರಿ ಬಿರುಗಾಳಿ ಕಾಣಿಸಿಕೊಂಡಿದ್ದು, ಪ್ರವಾಸಿಗಳ ಶಿಬಿರವೊಂದರಲ್ಲಿ ಮೂವರು ಮಕ್ಕಳು ಸೇರಿ 10 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯಾಲ್‌ಚಿಕ್ ಸರೋವರದ ಸಮೀಪದಲ್ಲಿ ಈ ಪ್ರವಾಸಿಗಳು ನೆಲೆಯೂರಿದ್ದರು. ಅಲ್ಲದೆ, ಬಿರುಗಾಳಿಯಿಂದಾಗಿ ಹಲವೆಡೆ ಮರಗಳು ಉರುಳಿವೆ ಎಂದು ಪ್ರಾದೇಶಿಕ ವಲಯದ ನಾಯಕ ಯೂರಿ ಜೈಟ್‌ಸೆವ್ ಅವರು ಜಾಲತಾಣದಲ್ಲಿ ಮಾಹಿತಿಯನ್ನು ಪೋಸ್ಟ್ ಮಾಡಿದ್ದಾರೆ.

ಉಳಿದಂತೆ, ವೊಲ್ಗಾ ಫೆಡರಲ್ ಜಿಲ್ಲೆಯಲ್ಲಿ ಬಿರುಗಾಳಿ ಸಂಬಂಧಿತ ಅವಘಡಗಳಿಂದ ಒಟ್ಟು 76 ಜನರು ಗಾಯಗೊಂಡಿದ್ದಾರೆ. ಹಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ ಎಂದು ತುರ್ತು ಸೇವೆಗಳ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ನಾವು ಆಟೋ ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಫುಲ್ ಟೈಮ್ ಮತ್ತು ಪಾರ್ಟ್ ಟೈಮ್ ಗಳ ಸಂಬಳ ರೂ. 25000/-. ರೆಫರಲ್ ಬೋನಸ್ ರೂ. 10000/-. ಸೇರುವ ಬೋನಸ್ ರೂ.6000/-. ಆಸಕ್ತಿಯುಳ್ಳವರು ನಮ್ಮನ್ನು ಸಂಪರ್ಕಿಸಿ: 080-68507441

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಪ್ರವಾಸ

Travel

ದೆಹಲಿ ಯಮುನೋತ್ರಿ ಗಂಗೋತ್ರಿ,ಕೇದಾರನಾಥ್ ಬದರಿನಾಥ್,ಹರಿದ್ವಾರ್ 27.09.2023 02.10.2023 04.10.2023 ರಿಂದ 14 ದಿನಗಳು. ಪುರಿ,ಕೋನಾರ್ಕ್ ಕಾಶಿ,ಗಯಾ, ಪ್ರಯಾಗ,ನೈಮಿಶಾರಣ್ಯ 27.09.202302.10.2023 04.10.2023 26.10.2023 ರಿಂದ 10 ದಿನಗಳು. ಸೋಮನಾಥ್,ದ್ವಾರಕಾ ಉಜ್ಜಯಿನಿ,ಓಂಕಾರೇಶ್ವರ ಮಾತೃಗಯಾ,ಬೀಮಾಶಂಕರ್ ತ್ರಯಂಬಕೇಶ್ವರ 02.10.2023 26.10.2023 22.11.2023 ರಿಂದ 15/10 ದಿನಗಳು. ವಿಜಯವಾಡ,ವಾಸವಿಪೆನುಗೊಂಡ ಅನ್ನಾವರಂ,ಬುರ್ರಾಕೇವ್ಸ್ ವಿಶಾಖಪಟ್ಟಣ 01.10.202330.10.2023 22.11.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

12.8.2023 ರಿಂದ ರಾಮೇಶ್ವರ-ಕನ್ಯಾಕುಮಾರಿ, ತಿವೇಂದ್ರಂ-ಅಲಪಿ ಭೋಟಿಂಗ್, ಕೊವಲಂಬೀಚ್-ಗುರುವಾಯೂರು. 12.8.2023 ರಿಂದ 9ನವಗ್ರಹ ದೇವಾಲಯಗಳ ದರ್ಶನ ಮತ್ತು ಶ್ರೀರಂಗ-ತಾಜಾವೂರು ಕುಂಭಕೋಣಂ-ಚಿದಂಬರಂ. 14.8.2023ರಿಂದ ಕಾಶಿ-ಗಯಾ, ಅಲಹಾಬಾದ್-ಅಯೋಧ್ಯ, ಬುದ್ಧಗಯಾ. 25.9.2023 ರಿಂದ ಚಾರ್ಧಾಮ್ ಪ್ರವಾಸ ಕೇದಾರನಾಥ- ಗಂಗೋತ್ರಿ-ಬದರಿನಾಥ-ಯಮನೋತ್ರಿ, ದೆಹಲಿ, ಹರಿದ್ವಾರ. 8.10.2023 ರಿಂದ ವೈಷ್ಣೋದೇವಿ. ವಾಘಬಾರ್ಡರ್, ದೆಹಲಿ, ಅಮೃತ್ಸರ್, ಧರ್ಮಶಾಲಾ, ಹರಿದ್ವಾರ-ಆಗ್ರಾ.ಶ್ರೀಗುರುರಾಜ ಟ್ರಾವಲ್ಸ್, ಕೋಲಾರ್- 9449652555, 9611082432, 8123099913

ಏಷ್ಯನ್ ಟ್ರಾವಲ್ ಏಜೆನ್ಸಿ ಮಿನರ್ವ ಸರ್ಕಲ್ ಬೆಂಗಳೂರು ವತಿಯಿಂದ ವಿಮಾನ/ A/C ಬಸ್ ರೂಮ್ ಸೌಲಭ್ಯದೊಂದಿಗೆ 06.09.2023 04.10.2023 ಕಾಶಿ,ಗಯಾ,ಪ್ರಯಾಗ. 20.09.2023 16.10.2023 26.10.2023 ಚಾರ್‌ಧಾಮ್ ರಾಮೇಶ್ವರ,ಕನ್ಯಾಕುಮಾರಿ ಯಾತ್ರೆಗಳಿಗೆ ಸಂಪರ್ಕಿಸಿ: 26574131, 7204173686 9686708171

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸ್ (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

DH DECCAN HERALD ಪ್ರಜಾವಾಣಿ
BOOK YOUR REAL ESTATE
@3000/-* FOR 15 WORDS
AD IN DECCAN HERALD ALL KARNATAKA + PRAJAVANI BENGALURU CITY ON FRIDAY + SATURDAY + SUNDAY
conditions apply*
For More Details Contact:
9731810277 | 9901641752 | 9886213331 | 9845114560
080- 45557163 | 45557164

‘ನಿತೀಶ್ ಮತ್ತೆ ಎನ್‌ಡಿಎಗೆ’

ಮುಂಬೈ (ಪಿಟಿಐ): ‘ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಯಾವ ಕ್ಷಣದಲ್ಲಾದರೂ ಎನ್‌ಡಿಎ ಮೈತ್ರಿಕೂಟಕ್ಕೆ ಮತ್ತೆ ಮರಳುವ ಸಾಧ್ಯತೆ ಇದೆ’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಖಾತೆಯ ರಾಜ್ಯ ಸಚಿವ ರಾಮದಾಸ್ ಅಟವಾಳೆ ಹೇಳಿದ್ದಾರೆ.

ಲೋಕಸಭಾ ಚುನಾವಣೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಒಗ್ಗೂಡಲು ‘ಇಂಡಿಯಾ’ ರಚನೆಯಲ್ಲಿ ನಿತೀಶ್ ಮುಂಚೂಣಿ ಪಾತ್ರವಹಿಸಿದ್ದಾರೆ. ಈ ನಡುವೆಯೇ ಸಚಿವ ಅಟವಾಳೆ ಅವರ ಈ ಹೇಳಿಕೆಯು ವಿರೋಧ ಪಕ್ಷಗಳ ಮೈತ್ರಿಕೂಟದಲ್ಲಿ ಸಂಚಲನ ಸೃಷ್ಟಿಸಿದೆ.

‘ಇಂಡಿಯಾ’ದ ಸಂಚಾಲಕ ಸ್ಥಾನದ ಮೇಲೆ ಕಣ್ಣಿಟ್ಟಿರುವ ಅವರು ಪ್ರಧಾನಿ ಹುದ್ದೆಯ ಆಕಾಂಕ್ಷಿಯೂ ಆಗಿದ್ದಾರೆ’ ಎಂದರು.

‘ನಿತೀಶ್‌ಗೆ ಅಸಮಾಧಾನವಿದ್ದರೆ ಮುಂಬೈನಲ್ಲಿ ನಡೆಯುವ ‘ಇಂಡಿಯಾ’ದ ಮೂರನೇ ಸಭೆಗೆ ಅವರು ಹಾಜರಾಗುವುದಿಲ್ಲ’ ಎಂದ ಸಚಿವರು, ‘ನಿತೀಶ್ ಈ ಮೊದಲು ಎನ್‌ಡಿಎ ಕೂಟದಲ್ಲಿಯೇ ಇದ್ದರು. ಮುಂಬೈ ಸಭೆಗೆ ಗೈರುಹಾಜರಾದರೆ ಮತ್ತೆ ನಮ್ಮ ಮೈತ್ರಿಕೂಟಕ್ಕೆ ಮರಳುವ ಸಾಧ್ಯತೆ ಇದೆ’ ಎಂದರು.

ಸರ್ವಪಕ್ಷ ನಿಯೋಗಕ್ಕೆ ಸಲಹೆ

ಮಣಿಪುರಕ್ಕೆ ಭೇಟಿ ಕೊಡಿ: ‘ಇಂಡಿಯಾ’ ನಿಯೋಗಕ್ಕೆ ರಾಜ್ಯಪಾಲೆ ಕರೆ

ಮಣಿಪುರದಲ್ಲಿ ಸಂಘರ್ಷ ಕುರಿತ ವಸ್ತುಸ್ಥಿತಿಯ ಅವಲೋಕನ ನಡೆಸಿದ ‘ಇಂಡಿಯಾ’ ಸಂಸದರ ನಿಯೋಗವು, ಭಾನುವಾರ ರಾಜ್ಯಪಾಲೆ ಅನುಸೂಯಾ ಉಯಿಕೆ ಅವರನ್ನು ಭೇಟಿಯಾಗಿ ಮನವಿ ಪತ್ರ ಸಲ್ಲಿಸಿತು –ಪಿಟಿಐ ಚಿತ್ರ

ಇಂಫಾಲ್ (ಪಿಟಿಐ): ಮೈತೇಯಿ ಮತ್ತು ಕುಕಿ ಜನರ ನಡುವೆ ಅಪನಂಬಿಕೆ ಬಲಗೊಂಡಿದೆ. ಎರಡೂ ಸಮುದಾಯಗಳ ನಡುವೆ ಮಾತುಕತೆ ಮೂಲಕ ಇದರ ಪರಿಹಾರಕ್ಕಾಗಿ ಸರ್ವಪಕ್ಷಗಳ ನಿಯೋಗವು ಕಣಿವೆ ರಾಜ್ಯಕ್ಕೆ ಭೇಟಿ ನೀಡಬೇಕಿದೆ ಎಂದು ಮಣಿಪುರದ ರಾಜ್ಯಪಾಲೆ ಅನುಸೂಯಾ ಉಯಿಕೆ ಸಲಹೆ ನೀಡಿದ್ದಾರೆ.

ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದ ಬಳಿಕ ಮಾತನಾಡಿದ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು, ‘ರಾಜ್ಯಪಾಲರ ಸಲಹೆಯು ನ್ಯಾಯಯೋಚಿತವಾಗಿದ್ದು, ಇದಕ್ಕೆ ನಾವು ಒಪ್ಪಿಗೆ ಸೂಚಿಸಿದ್ದೇವೆ’ ಎಂದು ತಿಳಿಸಿದರು.

ಮಣಿಪುರದಲ್ಲಿ ಹಿಂಸಾಚಾರವನ್ನು ಶೀಘ್ರವೇ ನಿಯಂತ್ರಣಕ್ಕೆ ತರದಿದ್ದರೆ ದೇಶದಲ್ಲಿ ಭದ್ರತೆಯ ಸಮಸ್ಯೆಗಳು ಸೃಷ್ಟಿಯಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

‘ಸಂಘರ್ಷಕ್ಕೆ ಸಂಬಂಧಿಸಿದಂತೆ ನಿಯೋಗ ಮಂಡಿಸಿದ ವಿಷಯಗಳನ್ನು ರಾಜ್ಯಪಾಲರು ಆಲಿಸಿದರು. ಜನರ ಸಂಕಷ್ಟದ ಕಥೆಗಳನ್ನು ಕೇಳಿ ತೀವ್ರ ನೋವು ವ್ಯಕ್ತಪಡಿಸಿದರು’ ಎಂದರು.

ನಿಯೋಗದ ಸದಸ್ಯರು ಸಂತ್ರಸ್ತರ ಅಹವಾಲು ಕೇಳಿದ್ದಾರೆ. ಸಂಸತ್‌ನಲ್ಲಿ ಅವಕಾಶ ಲಭಿಸಿದರೆ ಕೇಂದ್ರ ಸರ್ಕಾರದ ಮೇಲೆ ಸಮಸ್ಯೆ ಬಗೆಹರಿಸಲು ಒತ್ತಡ ಹೇರಲಾಗುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರದ ವೈಫಲ್ಯ ಕುರಿತು ಗಮನ ಸೆಳೆಯಲಾಗುವುದು. ಉಭಯ ಸದನಗಳಲ್ಲಿ ಸುದೀರ್ಘ ಚರ್ಚೆಗೆ ಅವಕಾಶ ಕಲ್ಪಿಸುವಂತೆ ಸರ್ಕಾರಕ್ಕೆ ಕೋರುತ್ತೇವೆ ಎಂದು ತಿಳಿಸಿದರು.

ಪಡಿತರ, ಹಾಲಿಗೆ ತತ್ವಾರ

ಕಣಿವೆ ರಾಜ್ಯದಲ್ಲಿ ಪರಿಸ್ಥಿತಿಯು ದಿನೇ ದಿನೇ ಹದಗೆಡುತ್ತಿದೆ ಎಂದು ‘ಇಂಡಿಯಾ’ ನಿಯೋಗ ಆತಂಕ ವ್ಯಕ್ತಪಡಿಸಿದೆ.

ಮೈತೇಯಿ ಮತ್ತು ಕುಕಿ ಪ್ರದೇಶಗಳಿಗೆ ಎರಡೂ ಸಮುದಾಯದವರು ಪರಸ್ಪರ ಭೇಟಿ ನೀಡದಂತಹ ವಿಷಮ ಸ್ಥಿತಿ ತಲೆದೋರಿದೆ. ಪಡಿತರ, ಆಹಾರ, ಹಾಲು, ಮಕ್ಕಳ ಆಹಾರ ಸೇರಿದಂತೆ ದಿನನಿತ್ಯದ ಅಗತ್ಯ ವಸ್ತುಗಳ ಅಭಾವ ಸೃಷ್ಟಿಯಾಗಿದೆ. ಈ ಬಗ್ಗೆ ರಾಜ್ಯಪಾಲರ ಗಮನಕ್ಕೆ ತರಲಾಗಿದೆ. ತ್ವರಿತವಾಗಿ ಈ ಸಮಸ್ಯೆ ಬಗೆಹರಿಸುವುದಾಗಿ ಅವರು ಭರವಸೆ ನೀಡಿದ್ದಾರೆ ಎಂದು ತಿಳಿಸಿದೆ.

ಉಡಾವಣೆ ಯಶಸ್ವಿ– ಇಸ್ರೊ ವಿಜ್ಞಾನಿಗಳ ಸಂಭ್ರಮ

ಸಿಂಗಪುರದ 7 ಉಪಗ್ರಹ ಕಕ್ಷೆಗೆ

ಪ್ರಜಾವಾಣಿ ವಾರ್ತೆ

ಶ್ರೀಹರಿಕೋಟಾ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಭಾನುವಾರ ವಾಣಿಜ್ಯ ಕಾರ್ಯಾಚರಣೆಯ ಪಿಎಸ್‌ಎಲ್‌ವಿ-ಸಿ56/ಡಿಎಸ್‌-ಎಸ್‌ಎಆರ್ ಮಿಷನ್‌ನ ರಾಕೆಟ್ ಉಡ್ಡಯನವನ್ನು ಯಶಸ್ವಿಯಾಗಿ ನಡೆಸಿದೆ. ಸಿಂಗಪುರದ ಎಲ್ಲ ಏಳು ಉಪಗ್ರಹಗಳನ್ನು ಅವುಗಳ ಉದ್ದೇಶಿತ ಕಕ್ಷೆಗೆ ನಿಖರವಾಗಿ ಸೇರಿಸಿದೆ.

360 ಕೆ.ಜಿ ತೂಕದ ಪ್ರಮುಖ ಉಪಗ್ರಹ ಡಿಎಸ್‌-ಎಸ್‌ಎಆರ್ ಮತ್ತು 10 ಕೆ.ಜಿ.ಗಿಂತ ಕಡಿಮೆ ತೂಕದ ಮೂರು ನ್ಯಾನೊ ಉಪಗ್ರಹಗಳು ಸೇರಿ ಏಳು ಉಪಗ್ರಹಗಳನ್ನು ಹೊತ್ತ 44.4 ಮೀಟರ್ ಎತ್ತರದ ರಾಕೆಟ್ ಅನ್ನು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಮೊದಲ ಉಡಾವಣಾ ನೆಲೆಯಿಂದ (ಲಾಂಚ್ ಪ್ಯಾಡ್) ಬೆಳಿಗ್ಗೆ 6.30ಕ್ಕೆ ನಿಗದಿಯಾಗಿದ್ದ ಸಮಯಕ್ಕಿಂತ ಒಂದು ನಿಮಿಷ ತಡವಾಗಿ ಉಡ್ಡಯನ ಮಾಡಲಾಯಿತು. ಉಡ್ಡಯನದ 23 ನಿಮಿಷಗಳ ನಂತರ ಮೊದಲ ಉಪಗ್ರಹವು ಬೇರ್ಪಟ್ಟಿತು. ನಂತರ ಉಳಿದ ಇತರ ಉಪಗ್ರಹಗಳು ಅನುಕ್ರಮವಾಗಿ ಉದ್ದೇಶಿತ ಕಕ್ಷೆಗೆ ನಿಯೋಜಿಸಲ್ಪಟ್ಟವು ಎಂದು ಇಸ್ರೊ ಹೇಳಿದೆ.

ಬಹುನಿರೀಕ್ಷಿತ ಚಂದ್ರಯಾನ-3 ಉಡಾವಣೆಯ ಯಶಸ್ಸಿನ ನಂತರ,

ಸಿಂಗಪುರದ ಏಳು ಉಪಗ್ರಹಗಳನ್ನು ಹೊತ್ತ ಪಿಎಸ್‌ಎಲ್‌ವಿ-ಸಿ56/ಡಿಎಸ್‌-ಎಸ್‌ಎಆರ್ ಮಿಷನ್‌ನ ರಾಕೆಟ್ ಉಡ್ಡಯನವನ್ನು ಇಸ್ರೊ ಯಶಸ್ವಿಯಾಗಿ ನಡೆಸಿತು –ಪಿಟಿಐ ಚಿತ್ರ

ಈ ಮಿಷನ್ ಅನ್ನು ಇಸ್ರೊದ ವಾಣಿಜ್ಯ ವಿಭಾಗ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಐಎಲ್) ಸಿಂಗಪುರದ ಎಸ್‌ಟಿ ಎಂಜಿನಿಯರಿಂಗ್ ಸಂಸ್ಥೆಗಾಗಿ ಈ ಉಡಾವಣೆ ನಡೆಸಿತು.

ಒಂದು ನಿಮಿಷ ವಿಳಂಬ ಏಕೆ: ‘ಭಾನುವಾರ ಬೆಳಿಗ್ಗೆ 6.30ಕ್ಕೆ ನಿಗದಿಯಾಗಿದ್ದ ರಾಕೆಟ್ ಉಡ್ಡಯನ ಸಮಯವನ್ನು ನಂತರ 6.31ಕ್ಕೆ ಪರಿಷ್ಕರಿಸಲಾಯಿತು. ಕಕ್ಷೆಗೆ ತಲುಪುವ ರಾಕೆಟ್‌ನ ಹಾದಿಯಲ್ಲಿ ಬಾಹ್ಯಾಕಾಶದ ತ್ಯಾಜ್ಯ ಎದುರಾಗುವ ನಿರೀಕ್ಷೆ ಇತ್ತು. ರಾಕೆಟ್ ಸಾಗುವ ಹಾದಿಯಲ್ಲಿ ಬಾಹ್ಯಾಕಾಶದ ತ್ಯಾಜ್ಯಗಳು ಬಂದಾಗ ಉಡಾವಣೆ ಸಮಯ ಬದಲಿಸಬೇಕಾಗುತ್ತದೆ. ಅದು ಈ ಬಾರಿ ಸಂಭವಿಸಿದೆ’ ಎಂದು ಇಸ್ರೊ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಶಿಷ್ಟ ವೈಜ್ಞಾನಿಕ ಪ್ರಯೋಗದಲ್ಲಿ ಯಶಸ್ಸು: ಬಾಹ್ಯಾಕಾಶದಲ್ಲಿ ತ್ಯಾಜ್ಯದ ಅಪಾಯ ತಗ್ಗಿಸುವ, ಪಿಎಸ್‌ಎಲ್‌ವಿ ರಾಕೆಟ್‌ನ ನಾಲ್ಕನೇ ಹಂತ ಬಳಸಿಕೊಂಡು ಉಡ್ಡಯನ ನಡೆಸಿದ ಈ ವಿಶಿಷ್ಟ ವೈಜ್ಞಾನಿಕ ಪ್ರಯೋಗದಲ್ಲಿ ಯಶಸ್ಸು ದೊರೆತಿರುವುದು ಇಸ್ರೊ ವಿಜ್ಞಾನಿಗಳ ಖುಷಿಯನ್ನು ಇಮ್ಮಡಿಗೊಳಿಸಿದೆ.

‘ಈ ಕಾರ್ಯಾಚರಣೆಯಲ್ಲಿ ನಮ್ಮ ವಿಜ್ಞಾನಿಗಳು ಒಂದು ವಿಶಿಷ್ಟ ವೈಜ್ಞಾನಿಕ ಪ್ರಯೋಗ ನಡೆಸಿದರು. 536 ಕಿ.ಮೀ. ಎತ್ತರದ ಕಕ್ಷೆಯಲ್ಲಿ ವಾಣಿಜ್ಯ ಉಪಗ್ರಹಗಳನ್ನು ಇರಿಸಿದ ನಂತರ ಬಾಹ್ಯಾಕಾಶ ತ್ಯಾಜ್ಯದ ಸಮಸ್ಯೆಯನ್ನು ತಗ್ಗಿಸಲು ರಾಕೆಟ್‌ನ ನಾಲ್ಕನೇ ಹಂತವನ್ನು 300 ಕಿಲೋಮೀಟರ್ ಕಕ್ಷೆಗೆ ಇಳಿಸಲಿದೆ. ಪಿಎಸ್‌ಎಲ್‌ವಿ-ಸಿ56 ಮಿಷನ್ ಉಡಾವಣೆಯಲ್ಲಿ ಈ ಪ್ರಯೋಗ ಯಶಸ್ವಿಯಾಗಿದೆ’ ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದರು.

‘ಈ ವರ್ಷ ಜಿಎಸ್‌ಎಲ್‌ವಿ ಉಡಾವಣೆ ಸೇರಿದಂತೆ ‘ಉತ್ತೇಜನಕಾರಿ ಕಾರ್ಯಾಚರಣೆ’ಗಳಿಗೆ ಸಜ್ಜಾಗುತ್ತಿರುವಂತೆ ಮುಂದಿನ ಕೆಲವು ತಿಂಗಳುಗಳಲ್ಲಿ ಇಸ್ರೊ ಸರಣಿ ಚಟುವಟಿಕೆಗಳಿಗೆ ಅಣಿಯಾಗಿದೆ’ ಎಂದು ತಿಳಿಸಿದರು.

ಜನರ ಪರಿಶ್ರಮದ ಹಣ ಕೇಂದ್ರದಿಂದ ಲೂಟಿ– ಕಾಂಗ್ರೆಸ್

ಇಂಧನ ದರ ಇಳಿಸಿ: ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಟ್ರೋಲ್‌-ಡೀಸೆಲ್ ಬೆಲೆಯನ್ನು ಮೋದಿ ಸರ್ಕಾರ ಲೀಟರ್‌ಗೆ ₹ 25ರಿಂದ ₹ 30ರವರೆಗೂ ಕಡಿತಗೊಳಿಸಬೇಕು ಎಂದು ಕಾಂಗ್ರೆಸ್ ಭಾನುವಾರ ಆಗ್ರಹಿಸಿದೆ.

ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಸಾಮಾನ್ಯ ಜನರಿಗೆ ಕಚ್ಚಾತೈಲ ಬೆಲೆ ಇಳಿಕೆಯ ಲಾಭವನ್ನು ವರ್ಗಾಯಿಸುವ ಬದಲು; ಪೆಟ್ರೋಲ್‌-ಡೀಸೆಲ್ ಅನ್ನು ಹೆಚ್ಚಿನ ದರಕ್ಕೆ ಮಾರುವ ಮೂಲಕ ‘ನಿರ್ದಯಿ ಲಾಭ’ ಗಳಿಸುತ್ತಿದೆ ಎಂದು ದೂರಿದೆ.

‘ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ತೈಲ ಕಂಪನಿಗಳು ಲೀಟರ್‌ವೊಂದಕ್ಕೆ ₹10ಕ್ಕೂ ಹೆಚ್ಚು ಲಾಭ ಗಳಿಸುತ್ತಿವೆ. ಆದರೆ ಈ ಲಾಭದ ಹಣವನ್ನು ದೇಶದ ಸಾಮಾನ್ಯ ಜನರಿಗೆ ವರ್ಗಾಯಿಸುತ್ತಿಲ್ಲ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

‘ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದಂತೆ ಮೋದಿ ಸರ್ಕಾರವೂ ಸಂವೇದನಾಶೀಲತೆ ಹೊಂದಿದ್ದರೆ; ಹಣದುಬ್ಬರದಿಂದ ಕಂಗೆಟ್ಟಿರುವ ದೇಶದ ಸಾಮಾನ್ಯ ಜನರಲ್ಲಿ ತುಸು ನಿರಾಳಭಾವ ಮೂಡಿಸಲಿಕ್ಕಾಗಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಕಡಿತಗೊಳಿಸಲಿ. ಈಗಿರುವ ಮಾರುಕಟ್ಟೆ ದರಕ್ಕಿಂತ ಲೀಟರ್‌ಗೆ ₹ 25ರಿಂದ ₹ 30ರಷ್ಟು ಕಡಿಮೆ ಬೆಲೆಗೆ ಮಾರಾಟ ಮಾಡಲಿ’ ಎಂದು ತಿಳಿಸಿದ್ದಾರೆ.

‘ಹಣದುಬ್ಬರದ ‘ಕೆಟ್ಟ ಚಕ್ರ’ದೊಳಕ್ಕೆ ದೇಶದ ಜನರನ್ನು ಮೋದಿ ಸರ್ಕಾರ ತಳ್ಳಿದೆ. ಜೀವನಾವಶ್ಯಕ ವಸ್ತುಗಳ ಧಾರಣೆ ಇಳಿಮುಖವಾಗಬೇಕಾದರೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಕಡಿಮೆಯಾಗಲೇಬೇಕಿದೆ. ಪೆಟ್ರೋಲ್‌–ಡೀಸೆಲ್ ಬೆಲೆ ಕಡಿಮೆಯಾದರೆ ಮಾತ್ರ ಸಾರಿಗೆ ವೆಚ್ಚವೂ ತಗ್ಗಲಿದೆ. ಇದೀಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಗಣನೀಯವಾಗಿ ಇಳಿಕೆಯಾಗಿದ್ದು, ಸ್ಥಳೀಯ ಮಾರುಕಟ್ಟೆಯಲ್ಲೂ ಶೇ 35ರಷ್ಟು ಬೆಲೆಯನ್ನು ಕೇಂದ್ರ ಸರ್ಕಾರ ಕಡಿತಗೊಳಿಸಬೇಕು ಎಂಬುದೇ ಕಾಂಗ್ರೆಸ್‌ನ ಪ್ರಮುಖ ಬೇಡಿಕೆಯಾಗಿದೆ’ ಎಂದಿದ್ದಾರೆ.

‘ಒಂಬತ್ತು ವರ್ಷದಿಂದಲೂ ಮೋದಿ ಸರ್ಕಾರ ಪೆಟ್ರೋಲ್‌-ಡೀಸೆಲ್ ಮೇಲಿನ ತೆರಿಗೆ ಹೆಚ್ಚಿಸುತ್ತಿದೆ. ಜನರಿಂದ ₹ 32 ಲಕ್ಷ ಕೋಟಿಗೂ ಹೆಚ್ಚು ಮೊತ್ತವನ್ನು ಪಡೆದಿದೆ. ಯುಪಿಎ ಸರ್ಕಾರದ ಅವಧಿಯಲ್ಲಿ ಮೇ 2014ರಲ್ಲಿ ಪೆಟ್ರೋಲ್‌–ಡೀಸೆಲ್ ಮೇಲಿನ ಅಬಕಾರಿ ಸುಂಕ ಕ್ರಮವಾಗಿ ₹ 9.20 ಹಾಗೂ ₹ 3.46 ಇದ್ದರೆ, ಇದೀಗ ಬಿಜೆಪಿಯ ಆಡಳಿತದಲ್ಲಿ ₹ 19.90 ಮತ್ತು ₹ 15.80ರಷ್ಟಿದೆ. ಇವರೆಡಕ್ಕೂ ಹೋಲಿಸಿದರೆ ಶೇ 116 ಹಾಗೂ ಶೇ 357ರಷ್ಟು ಹೆಚ್ಚಿದೆ’ ಎಂದು ಹೇಳಿದ್ದಾರೆ.

‘ಕಚ್ಚಾತೈಲದ ಬೆಲೆ ಇಳಿಕೆಯ ಲಾಭವನ್ನು ಸಾಮಾನ್ಯ ಜನರಿಗೆ ವರ್ಗಾಯಿಸದ ಕೇಂದ್ರವು, ಅವರ ಪರಿಶ್ರಮದ ಹಣವನ್ನೇ ಲೂಟಿ ಹೊಡೆಯುತ್ತಿದೆ’ ಎಂದು ವಾಗ್ದಾಳಿ ನಡೆಸಿದ್ದಾರೆ.

‘ತೈಲ ಕಂಪನಿಗಳು ಈ ವರ್ಷ ₹ 1 ಲಕ್ಷ ಕೋಟಿ ಲಾಭ ಗಳಿಸಲಿವೆ. ಹಿಂದಿನ ವರ್ಷದ ಲಾಭ ₹ 33 ಸಾವಿರ ಕೋಟಿಗಿಂತಲೂ ಈ ಬಾರಿ ಮೂರು ಪಟ್ಟು ಹೆಚ್ಚಿರಲಿದೆ’ ಎಂದು ಅವರು ಕ್ರಿಸಿಲ್ ವರದಿಯನ್ನು ಉಲ್ಲೇಖಿಸಿದ್ದಾರೆ.

6ಕ್ಕೆ ಮೈತೇಯಿ ಹೋರಾಟ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಿಂದ ದೇಶದ ರಾಜಧಾನಿವರೆಗೆ ವಿಸ್ತರಿಸಿರುವ ಚಿನ್‌-ಕುಕಿ ಸಮುದಾಯಕ್ಕೆ ಸೇರಿದ ಮಾದಕ ವಸ್ತುಗಳ ಕಳ್ಳಸಾಗಣೆದಾರರ ವಿರುದ್ಧ ಹೋರಾಟ ನಡೆಸಲು ಮೈತೇಯಿ ಸಂಘಟನೆಗಳು ನಿರ್ಧರಿಸಿವೆ.

ಶನಿವಾರ ಮಣಿಪುರದಲ್ಲಿ ಈ ಸಮುದಾಯದಿಂದ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆದಿತ್ತು. ಈ ಹೋರಾಟವನ್ನು ದೆಹಲಿಗೆ ವಿಸ್ತರಿಸಲು ಮಣಿಪುರ ಏಕತೆ ಸಂಯೋಜನಾ ಸಮಿತಿ (ಸಿಒಸಿಒಎಂಐ) ಹಾಗೂ ಮಣಿಪುರ–ದೆಹಲಿ ಸಂಯೋಜನಾ ಸಮಿತಿ ತೀರ್ಮಾನಿಸಿವೆ. ಹಾಗಾಗಿ, ಆಗಸ್ಟ್ 6ರಿಂದ ದೆಹಲಿಯ ಜಂತರ್ ಮಂತರ್‌ನಲ್ಲಿ ಒಂದು ವಾರದ ಕಾಲ ಧರಣಿ ನಡೆಯಲಿದೆ.

ಕಣಿವೆ ರಾಜ್ಯದಲ್ಲಿ ಬೇರೂರಿರುವ ಈ ಭಯೋತ್ಪಾದಕರ ವಿರುದ್ಧ ಕಠಿಣ ಕ್ರಮ ಜರುಗಿಸಲು ಕೇಂದ್ರ ಸರ್ಕಾರ ನಿರ್ಲಕ್ಷ್ಯವಹಿಸಿದೆ ಎಂದು ದೂರಿರುವ ಸಮಿತಿಗಳು, ಕುಕಿಗಳಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ ಕಲ್ಪಿಸಬಾರದೆಂದು ಆಗ್ರಹಿಸಲಾಗುವುದು ಎಂದು ತಿಳಿಸಿವೆ.

ಕುಕಿ ಬಂಡುಕೋರರ ವಿರುದ್ಧದ ಕಾರ್ಯಾಚರಣೆಗೆ ರೂಪಿಸಿದ್ದ ಒಪ್ಪಂದವನ್ನು ಅಮಾನತಿನಲ್ಲಿಡಲಾಗಿದೆ. ಭಾರತ-ಮ್ಯಾನ್ಮರ್ ಗಡಿ ಭಾಗದ ಭದ್ರತೆಗೆ ಅಸ್ಸಾಂ ರೈಫಲ್ಸ್ ಬದಲಾಗಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವ ಪ್ರತ್ಯೇಕ ಪಡೆ ನಿಯೋಜಿಸುವಂತೆ ಒತ್ತಾಯಿಸಲಾಗುವುದು ಎಂದು ವಿವರಿಸಿವೆ.

ಆರೋಪ ಏನು?: ಚಿನ್‌-ಕುಕಿ ಬಂಡುಕೋರರು ಮತ್ತು ನೆರೆಯ ಮ್ಯಾನ್ಮರ್ ಭಯೋತ್ಪಾದಕರು ಕುಕಿ ಸಮುದಾಯ ಹೆಚ್ಚಿರುವ ಪ್ರದೇಶಗಳಲ್ಲಿ ಅಫೀಮು ಉತ್ಪಾದನೆಗೆ ಬಳಸುವ ಗಸಗಸೆ ಕೃಷಿಯಲ್ಲಿ ತೊಡಗಿದ್ದಾರೆ ಎಂದು ಮೈತೇಯಿ ಸಮುದಾಯ ಆರೋಪಿಸಿದೆ.

ಅಕ್ರಮ ವಲಸಿಗರು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದು, ಸರ್ಕಾರವು ತೆರವು ಕಾರ್ಯಾಚರಣೆ ಕೈಗೊಂಡಿತು. ಬಳಿಕ ಗಸಗಸೆ ಕೃಷಿ ಚಟುವಟಿಕೆಗೂ ಕಡಿವಾಣ ಹಾಕಲು ಮುಂದಾಯಿತು. ಆ ಬಳಿಕ ನಮ್ಮ ಮೇಲೆ ಕುಕಿ ಜನರಿಂದ ದಾಳಿ ಹೆಚ್ಚಿದೆ ಎಂದು ಮೈತೇಯಿ ಜನರು ದೂರುತ್ತಾರೆ.

ಅಫೀಮು ತಯಾರಿಕೆಯಲ್ಲಿ ನಾವು ತೊಡಗಿಕೊಂಡಿಲ್ಲ. ಮೈತೇಯಿ ಸಮುದಾಯ ಮತ್ತು ಮಣಿಪುರ ಸರ್ಕಾರವು ನಮಗೆ ಅಕ್ರಮ ವಲಸಿಗರ ಪಟ್ಟ ಕಟ್ಟಲು ಹೊರಟಿದೆ. ನಮ್ಮನ್ನು ಇಲ್ಲಿಂದ ಒಕ್ಕಲೆಬ್ಬಿಸಲು ಹುನ್ನಾರ ನಡೆದಿದೆ ಎಂಬುದು ಕುಕಿ ಸಮುದಾಯದ ಆರೋಪ.

ಇದಿನ್ನು ‘ಗದ್ದಲದ ವಾರ’?

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಾದಾತ್ಮಕ ಸುಗ್ರೀವಾಜ್ಞೆಯನ್ನು ಮಸೂದೆಯಾಗಿ ಅಂಗೀಕರಿಸುವ ಪ್ರಸ್ತಾವ ಹಾಗೂ ಮೋದಿ ಸರ್ಕಾರದ ವಿರುದ್ಧ ಮಂಡನೆಯಾಗಿರುವ ಅವಿಶ್ವಾಸ ಗೊತ್ತುವಳಿಯು ಸಂಸತ್ತಿನ ಉಭಯ ಸದನಗಳಲ್ಲೂ ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷಗಳ ‘ಇಂಡಿಯಾ’ ನಡುವೆ ‘ಗದ್ದಲದ ವಾರ’ಕ್ಕೆ ಕಾರಣವಾಗುವ ನಿರೀಕ್ಷೆಯಿದೆ.

ಮಣಿಪುರಕ್ಕೆ ‘ಇಂಡಿಯಾ’ ಒಕ್ಕೂಟದ 21 ಸಂಸದರು ಶನಿವಾರವಷ್ಟೇ ಭೇಟಿ ನೀಡಿದ್ದು, ಅಲ್ಲಿನ ಜನಾಂಗೀಯ ಸಂಘರ್ಷದ ವಿಷಯವೂ ಮತ್ತಷ್ಟು ಪ್ರತಿರೋಧಕ್ಕೆ ಇಂಬು ನೀಡಲಿದೆ.

ಸರ್ಕಾರದ ವಿರುದ್ಧ ಅಧಿವೇಶನದಲ್ಲಿ ಒಗ್ಗಟ್ಟಾಗಿ ಕಾರ್ಯತಂತ್ರ ರೂಪಿಸಲು ಸೋಮವಾರ ಬೆಳಿಗ್ಗೆ 9.30ಕ್ಕೆ ಪ್ರತಿಪಕ್ಷಗಳ ‘ಇಂಡಿಯಾ’ ಶಾಸಕಾಂಗ ಪಕ್ಷದ ನಾಯಕರ ಸಭೆ ಕರೆದಿದೆ. ಇಲ್ಲಿ ಒಕ್ಕೂಟವೂ ತನ್ನ ಕಾರ್ಯತಂತ್ರ ಹೆಣೆಯಲಿದೆ. ಮಣಿಪುರದ ವಾಸ್ತವವೂ ಚರ್ಚೆಯಾಗಲಿದೆ.

ಮಣಿಪುರದ ಜನಾಂಗೀಯ ಸಂಘರ್ಷದ ಕುರಿತಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಂಸತ್ತಿನಲ್ಲಿ ಹೇಳಿಕೆ ನೀಡಬೇಕು ಎಂಬ ತಮ್ಮ ಪಟ್ಟನ್ನು ವಿರೋಧ ಪಕ್ಷಗಳು ಮತ್ತಷ್ಟು ಬಿಗಿಗೊಳಿಸಿವೆ. ಚರ್ಚೆಗೂ ಆಗ್ರಹಿಸಿವೆ. ಆದರೆ ಇದನ್ನು ಒಪ್ಪದ ಸರ್ಕಾರ, ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರತಿಕ್ರಿಯಿಸಲಿದ್ದಾರೆ ಎಂದಿದೆ.

ಅವಿಶ್ವಾಸ ಗೊತ್ತುವಳಿ ನಿರ್ಣಯವನ್ನು ತಕ್ಷಣವೇ ಕೈಗೆತ್ತಿಕೊಳ್ಳಬೇಕು ಎಂದು ಪ್ರತಿಪಕ್ಷಗಳು ಆಗ್ರಹಿಸಿವೆ. ಹಿಂದಿನ ಬುಧವಾರವೇ ನೋಟಿಸ್ ಸಹ ನೀಡಿವೆ. ಈ ಪ್ರಕ್ರಿಯೆ ಪೂರ್ಣಗೊಳ್ಳುವ ತನಕವೂ ಯಾವುದೇ ಮಸೂದೆ ಅಂಗೀಕರಿಸಬಾರದು ಎಂದು ಪಟ್ಟು ಹಿಡಿದಿದ್ದರೂ; ಸರ್ಕಾರ ಆರು ಮಸೂದೆ ಅಂಗೀಕರಿಸಿದೆ.

ಲೋಕಸಭೆಯ ಶನಿವಾರದ ಕಲಾಪ ಪಟ್ಟಿಯಲ್ಲಿ ‘ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ (ತಿದ್ದುಪಡಿ) ಮಸೂದೆ’ಯ ಮಂಡನೆಯೂ ಸೇರ್ಪಡೆಯಾಗಿತ್ತು. ಸೋಮವಾರದ ಕಲಾಪದಲ್ಲಿ ಇದನ್ನು ಕೈಬಿಡಲಾಗಿದ್ದು, ಸರ್ಕಾರ ಯಾವ ಕ್ಷಣದಲ್ಲಾದರೂ ಪರಿಷ್ಕೃತ ಪಟ್ಟಿಗೆ ಇದನ್ನು ಸೇರಿಸಬಹುದಾಗಿದೆ.

ಲೋಕಸಭೆ, ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಒಕ್ಕೂಟಕ್ಕೆ ಬಹುಮತವಿಲ್ಲ. ಆದರೂ ‘ಇಂಡಿಯಾ’ ಪಕ್ಷಗಳು ಅವಿಶ್ವಾಸ ಗೊತ್ತುವಳಿ ಮಂಡಿಸಿದ್ದು ಮತ ಯಾಚಿಸಲಿವೆ. ರಾಜ್ಯಸಭೆಯಲ್ಲಿ ಈ ಸಂಖ್ಯೆ 100 ದಾಟಿದರೆ; ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದಾಗ ಇದು ಪರಿಣಾಮ ಬೀರಬಲ್ಲದು ಎಂದು ಪ್ರತಿಪಕ್ಷಗಳ ಮೂಲಗಳು ತಿಳಿಸಿವೆ.

ರಾಜ್ಯಸಭೆಯಲ್ಲಿ ಸರ್ಕಾರದ ಪರ 121 ಮತಗಳಿದ್ದರೆ, ‘ಇಂಡಿಯಾ’ ಬಳಿ 103 ಮತಗಳಿವೆ. ಬಿಜೆಡಿ, ಬಿಎಸ್‌ಪಿ, ಜಾತ್ಯತೀತ ಜನತಾದಳ ಯಾವ ಗುಂಪಿಗೂ ಬೆಂಬಲ ಸೂಚಿಸಿಲ್ಲ.

5 ವರ್ಷದ ಮಗುವಿನ ಮೇಲೆ ಅತ್ಯಾಚಾರ, ಹತ್ಯೆ

ಒಂದನೇ ಪುಟದಿಂದ...

‘ಜನಪ್ರತಿನಿಧಿಯಾಗಿ ಹಾಗೂ ತಂದೆಯಾಗಿ ನಾನು ಇದನ್ನಷ್ಟೇ ಬಯಸುವುದು. ಈ ಕುರಿತು ನಾನು ನಿನ್ನೆ ಕೇರಳದ ಮುಖ್ಯಮಂತ್ರಿ ಅವರ ಜತೆಗೆ ಮಾತನಾಡಿದ್ದೇನೆ’ ಎಂದರು.

ಅತ್ಯಾಚಾರ ಘಟನೆಯ ಕುರಿತು ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದಾಗ ಭಾವುಕರಾದ ಶಾಸಕ ಅನ್ವರ್, ‘ಮಗುವನ್ನು ಜೀವಂತವಾಗಿ ರಕ್ಷಿಸಬಹುದೆಂಬ ಆಶಾವಾದ ಹೊಂದಿದ್ದೆವು. ಈ ಪರಿಸ್ಥಿತಿ ಎದುರಾಗಬಹುದು ಎಂದು ಭಾವಿಸಿರಲಿಲ್ಲ’ ಎಂದರು.

ಬಿಜೆಪಿಯ ಕೇರಳ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಅವರು, ‘ವಲಸೆ ಕಾರ್ಮಿಕರಲ್ಲಿರುವ ಅಪರಾಧ ಮನೋಭಾವದ ಜನರನ್ನು ಗುರುತಿಸುವ ವ್ಯವಸ್ಥೆ ಆಗಬೇಕಿದೆ. ಕೆಲ ವಲಸೆ ಕಾರ್ಮಿಕರು ಮಾದಕ ದ್ರವ್ಯಗಳನ್ನು ಬಳಸುತ್ತಿದ್ದಾರೆ’ ಎಂದು ಆರೋಪಿಸಿದ್ದಾರೆ.

ಘಟನೆಯ ಬಳಿಕ ರಾಜ್ಯ ಸರ್ಕಾರದ ವಿರುದ್ಧ ತೀವ್ರ ಟೀಕೆ ಮಾಡಿರುವ ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್, ‘ಬಾಲಕಿಯನ್ನು ಪತ್ತೆ ಹಚ್ಚುವಲ್ಲಿ ರಾಜ್ಯ ಪೊಲೀಸರು ಲೋಪ ಎಸಗಿದ್ದಾರೆ’ ಎಂದೂ ಆರೋಪಿಸಿದೆ.

ಆದರೆ, ಈ ಆರೋಪವನ್ನು ನಿರಾಕರಿಸಿರುವ ಕೇರಳ ರಾಜ್ಯ ಪೊಲೀಸ್ ಮುಖ್ಯಸ್ಥ ಶೇಖ್ ದರ್ವೇಶ್ ಅವರು, ‘ಬಾಲಕಿಯನ್ನು ಪತ್ತೆ ಹಚ್ಚುವಲ್ಲಿ ಯಾವುದೇ ಲೋಪಗಳಾಗಿಲ್ಲ’ ಎಂದಿದ್ದಾರೆ.

‘ಬಾಲಕಿಯನ್ನು ಪೋಷಕರ ಜತೆಗೆ ಒಂದುಗೂಡಿಸುವ ನಮ್ಮೆಲ್ಲ ಪ್ರಯತ್ನಗಳು ವಿಫಲವಾದವು’ ಎಂದು ಕೇರಳ ಪೊಲೀಸರು ಶನಿವಾರ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕಿ ಕ್ಷಮೆ ಕೋರಿದ್ದಾರೆ.

ಅಂತಿಮ ವಿಧಿವಿಧಾನ: ಜನರ ಕಂಬನಿ

ಮಗುವಿನ ಮೃತದೇಹವಿರಿಸಿದ್ದ ಶಾಲೆಗೆ ಭಾನುವಾರ ನೂರಾರು ಜನ ಭೇಟಿ ನೀಡಿ ಶ್ರದ್ಧಾಂಜಲಿ ಸಲ್ಲಿಸಿದರು. ಆರೋಪಿಗೆ ಕಠಿಣಶಿಕ್ಷೆ ವಿಧಿಸಬೇಕು, ಮರಣದಂಡನೆ ನೀಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದರು. ನೂರಾರು ಜನರ ಸಮ್ಮುಖದಲ್ಲಿ ಬಾಲಕಿಯ ಅಂತಿಮ ವಿಧಿವಿಧಾನಗಳನ್ನು ನೆರವೇರಿಸುವಾಗ ಹೆಚ್ಚಿನ ಜನರು ಕಣ್ಣೀರಾಗಿದ್ದರು ಎಂದು ಸ್ಥಳೀಯ ಸುದ್ದಿ ಮಾಧ್ಯಮಗಳು ವರದಿ ಮಾಡಿವೆ.

‘ಈ ದೌರ್ಜನ್ಯವನ್ನು ಸಹಿಸಲಾಗದು. ಈ ಘಟನೆಯನ್ನು ಕೇಳಿದ ಬಳಿಕ ನನಗೆ ಸರಿಯಾಗಿ ನಿದ್ದೆ ಕೂಡಾ ಮಾಡಲಾಗುತ್ತಿಲ್ಲ. ನಮ್ಮ ಕಾನೂನುಗಳನ್ನು ಮತ್ತಷ್ಟು ಬಲಪಡಿಸಬೇಕಿದೆ. ಈ ರೀತಿಯ ಘಟನೆ ಮತ್ತೆ ಆಗಬಾರದು’ ಎಂದು ಮಹಿಳೆಯೊಬ್ಬರು ಆಗ್ರಹಿಸಿದರು.

4 ದಿನಗಳಲ್ಲಿ ಎರಡು ಅತ್ಯಾಚಾರ

ಸತ್ನಾ (ಮಧ್ಯಪ್ರದೇಶ): ಸತ್ನಾ ಜಿಲ್ಲೆಯಲ್ಲಿ 17 ವರ್ಷದ ಬಾಲಕಿ ಮೇಲೆ ವ್ಯಕ್ತಿಯೊಬ್ಬ ಅತ್ಯಾಚಾರ ನಡೆಸಿದ್ದು, ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಇದು ಕಳೆದ ನಾಲ್ಕು ದಿನಗಳಲ್ಲಿ ನಡೆದ ಎರಡನೇ ಅತ್ಯಾಚಾರ ಪ್ರಕರಣವಾಗಿದೆ. ಶುಕ್ರವಾರ ಮಧ್ಯಾಹ್ನ ಬಾಲಕಿ ಬಹಿರ್ದೆಸೆಗೆ ತೆರಳಿದ್ದಾಗ ಅತ್ಯಾಚಾರ ನಡೆದಿದ್ದು, ಘಟನೆಯ ಕುರಿತು ಬಾಲಕಿಯ ಕುಟುಂಬದ ಸದಸ್ಯರು ರಾಮ್‌ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಬಳಿಕ ಆರೋಪಿ ವಿಜಯ್ ಸಾಕೇತ್‌ನನ್ನು ಶನಿವಾರ ಬಂಧಿಸಲಾಗಿದೆ.

ಸತ್ನಾ ಜಿಲ್ಲೆಯ ಮೈಹರ್ ಪಟ್ಟಣದ ಪ್ರಸಿದ್ಧ ದೇವಸ್ಥಾನವೊಂದರ ಟ್ರಸ್ಟ್‌ನ ಇಬ್ಬರು ನೌಕರರು ಗುರುವಾರ 12 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದರು. ಬಳಿಕ ಬಾಲಕಿಯನ್ನು ಹೀನಾಯವಾಗಿ ಥಳಿಸಿದ್ದರು.

ಆರೋಪಿಗಳಾದ ರವೀಂದ್ರ ಕುಮಾರ್ ಮತ್ತು ಅತುಲ್ ಬಂದೋಪಾಧ್ಯಾಯ ಅವರನ್ನು ಬಂಧಿಸಲಾಗಿತ್ತು. ಘಟನೆಯ ಬಳಿಕ ಸ್ಥಳೀಯ ಆಡಳಿತವು ಆರೋಪಿಗಳ ಮನೆಗಳನ್ನು ಕೆಡವಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಹುತಾತ್ಮ ಯೋಧರ ಸ್ಮರಣಾರ್ಥ ಸ್ವಾತಂತ್ರ್ಯ ದಿನಾಚರಣೆಗೆ ಮುನ್ನ ಘೋಷಣೆ

ಮೇರಿ ಮಾಟಿ ಮೇರಾ ದೇಶ್ ಅಭಿಯಾನ

ನವದೆಹಲಿ (ಪಿಟಿಐ): ‘ದೇಶದ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸಲು ಸ್ವಾತಂತ್ರ್ಯ ದಿನಾಚರಣೆಗೂ ಮುನ್ನ ‘ಮೇರಿ ಮಾಟಿ ಮೇರಾ ದೇಶ್’ (ನನ್ನ ಮಣ್ಣು –ನನ್ನ ದೇಶ) ಅಭಿಯಾನವನ್ನು ಪ್ರಾರಂಭಿಸಲಾಗುವುದು’ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ತಿಳಿಸಿದ್ದಾರೆ.

ದೇಶಕ್ಕಾಗಿ ಪ್ರಾಣವನ್ನೇ ಅರ್ಪಿಸಿದ ವೀರ ಪುರುಷ ಹಾಗೂ ಮಹಿಳೆಯರನ್ನು ಗೌರವಿಸುವ ಹಿನ್ನೆಲೆಯಲ್ಲಿ ‘ಮೇರಿ ಮಾಟಿ ಮೇರಾ ದೇಶ್’ ಪ್ರಾರಂಭವಾಗುತ್ತಿದೆ.

ಮಾಸಿಕ ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ ಅವರು, ‘ಹುತಾತ್ಮರ ಸ್ಮರಣಾರ್ಥವಾಗಿ ಪಂಚಾಯಿತಿಗಳಲ್ಲಿ ವಿಶೇಷ ಶಾಸನಗಳನ್ನು ಸ್ಥಾಪಿಸಲಾಗುವುದು. ಅಭಿಯಾನದ ಅಡಿಯಲ್ಲಿ ಅಮೃತ ಕಳಸ ಯಾತ್ರೆಯನ್ನೂ ಆಯೋಜಿಸಲಾಗುವುದು. 7,500 ಕುಂಡಗಳಲ್ಲಿ ದೇಶದ ವಿವಿಧ ಭಾಗಗಳಿಂದ ಮಣ್ಣನ್ನು ಹಾಗೂ ಸಸಿಗಳನ್ನು ದೆಹಲಿಗೆ ತರಲಾಗುವುದು’ ಎಂದರು.

‘ವಿವಿಧ ಭಾಗಗಳಿಂದ ಬಂದ ಮಣ್ಣಿನಲ್ಲಿ ಸಸಿಗಳನ್ನು ನೆಟ್ಟು, ರಾಷ್ಟ್ರೀಯ ಯುದ್ಧ ಸ್ಮಾರಕದ ಬಳಿ ‘ಅಮೃತ ವಾಟಿಕಾ’ ನಿರ್ಮಿಸಲಾಗುವುದು. ಈ ವನ ‘ಏಕ ಭಾರತ ಶ್ರೇಷ್ಠ ಭಾರತ’ದ ಅತ್ಯುಚ್ಚ ಸಂಕೇತವಾಗಲಿದೆ’ ಎಂದು ಅವರು ತಿಳಿಸಿದರು.

ಸ್ವಾತಂತ್ರ್ಯೋತ್ಸವದ 75ನೇ ವಾರ್ಷಿಕೋತ್ಸವದ ಅಂಗವಾಗಿ ನಡೆಯುತ್ತಿರುವ ಅಮೃತ ಮಹೋತ್ಸವದ ಅಂಗವಾಗಿ ಇದುವರೆಗೆ ಎರಡು ಲಕ್ಷಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಮೋದಿ ಹೇಳಿದ ಇತರ ಪ್ರಮುಖ ಅಂಶಗಳು

- ಈ ವರ್ಷವೂ ‘ಹರ್ ಘರ್ ತಿರಂಗಾ’ ಅಭಿಯಾನ ಆಚರಿಸಲು ಪ್ರಧಾನಿ ಕರೆ.
- ದೇಶದ ವಿವಿಧ ಪವಿತ್ರ ಸ್ಥಳಗಳಿಗೆ ಯಾತ್ರಿಕರ ಸಂಖ್ಯೆ ಹೆಚ್ಚುತ್ತಿರುವ ಕುರಿತು ಉಲ್ಲೇಖ.
- ಪ್ರವಾಹ ಹಾಗೂ ನೈಸರ್ಗಿಕ ವಿಪತ್ತಿನಿಂದ ಜನರು ಅನುಭವಿಸಿದ ಸಮಸ್ಯೆಗಳ ಕುರಿತು ವಿಷಾದ ವ್ಯಕ್ತಪಡಿಸಿದರು.
- 250 ವರ್ಷಗಳಷ್ಟು ಹಳೆಯ ಮತ್ತು 2,500 ಅಪರೂಪದ ಹಾಗೂ ಪ್ರಾಚೀನ ಕಲಾಕೃತಿಗಳನ್ನು ಭಾರತಕ್ಕೆ ಅಮೆರಿಕವು ಹಿಂದಿರುಗಿಸಿದರ ಬಗ್ಗೆ ಮಾಹಿತಿ.
- ನೀರಿನ ಸಂರಕ್ಷಣೆಗಾಗಿ ವಿವಿಧೆಡೆ ಜನರು ನೂತನ ಪ್ರಯತ್ನ ಮಾಡುತ್ತಿರುವ ಕುರಿತು ವಿವರಣೆ.
- ಫ್ರಾನ್ಸ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ತಾವು 100 ವರ್ಷಕ್ಕೂ ಹೆಚ್ಚು ವಯಸ್ಸಾದ ಯೋಗ ಶಿಕ್ಷಕಿ ಷಾಲೆಟ್ ಚಾಪಿನ್ ಅವರನ್ನು ಭೇಟಿಯಾದ ಕುರಿತು ಉಲ್ಲೇಖ.
- ಮಾದಕ ವಸ್ತು ಬಳಕೆ ವಿರೋಧಿ ಅಭಿಯಾನಗಳಲ್ಲಿ ಭಾಗಿಯಾದ ದೇಶದ 11 ಕೋಟಿಗೂ ಹೆಚ್ಚಿನ ಯುವ ಸಮೂಹಕ್ಕೆ, ₹ 12 ಸಾವಿರ ಕೋಟಿ ಮೌಲ್ಯದ 10 ಲಕ್ಷ ಕೆ.ಜಿ ಮಾದಕ ವಸ್ತು ನಾಶಪಡಿಸಿದ್ದಕ್ಕೆ ಶ್ಲಾಘನೆ.

ಮೆಹರಂ ಇಲ್ಲದೆ ಹಜ್ ಯಾತ್ರೆ

ಸುಮಾರು 4 ಸಾವಿರಕ್ಕೂ ಹೆಚ್ಚು ಮಹಿಳೆಯರು ಈ ವರ್ಷ ‘ಮೆಹರಂ (ಪುರುಷ ಸಂಗಾತಿ ಅಥವಾ ಪುರುಷ ಸಹಚರ)’ ಇಲ್ಲದೆ ಹಜ್ ಯಾತ್ರೆ ಕೈಗೊಂಡಿರುವುದು ಬಹುದೊಡ್ಡ ಪರಿವರ್ತನೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

ಹಜ್ ನೀತಿಯಲ್ಲಿ ತಮ್ಮ ಸರ್ಕಾರವು ಮಾಡಿದ ಬದಲಾವಣೆಗಳಿಂದಾಗಿ ಕಳೆದ ಕೆಲವು ವರ್ಷಗಳಿಂದ ಹೆಚ್ಚು ಹೆಚ್ಚು ಜನರು ವಾರ್ಷಿಕ ಹಜ್ ಯಾತ್ರೆಗೆ ಹೋಗಲು ಅವಕಾಶ ಪಡೆಯುತ್ತಿದ್ದಾರೆ ಎಂದು ಅವರು ಹೇಳಿದರು.

‘ಈ ಬಾರಿ ಹಜ್ ಯಾತ್ರೆ ಕೈಗೊಂಡ ಮಹಿಳೆಯರ ಸಂಖ್ಯೆ 4 ಸಾವಿರಕ್ಕೂ ಹೆಚ್ಚು. ಯಾತ್ರೆಯಿಂದ ಮರಳಿದ ಮಹಿಳೆಯರಿಂದ ತಮಗೆ ಹೆಚ್ಚು ಪತ್ರಗಳು ಬಂದಿವೆ. ಈ ಹಿಂದೆ ಮುಸ್ಲಿಂ ಮಹಿಳೆಯರಿಗೆ ‘ಮೆಹರಂ’ ಇಲ್ಲದೆ ಹಜ್ ಯಾತ್ರೆ ಕೈಗೊಳ್ಳಲು ಅವಕಾಶವಿರಲಿಲ್ಲ. ಅವಕಾಶ ಕಲ್ಪಿಸಿದ ಸೌದಿ ಅರೇಬಿಯಾ ಸರ್ಕಾರಕ್ಕೂ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುವೆ’ ಎಂದೂ ಅವರು ಹೇಳಿದ್ದಾರೆ.

ಹಜ್ ಯಾತ್ರೆ ವೇಳೆ ಪುರುಷ ಸಂಗಾತಿ ಜತೆಗಿರಬೇಕೆಂಬ ನಿಯಮ ಕಡ್ಡಾಯವಾಗಿತ್ತು. 2018ರಲ್ಲಿ ಈ ನಿಯಮ ತೆಗೆದು ಹಾಕಿದ ನಂತರ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಪುರುಷ ಸಂಗಾತಿ ಇಲ್ಲದೇ ಈ ವರ್ಷ ಹಜ್ ಯಾತ್ರೆ ನಡೆಸಿದ್ದಾರೆ.

ಬಿಚಾರ್‌ಪುರದ ಬದಲಾವಣೆಗೆ ಮೆಚ್ಚುಗೆ

ಮಧ್ಯಪ್ರದೇಶದ ಬಿಚಾರ್‌ಪುರ ಗ್ರಾಮದ ಕುರಿತು ಮನ್ ಕಿ ಬಾತ್‌ನಲ್ಲಿ ಮಾತನಾಡಿದ ಮೋದಿ, ‘ಮಾದಕ ವ್ಯಸನದ ಹಿಡಿತಕ್ಕೆ ಒಳಗಾಗಿದ್ದ ಗ್ರಾಮವೊಂದು ಈಗ ಫುಟ್‌ಬಾಲ್ ಕ್ರೀಡೆಯ ತಾಣವಾಗಿ, ‘ಪುಟ್ಟ ಬ್ರೆಜಿಲ್’ ಆಗಿ ಬದಲಾಗಿದೆ. ಈ ಮಹತ್ವದ ಬದಲಾವಣೆಗೆ ರಾಷ್ಟ್ರ ಮಟ್ಟದ ಕ್ರೀಡಾಪಟು ಹಾಗೂ ತರಬೇತುದಾರ ರಾಯೀಸ್ ಅಹ್ಮದ್ ಅವರು ಕಾರಣ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಅಕ್ರಮ ಮದ್ಯಕ್ಕೆ ಹೆಸರಾಗಿದ್ದ, ಮಾದಕ ವ್ಯಸನಕ್ಕೆ ಕುಖ್ಯಾತಿಯಾಗಿದ್ದ ಈ ಬುಡಕಟ್ಟು ಗ್ರಾಮ ಇಂದು ಫುಟ್‌ಬಾಲ್ ಕ್ರೀಡೆಯ ತಾಣವಾಗಿದೆ. ಮನಸಿದ್ದಲ್ಲಿ ಮಾರ್ಗ ಇದೆ ಎಂದು ಇದಕ್ಕೆ ಹೇಳುವುದು’ ಎಂದರು.

ಐಐಟಿ ಕ್ಯಾಂಟೀನ್ ಗೋಡೆ ಮೇಲೆ ‘ಸಸ್ಯಾಹಾರಿ ಮಾತ್ರ’

ಮುಂಬೈ (ಪಿಟಿಐ): ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ- ಬಾಂಬೆ (ಐಐಟಿ-ಬಿ) ಹಾಸ್ಟೆಲ್‌ನ ಕ್ಯಾಂಟೀನ್ ಗೋಡೆಗಳ ಮೇಲೆ ‘ಸಸ್ಯಾಹಾರಿಗಳು ಮಾತ್ರ’ ಎಂಬ ಪೋಸ್ಟರ್‌ಗಳನ್ನು ಅಂಟಿಸಿರುವುದರಿಂದ ವಿದ್ಯಾರ್ಥಿಗಳು ಆಹಾರ ತಾರತಮ್ಯದ ಬಗ್ಗೆ ದೂರು ನೀಡಿದ್ದಾರೆ ಎಂದು ವಿದ್ಯಾರ್ಥಿ ಪ್ರತಿನಿಧಿ ತಿಳಿಸಿದ್ದಾರೆ.

ಸಂಸ್ಥೆಯ ಹಾಸ್ಟೆಲ್ 12 ರ ಕ್ಯಾಂಟೀನ್ ಗೋಡೆಗಳ ಮೇಲೆ ‘ಸಸ್ಯಾಹಾರಿಗಳಿಗೆ ಮಾತ್ರ ಇಲ್ಲಿ ಕುಳಿತುಕೊಳ್ಳಲು ಅವಕಾಶವಿದೆ’ ಎಂಬ ಪೋಸ್ಟರ್‌ಗಳನ್ನು ಕಳೆದ ವಾರ ಹಾಕಲಾಗಿತ್ತು. ಆ ಫೋಟೋ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿತ್ತು. ವಿದ್ಯಾರ್ಥಿ ಸಂಘಟನೆ ಅಂಬೇಡ್ಕರ್ ಪೆರಿಯಾರ್ ಫುಲೆ ಸ್ಟಡಿ ಸರ್ಕಲ್ (ಎಪಿಪಿಎಸ್‌ಸಿ) ಪ್ರತಿನಿಧಿಗಳು ಘಟನೆ ಖಂಡಿಸಿದ್ದಾರೆ. ಘಟನೆ ಬಳಿಕ ಹಾಸ್ಟೆಲ್ ಪ್ರಧಾನ ಕಾರ್ಯದರ್ಶಿ, ‘ಇಂತಹ ನಡವಳಿಕೆ ಸ್ವೀಕಾರಾರ್ಹವಲ್ಲ. ಘಟನೆ ಮರುಕಳಿಸಿದರೆ ಕ್ರಮ ಕೈಗೊಳ್ಳಲು ಒತ್ತಾಯಿಸಲಾಗುವುದು’ ಎಂದಿದ್ದಾರೆ.

ಕಳ್ಳಸಾಗಣೆ: 3 ರಾಜ್ಯ ಮುಂಚೂಣಿ

ಉತ್ತರಪ್ರದೇಶ, ಬಿಹಾರ, ಆಂಧ್ರದಲ್ಲಿ ಹೆಚ್ಚು: ಎನ್‌ಜಿಒ ವರದಿ

ನವದೆಹಲಿ (ಪಿಟಿಐ): ದೇಶದಲ್ಲಿ 2016ರಿಂದ 2022ರವರೆಗೆ ನಡೆದ ಮಕ್ಕಳ ಕಳ್ಳ ಸಾಗಾಣಿಕೆ ಪ್ರಕರಣಗಳು ವರದಿಯಾದ ರಾಜ್ಯಗಳಲ್ಲಿ ಉತ್ತರ ಪ್ರದೇಶದ, ಬಿಹಾರ, ಆಂಧ್ರಪ್ರದೇಶ ಮುಂಚೂಣಿಯಲ್ಲಿದ್ದು, ರಾಜಧಾನಿ ದೆಹಲಿಯಲ್ಲಿ ಕೋವಿಡ್ ನಂತರ ಮಕ್ಕಳ ಕಳ್ಳಸಾಗಾಣಿಕೆ ಪ್ರಕರಣಗಳು ಶೇ 68ರಷ್ಟು ಏರಿಕೆ ಕಂಡಿವೆ ಎಂದು ಸರ್ಕಾರೇತರ ಸ್ವಯಂಸೇವಾ ಸಂಸ್ಥೆಯೊಂದರ (ಎನ್‌ಜಿಒ) ಹೊಸ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಗೇಮ್ಸ್ 24x7 ಮತ್ತು ಕೈಲಾಶ್ ಸತ್ಯಾರ್ಥಿ ಚಿಲ್ಡ್ರನ್ಸ್ ಫೌಂಡೇಷನ್ (ಕೆಎಸ್‌ಸಿಎಫ್) ಜಂಟಿಯಾಗಿ ‘ಭಾರತದಲ್ಲಿ ಮಕ್ಕಳ ಕಳ್ಳಸಾಗಣೆ: ಸಾಂದರ್ಭಿಕ ಡೇಟಾ ವಿಶ್ಲೇಷಣೆಯ ಒಳನೋಟಗಳು ಮತ್ತು ತಂತ್ರಜ್ಞಾನ ಚಾಲಿತ ಮಧ್ಯಸ್ಥಿಕೆ ತಂತ್ರಗಳ ಅಗತ್ಯತೆ’ ಎಂಬ ಶೀರ್ಷಿಕೆ ಅಡಿ ನಡೆಸಿದ ಅಧ್ಯಯನದ ವರದಿಯು ಈ ಅಂಶಗಳನ್ನು ಬಹಿರಂಗಪಡಿಸಿದೆ.

ಈ ಅಧ್ಯಯನದ ವರದಿಯನ್ನು ಭಾನುವಾರ ‘ವ್ಯಕ್ತಿಗಳ ಕಳ್ಳಸಾಗಣೆ ವಿರುದ್ಧದ ವಿಶ್ವ ದಿನ’ದ ಅಂಗವಾಗಿ ಬಿಡುಗಡೆ ಮಾಡಲಾಗಿದೆ. ಈ ವರದಿಯು ದೇಶದಲ್ಲಿ ಮಕ್ಕಳ ಕಳ್ಳಸಾಗಣೆ ಬಿಕ್ಕಟ್ಟಿನ ಆತಂಕಕಾರಿ ಅಂಶಗಳ ಚಿತ್ರಣವನ್ನು ನೀಡಿದೆ.

ಮಕ್ಕಳ ಕಳ್ಳಸಾಗಣೆಯಲ್ಲಿ ಮುಂಚೂಣಿ ಜಿಲ್ಲೆಗಳಲ್ಲಿ ರಾಜಸ್ಥಾನದ ಜೈಪುರ ನಗರವು ಅಗ್ರಸ್ಥಾನದಲ್ಲಿದೆ. ಉಳಿದ ಸ್ಥಾನ ದೆಹಲಿಯದ್ದಾಗಿದೆ.

ಗೇಮ್ಸ್ 24x7ನ ಡೇಟಾ ವಿಜ್ಞಾನ ತಂಡ ಹಾಗೂ ಕೆಎಸ್‌ಸಿಎಫ್ ಜಂಟಿಯಾಗಿ 21 ರಾಜ್ಯಗಳ 262 ಜಿಲ್ಲೆಗಳಲ್ಲಿನ ಮಕ್ಕಳ ಕಳ್ಳ ಸಾಗಣೆ ಕುರಿತು ಸಮಗ್ರ ಮಾಹಿತಿಯಯನ್ನು ಕಲೆಹಾಕಿವೆ.

ಈ ಅವಧಿಯಲ್ಲಿ 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ 13,549 ಮಕ್ಕಳನ್ನು ರಕ್ಷಿಸಲಾಗಿದೆ. ಈ ರೀತಿ ರಕ್ಷಣೆ ಮಾಡಲಾದ ಮಕ್ಕಳಲ್ಲಿ ಶೇ 80ರಷ್ಟು ಮಕ್ಕಳು 13ರಿಂದ 18 ವರ್ಷ ವಯಸ್ಸಿನೊಳಗಿನವರು. ಶೇ 13ರಷ್ಟು ಮಕ್ಕಳು 9ರಿಂದ 12 ವರ್ಷ ವಯಸ್ಸಿನವರು. ಶೇ 2ರಷ್ಟು ಮಕ್ಕಳು 9 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವರು ಎಂದೂ ಅಧ್ಯಯನವು ಹೇಳಿದೆ.

ಹೋಟೆಲ್, ಡಾಬಾಗಳಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ಬಾಲಕಾರ್ಮಿಕರು ಅಂದರೆ ಶೇ 15.6,ಸಾರಿಗೆ ಕ್ಷೇತ್ರದಲ್ಲಿ ಶೇ 13ರಷ್ಟು ಹಾಗೂ ಗಾರ್ಮೆಂಟ್ಸ್‌ಗಳಲ್ಲಿ ಶೇ 11.18ರಷ್ಟು ಪ್ರಮಾಣದಲ್ಲಿ ಮಕ್ಕಳು ಕಾರ್ಮಿಕರಾಗಿದ್ದಾರೆ. ಅಷ್ಟೇ ಅಲ್ಲ, 5ರಿಂದ 8 ವರ್ಷ ವಯಸ್ಸಿನ ಮಕ್ಕಳನ್ನು ಕಾಸ್ಮೆಟಿಕ್ ಉದ್ಯಮದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ ಎನ್ನುವ ಆತಂಕಕಾರಿ ಅಂಶವು ಅಧ್ಯಯನದ ವರದಿಯಲ್ಲಿದೆ.

ಕೋವಿಡ್‌ಪೂರ್ವ ಹಂತದಲ್ಲಿ (2016-2019) ವರದಿಯಾದ ಘಟನೆಗಳ ಸಂಖ್ಯೆ 267 ಆಗಿತ್ತು. ಆದರೆ ಕೋವಿಡ್ ನಂತರದ ಹಂತದಲ್ಲಿ (2021-2022) ಈ ಸಂಖ್ಯೆಯಲ್ಲಿ ತೀವ್ರ ಏರಿಕೆಯಾಗಿದ್ದು 1,214 ತಲುಪಿದೆ. ಕರ್ನಾಟಕದಲ್ಲಿ ಕೋವಿಡ್‌ಗೂ ಮುನ್ನ 6 ಪ್ರಕರಣಗಳು ವರದಿಯಾಗುತ್ತಿದ್ದರೆ, ಕೋವಿಡ್ ಬಳಿಕ ಈ ಪ್ರಕರಣಗಳ ಸಂಖ್ಯೆ 110ಕ್ಕೆ ಏರಿದೆ ಎಂದೂ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಸಂಸತ್ತಿಗೆ 2019ರಿಂದ 2021ರವರೆಗಿನ ಮಾಹಿತಿ ನೀಡಿದ ಕೇಂದ್ರ ಸರ್ಕಾರ

13.13 ಲಕ್ಷ ಬಾಲಕಿಯರು, ಮಹಿಳೆಯರು ನಾಪತ್ತೆ

ನವದೆಹಲಿ (ಪಿಟಿಐ): 2019ರಿಂದ 2021ರವರೆಗಿನ ಮೂರು ವರ್ಷಗಳ ಅವಧಿಯಲ್ಲಿ ದೇಶದಲ್ಲಿ 13.13ಲಕ್ಷಕ್ಕೂ ಹೆಚ್ಚು ಬಾಲಕಿಯರು ಮತ್ತು ಮಹಿಳೆಯರು ನಾಪತ್ತೆಯಾಗಿದ್ದಾರೆ. ನಾಪತ್ತೆಯಾಗಿರುವವರಲ್ಲಿ ಬಹುತೇಕರು ಮಧ್ಯಪ್ರದೇಶ ಮತ್ತು ಪಶ್ಚಿಮ ಬಂಗಾಳದವರು.

ಕೇಂದ್ರ ಗೃಹ ಸಚಿವಾಲಯವು ಕಳೆದ ವಾರ ಸಂಸತ್ತಿಗೆ ಒದಗಿಸಿದ ಅಂಕಿ–ಅಂಶಗಳ ಪ್ರಕಾರ, ದೇಶದಲ್ಲಿ 18 ವರ್ಷಕ್ಕೂ ಮೇಲ್ಪಟ್ಟ 10,61,648 ಮಹಿಳೆಯರು ಹಾಗೂ 2,51,430 ಅಪ್ರಾಪ್ತ ವಯಸ್ಸಿನ ಬಾಲಕಿಯರು ನಾಪತ್ತೆಯಾಗಿದ್ದಾರೆ. ಈ ಅಂಕಿ ಅಂಶಗಳನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಒದಗಿಸಿದೆ.

ಮಹಿಳೆಯರ ಸುರಕ್ಷತೆಗಾಗಿ ಲೈಂಗಿಕ ಅಪರಾಧಗಳ ಪರಿಣಾಮಕಾರಿ ತಡೆಗಟ್ಟುವಿಕೆಗಾಗಿ ಅಪರಾಧ (ಕ್ರಿಮಿನಲ್) ಕಾನೂನು (ತಿದ್ದುಪಡಿ) ಕಾಯ್ದೆ 2013 ಸೇರಿದಂತೆ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸರ್ಕಾರವು ಸಂಸತ್ತಿಗೆ ಮಾಹಿತಿ ನೀಡಿದೆ.

2019ರಿಂದ 2021ರವರೆಗೆ ನಾಪತ್ತೆಯಾದವರ ವಿವರ (ರಾಜ್ಯವಾರು)

ರಾಜ್ಯ	ಮಹಿಳೆಯರು	ಬಾಲಕಿಯರು
ಮಧ್ಯಪ್ರದೇಶ	1,60,180	38,234
ಪ. ಬಂಗಾಳ	1,56,905	36,606
ಮಹಾರಾಷ್ಟ್ರ	1,78,400	13,033
ಒಡಿಶಾ	70,222	16,649
ಛತ್ತೀಸಗಢ	49,116	10,817



* ಅತಿಹೆಚ್ಚು ನಾಪತ್ತೆ ಪ್ರಕರಣಗಳು ವರದಿಯಾದ ರಾಜ್ಯಗಳ ಅಂಕಿ–ಅಂಶ

ಕೇಂದ್ರಾಡಳಿತ ಪ್ರದೇಶಗಳಲ್ಲಿ ನಾಪತ್ತೆಯಾದವರು

ಕೇಂದ್ರಾಡಳಿತ ಪ್ರದೇಶ	ಮಹಿಳೆಯರು	ಬಾಲಕಿಯರು
ದೆಹಲಿ	61,054	22,919
ಜಮ್ಮು–ಕಾಶ್ಮೀರ	8,617	1,148

ಅಪರಾಧ ಕಾನೂನು (ತಿದ್ದುಪಡಿ) 2018 ಕಾಯ್ದೆಯು 12 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರಕ್ಕೆ ಮರಣದಂಡನೆಯನ್ನು ಒಳಗೊಂಡಂತೆ ಇತರ ಕಠಿಣ ದಂಡನೆಗಳ ನಿಬಂಧನೆಗಳನ್ನೂ ಒಳಗೊಂಡಿದೆ. ಅಷ್ಟೇ ಅಲ್ಲ, ಅತ್ಯಾಚಾರ ಪ್ರಕರಣಗಳ ತನಿಖೆ ಹಾಗೂ ಚಾರ್ಜ್ ಶೀಟ್ ಅನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಬೇಕು ಹಾಗೂ ವಿಚಾರಣೆಯನ್ನು ಮುಂದಿನ ಎರಡು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂಬುದನ್ನೂ ಈ ಕಾಯ್ದೆಯು ಕಡ್ಡಾಯಗೊಳಿಸಿದೆ.

ಸಂಕಷ್ಟದಲ್ಲಿರುವ ಹೆಣ್ಣುಮಕ್ಕಳಿಗೆ ತುರ್ತು ಪ್ರತಿಕ್ರಿಯೆಯಾಗಿ ಬೆಂಬಲಿಸುವ ವ್ಯವಸ್ಥೆಯನ್ನು ದೇಶದಾದ್ಯಂತ ಸರ್ಕಾರವು ಪ್ರಾರಂಭಿಸಿದೆ. ಎಲ್ಲಾ ತುರ್ತು ಪರಿಸ್ಥಿತಿಗಳಿಗೆ ಅಂತರರಾಷ್ಟ್ರೀಯವಾಗಿ ಗುರುತಾಗಿರುವ ಸಂಖ್ಯೆ 112 ಕರೆಯನ್ನು ರೂಪಿಸಿದ್ದು, ಈ ಸಂಖ್ಯೆಗೆ ಕರೆ ಮಾಡಿದಾಕ್ಷಣ ಕಂಪ್ಯೂಟರ್ ನೆರವಿನ ಮೂಲಕ ಕರೆ ಬಂದ ಸ್ಥಳವನ್ನು ಗುರುತಿಸಿ, ತಕ್ಷಣವೇ ಮಹಿಳೆಗೆ ನೆರವು ಒದಗಿಸಲಾಗುವುದು.

‘ಸೇಫ್ ಸಿಟಿ’ ಯೋಜನೆಯನ್ನು ಅಹಮದಾಬಾದ್, ಬೆಂಗಳೂರು, ಚೆನ್ನೈ, ದೆಹಲಿ, ಹೈದರಾಬಾದ್, ಕೋಲ್ಕತ್ತ, ಲಖನೌ ಮತ್ತು ಮುಂಬೈ ಎಂಟು ನಗರಗಳಲ್ಲಿ ಮೊದಲ ಹಂತದಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ಲೀಲ ಸಂದೇಶ, ವಿಡಿಯೊ ರವಾನಿಸುವವರನ್ನು ಶಿಕ್ಷಿಸುವ ಸಲುವಾಗಿ 2018ರ ಸೆ. 20ರಂದು ಗೃಹ ಸಚಿವಾಲಯವು ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್ ಅನ್ನೂ ರೂಪಿಸಿದೆ.

ದೇವಧರ್ ಟ್ರೋಫಿ: ಮಯಂಕ್ ಬಳಗಕ್ಕೆ ನಾಲ್ಕನೇ ಗೆಲುವು; ಫೈನಲ್ ಸನಿಹ

ದಕ್ಷಿಣ ವಲಯ ಜಯದ ಓಟ

ಪುದುಚೇರಿ (ಪಿಟಿಐ): ನಾಯಕ ಮಯಂಕ್ ಅಗರವಾಲ್ ಮತ್ತು ಸಾಯಿ ಸುದರ್ಶನ್ ಅವರ ಅರ್ಧಶತಕಗಳ ಬಲದಿಂದ ದಕ್ಷಿಣ ವಲಯ ತಂಡವು ಭಾನುವಾರ ದೇವಧರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸತತ ನಾಲ್ಕನೇ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಪೂರ್ವ ವಲಯ ತಂಡವನ್ನು 229 ರನ್‌ಗಳಿಗೆ ಕಟ್ಟಿಹಾಕುವಲ್ಲಿ ದಕ್ಷಿಣ ವಲಯ ಯಶಸ್ವಿಯಾಯಿತು. ತಂಡದಲ್ಲಿರುವ ಕರ್ನಾಟಕದ ಮಧ್ಯಮವೇಗಿಗಳಾದ ವಿ. ಕೌಶಿಕ್ (37ಕ್ಕೆ3) ಮತ್ತು ವಿದ್ವತ್ ಕಾವೇರಪ್ಪ (40ಕ್ಕೆ2) ಪೂರ್ವ ವಲಯಕ್ಕೆ ಹೊಡೆತ ನೀಡಿದರು. ಸಾಯಿ ಕಿಶೋರ್ ಕೂಡ ಮೂರು ವಿಕೆಟ್ ಉರುಳಿಸಿದರು.

ದಕ್ಷಿಣ ತಂಡವು ಮಯಂಕ್ (84; 88ಎ, 4X6, 6X1) ಮತ್ತು ಸಾಯಿ ಸುದರ್ಶನ್ (53; 67ಎ, 4X4, 6X1) ಅವರ ಅಮೋಘ ಅರ್ಧಶತಕಗಳ ಬಲದಿಂದ 44.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 230 ರನ್ ಗಳಿಸಿತು. ಇದರೊಂದಿಗೆ ಪ್ರಶಸ್ತಿ ಸುತ್ತಿನತ್ತ ದಾಪುಗಾಲಿಟ್ಟಿತು. ರೌಂಡ್ ರಾಬಿನ್ ಲೀಗ್ ಸುತ್ತಿನಲ್ಲಿ ಇನ್ನೊಂದು ಪಂದ್ಯ ಬಾಕಿ ಇದೆ.

ತಂಡವು ಒಟ್ಟು 16 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಪೂರ್ವ ತಂಡವು 12 ಅಂಕ ಗಳಿಸಿ ಎರಡನೇ ಸ್ಥಾನದಲ್ಲಿದೆ. ಪಶ್ಚಿಮ ತಂಡವು ಮೂರು ಪಂದ್ಯಗಳಿಂದ ಎಂಟು ಅಂಕ ಗಳಿಸಿ ಮೂರನೇ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರು: ಪೂರ್ವ ವಲಯ: 45 ಓವರ್‌ಗಳಲ್ಲಿ 229 (ವಿರಾಟ್ ಸಿಂಗ್ 49, ಶುಭ್ರಾಂಶು ಸೇನಾಪತಿ 44, ಆಕಾಶ್ ದೀಪ್ 44, ಮುಕ್ತಾರ್ ಹುಸೇನ್ 33, ವಿದ್ವತ್ ಕಾವೇರಪ್ಪ 40ಕ್ಕೆ2, ವಿ. ಕೌಶಿಕ್ 37ಕ್ಕೆ3, ಸಾಯಿಕಿಶೋರ್ 45ಕ್ಕೆ3, ವೈಶಾಖ ವಿಜಯಕುಮಾರ್ 62ಕ್ಕೆ1, ವಾಷಿಂಗ್ಟನ್ ಸುಂದರ್ 41ಕ್ಕೆ1) ದಕ್ಷಿಣ ವಲಯ:44.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 230 (ಮಯಂಕ್ ಅಗರವಾಲ್ 84, ಸಾಯಿ ಸುದರ್ಶನ್ 53, ಎನ್. ಜಗದೀಶನ್ 32, ರೋಹಿತ್ ರಾಯುಡು ಔಟಾಗದೆ 24, ಅವಿನೊವ್ ಚೌಧರಿ 58ಕ್ಕೆ2) **ಫಲಿತಾಂಶ:** ದಕ್ಷಿಣ ವಲಯಕ್ಕೆ 5 ವಿಕೆಟ್‌ಗಳ ಜಯ.

ಈಶಾನ್ಯ ವಲಯ: 49 ಓವರ್‌ಗಳಲ್ಲಿ 164 (ಆಶಿಶ್ ಥಾಪಾ 31, ಎಲ್. ಕಿಶಾಂಗ್‌ಬಮ್ 24, ಕಂಶ್ ಯಾಂಗ್‌ಫೋ 35, ರೆಕ್ಸ್ ಸಿಂಗ್ 27, ಸಾರಾಂಶ್ ಜೈನ್ 39ಕ್ಕೆ2, ಸರವಟೆ 19ಕ್ಕೆ3, ಯಶ್ ಕೊಠಾರಿ 4ಕ್ಕೆ2). ಕೇಂದ್ರ ವಲಯ: 33 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 165 (ಶಿವಂ ಚೌಧರಿ ಔಟಾಗದೆ 85, ಯಶ್ ದುಬೆ 72) **ಫಲಿತಾಂಶ:** ಕೇಂದ್ರ ವಲಯಕ್ಕೆ 8 ವಿಕೆಟ್‌ಗಳ ಜಯ.

ಕರ್ನಾಟಕದ ಮಯಂಕ್ ಅಗರವಾಲ್

ಮುಖ್ಯಾಂಶಗಳು

- ಮಯಂಕ್ ಅಗರವಾಲ್, ಸಾಯಿ ಸುದರ್ಶನ್ ಅರ್ಧಶತಕ
- ಕರ್ನಾಟಕದ ಮಧ್ಯಮವೇಗಿಗಳಾದ ವಿ. ಕೌಶಿಕ್, ವಿದ್ವತ್ ಕಾವೇರಪ್ಪ ಮಿಂಚು
- ಈಶಾನ್ಯ ವಲಯದ ವಿರುದ್ಧ ಕೇಂದ್ರ ವಲಯಕ್ಕೆ 8 ವಿಕೆಟ್‌ಗಳ ಜಯ

ಯೂನಿವರ್ಸಿಟಿ ಗೇಮ್ಸ್: ಭಾರತಕ್ಕೆ ಮತ್ತೊಂದು ಚಿನ್ನ

ನವದೆಹಲಿ (ಪಿಟಿಐ): ಚೀನಾದ ಚೆಂಗ್ಡುವಿನಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನ ಆರ್ಚರಿಯಲ್ಲಿ ಮಿಕ್ಸಡ್ ತಂಡ ವಿಭಾಗದಲ್ಲಿ ಭಾರತ ಚಿನ್ನ ಗೆದ್ದುಕೊಂಡಿತು.

ಅಮನ್ ಸೈನಿ ಮತ್ತು ಪ್ರಗತಿ ಅವರನ್ನೊಳಗೊಂಡ ಭಾರತ ತಂಡ ಭಾನುವಾರ ನಡೆದ ಫೈನಲ್‌ನಲ್ಲಿ 157–156 ರಿಂದ ಕೊರಿಯಾದ ಸುವಾ ಚೊ ಮತ್ತು ಸೆಂಗ್‌ಹುವಾ ಪಾರ್ಕ್ ಅವರನ್ನು ಮಣಿಸಿತು. ಈ ಕೂಟದಲ್ಲಿ ಇದುವರೆಗೆ ನಾಲ್ಕು ಚಿನ್ನ, ಎರಡು ಬೆಳ್ಳಿ ಮತ್ತು ನಾಲ್ಕು ಕಂಚು ಸೇರಿದಂತೆ 10 ಪದಕಗಳನ್ನು ಗೆದ್ದಿರುವ ಭಾರತ ತಂಡ, ನಾಲ್ಕನೇ ಸ್ಥಾನದಲ್ಲಿದೆ.

ಆರ್ಚರಿಯಲ್ಲಿ ಭಾರತಕ್ಕೆ ಇನ್ನೆರಡು ಪದಕಗಳು ಬಂದವು. ಸಂಗಮ್‌ಪ್ರೀತ್ ಬಿಸ್ಲಾ, ಅಮನ್ ಸೈನಿ ಮತ್ತು ರಿಷಭ್ ಯಾದವ್ ಅವರನ್ನೊಳಗೊಂಡ ಪುರುಷರ ಕಾಂಪೌಂಡ್ ತಂಡ ಕಂಚು ಗೆದ್ದರೆ, ಪೂರ್ವಶಾ, ಪ್ರಗತಿ ಮತ್ತು ಅವನೀತ್ ಅವರನ್ನೊಳಗೊಂಡ ಮಹಿಳಾ ತಂಡ ಬೆಳ್ಳಿ ಗೆದ್ದುಕೊಂಡಿತು.

ಭಾರತದ ಶೂಟರ್‌ಗಳು ತಲಾ ಒಂದು ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡರು.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ ವೇಗಿ

ಬ್ರಾಡ್: ಇಂಗ್ಲೆಂಡ್‌ನ ‘ಮ್ಯಾಚ್ ವಿನ್ನರ್’

ಲಂಡನ್ (ಎಎಫ್‌ಪಿ): ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಪ್ರಕಟಿಸಿರುವ ವೇಗದ ಬೌಲರ್ ಸ್ಟುವರ್ಟ್ ಬ್ರಾಡ್ ಅವರು, ಇಂಗ್ಲೆಂಡ್ ತಂಡದಲ್ಲಿ ‘ಮ್ಯಾಚ್ ವಿನ್ನರ್’ ಆಗಿ ಗುರುತಿಸಿಕೊಂಡವರು.

ಆ್ಯಷಸ್ ಟೆಸ್ಟ್ ಸರಣಿಯ ಬಳಿಕ ನಿವೃತ್ತಿಯಾಗುವುದಾಗಿ ಬ್ರಾಡ್, ಶನಿವಾರ ಪ್ರಕಟಿಸಿದ್ದರು. ಆಸ್ಟ್ರೇಲಿಯಾ ವಿರುದ್ಧದ ಅಂತಿಮ ಟೆಸ್ಟ್ ಪಂದ್ಯದ ಮೂರನೇ ದಿನದಾಟದ ಬಳಿಕ ತಮ್ಮ ನಿರ್ಧಾರ ತಿಳಿಸಿದ್ದರು.

37 ವರ್ಷದ ಬ್ರಾಡ್, ಆ್ಯಷಸ್‌ನ ಅಂತಿಮ ಪಂದ್ಯ ಸೇರಿದಂತೆ ಒಟ್ಟು 167 ಟೆಸ್ಟ್‌ಗಳಿಂದ 602 ವಿಕೆಟ್‌ಗಳನ್ನು ಪಡೆದಿದ್ದಾರೆ. ಟೆಸ್ಟ್‌ನಲ್ಲಿ ಅತ್ಯಧಿಕ ವಿಕೆಟ್ ಪಡೆದ ಐದನೇ ಬೌಲರ್ ಅವರಾಗಿದ್ದಾರೆ. ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ (800), ಆಸ್ಟ್ರೇಲಿಯಾದ ಶೇನ್ ವಾರ್ನ್ (708), ಇಂಗ್ಲೆಂಡ್‌ನ ಜೇಮ್ಸ್ ಆ್ಯಂಡರ್ಸನ್ (690) ಮತ್ತು ಭಾರತದ ಅನಿಲ್ ಕುಂಬ್ಳೆ (619) ಕ್ರಮವಾಗಿ ಮೊದಲ ನಾಲ್ಕು ಸ್ಥಾನಗಳಲ್ಲಿದ್ದಾರೆ.

ಟೆಸ್ಟ್‌ನಲ್ಲಿ ಹೆಚ್ಚು ವಿಕೆಟ್ ಗಳಿಸಿದ ವೇಗಿಗಳಲ್ಲಿ ಅವರು, ಆ್ಯಂಡರ್ಸನ್ ಬಳಿಕ ಎರಡನೇ ಸ್ಥಾನದಲ್ಲಿದ್ದಾರೆ. ಆರಡಿ ಐದಿಂಚು ಎತ್ತರದ ಬ್ರಾಡ್, ತಮ್ಮ ವೃತ್ತಿಜೀವನದಲ್ಲಿ ಟೆಸ್ಟ್‌ನತ್ತ ಹೆಚ್ಚು ಗಮನಹರಿಸಿದ್ದರು. ‘ನಾನು ಟೆಸ್ಟ್ ಪಂದ್ಯದ ಚಟಕ್ಕೆ ಬಿದ್ದಿದ್ದೇನೆ’ ಎಂದು ಅವರು ಹಿಂದೊಮ್ಮೆ ಹೇಳಿದ್ದರು.

2006 ರಲ್ಲಿ ಟಿ20 ಮತ್ತು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅವರು, 2007 ರಲ್ಲಿ ಕೊಲಂಬೊದಲ್ಲಿ ಶ್ರೀಲಂಕಾ ವಿರುದ್ಧದ ಪಂದ್ಯದೊಂದಿಗೆ ಟೆಸ್ಟ್ ಕ್ರಿಕೆಟ್‌ಗೆ ಕಾಲಿಟ್ಟಿದ್ದರು. ವೃತ್ತಿಜೀವನದ ಆರಂಭದಲ್ಲೇ ಅವರಿಗೆ ಹಿನ್ನಡೆ ಎದುರಾಗಿತ್ತು. 2007 ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಟಿ20 ವಿಶ್ವಕಪ್‌ನಲ್ಲಿ ಭಾರತದ ಯುವರಾಜ್ ಸಿಂಗ್, ಬ್ರಾಡ್ ಅವರ ಒಂದು ಓವರ್‌ನಲ್ಲಿ ಆರು ಸಿಕ್ಸರ್‌ಗಳನ್ನು ಹೊಡೆದಿದ್ದರು. ಆದರೆ ಆ ‘ಕಹಿ’ಯನ್ನು ಮರೆತು ಅನುಭವ ಗಳಿಸಿದಂತೆ ಅವರು ತಂಡದ ಪ್ರಮುಖ ಬೌಲರ್ ಆಗಿ ಬೆಳೆದು ನಿಂತರು.

2014ರಲ್ಲೇ ಟಿ20 ಪಂದ್ಯಗಳಿಂದ ದೂರವಾಗಿದ್ದ ಅವರು, 2016 ರಲ್ಲಿ ಏಕದಿನ ಕ್ರಿಕೆಟ್‌ಗೂ ಗುಡ್‌ಬೈ ಹೇಳಿದ್ದರು. ಇದರಿಂದ ಟೆಸ್ಟ್‌ನಲ್ಲಿ ಹೆಚ್ಚು ಕಾಲ ಆಡಲು ಸಾಧ್ಯವಾಗಿದೆ.

ಚೆಂಡು ಪುಟಿದೇಳುವಂತೆ ಮಾಡುವ ಸಾಮರ್ಥ್ಯದ ಜತೆಯಲ್ಲೇ ಇನ್‌ಸ್ವಿಂಗ್ ಮತ್ತು ಔಟ್‌ಸ್ವಿಂಗ್ ಎಸೆತಗಳ ಮೂಲಕ ಅವರು ಬ್ಯಾಟರ್‌ಗಳನ್ನು ಕಾಡಿದ್ದಾರೆ. ಟೆಸ್ಟ್‌ನ ಇನಿಂಗ್ಸ್‌ನಲ್ಲಿ ಐದು ಅಥವಾ ಅದಕ್ಕಿಂತ ಹೆಚ್ಚು ವಿಕೆಟ್ ಪಡೆದ ಸಾಧನೆಯನ್ನು 20 ಸಲ ಮಾಡಿದ್ದಾರೆ. 2015 ರಲ್ಲಿ ಟ್ರೆಂಟ್‌ಬ್ರಿಜ್‌ನಲ್ಲಿ ನಡೆದಿದ್ದ ಆ್ಯಷಸ್ ಟೆಸ್ಟ್‌ನ ಒಂದು ಇನಿಂಗ್ಸ್‌ನಲ್ಲಿ 15 ರನ್‌ಗಳಿಗೆ 8 ವಿಕೆಟ್ ಪಡೆದಿದ್ದರು. ಆಸ್ಟ್ರೇಲಿಯಾ ತಂಡ 60 ರನ್‌ಗಳಿಗೆ ಆಲೌಟಾಗಿತ್ತು.

ಕೆಳಗಿನ ಕ್ರಮಾಂಕದಲ್ಲಿ ಬ್ಯಾಟರ್ ಆಗಿಯೂ ಅವರು ತಂಡಕ್ಕೆ ಉಪಯುಕ್ತ ಕೊಡುಗೆ ನೀಡಿದ್ದಾರೆ. 2010ರಲ್ಲಿ ಲಾರ್ಡ್ಸ್‌ನಲ್ಲಿ ನಡೆದಿದ್ದ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ 169 ರನ್ ಗಳಿಸಿದ್ದು ಅವರ ಗರಿಷ್ಠ ಸ್ಕೋರ್ ಆಗಿದೆ.

ಆ್ಯಷಸ್ ಪಂದ್ಯದ ನಾಲ್ಕನೇ ದಿನದಾಟದ ವೇಳೆ ಅಭಿಮಾನಿಗಳತ್ತ ಕೈಬೀಸಿದ ಸ್ಟುವರ್ಟ್ ಬ್ರಾಡ್ –ಎಪಿ ಚಿತ್ರ

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಾಧನೆ

ಮಾದರಿ	ಪಂದ್ಯ	ಗಳಿಸಿದ ರನ್	ವಿಕೆಟ್	ಶ್ರೇಷ್ಠ ಬೌಲಿಂಗ್
ಟೆಸ್ಟ್	167	3655	602	121ಕ್ಕೆ11
ಏಕದಿನ	121	529	178	23ಕ್ಕೆ5
ಟಿ20	56	118	65	24ಕ್ಕೆ4

* ಆ್ಯಷಸ್ ಸರಣಿಯ ಅಂತಿಮ ಟೆಸ್ಟ್ ಒಳಗೊಂಡಂತೆ

ಕೆಎಸ್‌ಎಫ್‌ಎ: ಹ್ಯಾರಿಸ್ ಪುನರಾಯ್ಕೆ

ಎನ್‌.ಎ. ಹ್ಯಾರಿಸ್

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಅಧ್ಯಕ್ಷರಾಗಿ ಶಾಂತಿನಗರ ಶಾಸಕ ಎನ್‌.ಎ. ಹ್ಯಾರಿಸ್ ಪುನರಾಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಎಂ. ಕುಮಾರ್ ಆಯ್ಕೆಯಾಗಿದ್ದಾರೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರಾಜ್ಯ ಫುಟ್‌ಬಾಲ್ ಸಂಸ್ಥೆಯ 54ನೇ ಮಹಾಸಭೆಯಲ್ಲಿ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು.

ಉಪಾಧ್ಯಕ್ಷರಾಗಿ ಪಿ.ಎಂ. ಶಕೀಲ್ ಅಬ್ದುಲ್ ರಹಿಮಾನ್, ಬಿ. ಕಮಲ್, ಜಿ.ಆರ್. ಸಂಜಯ್ (ಮೈಸೂರು), ಅಮಿತ್ ಪಾಟೀಲ್ (ಬೆಳಗಾವಿ) ಮತ್ತು ಇಸ್ಮಾಯಿಲ್ ಮುಸ್ಬಾ (ಉತ್ತರ ಕನ್ನಡ), ಉಪ ಪ್ರಧಾನ ಕಾರ್ಯದರ್ಶಿಗಳಾಗಿ ಹನೀಫ್ ಮಹಮ್ಮದ್, ಅಸ್ಲಂ ಅಹಮದ್ ಖಾನ್ ಮತ್ತು ಸರವಣನ್ ಧರ್ಮನ್, ಖಜಾಂಚಿಯಾಗಿ ಬಿ.ಕೆ. ಮುನಿರಾಜ್ ಆಯ್ಕೆಯಾದರು.

ನಿರ್ಗಮಿತ ಪ್ರಧಾನ ಕಾರ್ಯದರ್ಶಿ ಎಂ. ಸತ್ಯನಾರಾಯಣ್ ಅವರು ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್‌ನ ಉಪ ಪ್ರಧಾನ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುವರು.

ಹೋಪ್ ಆಟಕ್ಕೆ ಒಲಿದ ಜಯ

ಭಾರತದ ಎದುರು ದೀರ್ಘಕಾಲದ ನಂತರ ಗೆದ್ದ ವಿಂಡೀಸ್

ಬ್ರಿಜ್‌ಟೌನ್ (ಪಿಟಿಐ): ನಾಯಕನಿಗೆ ತಕ್ಕ ಆಟವಾಡಿದ ಶಾಯ್ ಹೋಪ್, ವೆಸ್ಟ್ ಇಂಡೀಸ್ ತಂಡವು ಭಾರತದ ಎದುರಿನ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಜಯಗಳಿಸಲು ಕಾರಣರಾದರು.

ವಿಂಡೀಸ್ ತಂಡವು ಭಾರತದ ಎದುರು ಆಡಿದ್ದ ಕಳೆದ ಹತ್ತು ಪಂದ್ಯಗಳಲ್ಲಿ ಸೋತಿತ್ತು. ಈ ಜಯದೊಂದಿಗೆ ಸೋಲಿನ ಸರಪಳಿ ತುಂಡರಿಸಿತು.

ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ವಿಶ್ರಾಂತಿ ಪಡೆದಿದ್ದ ಈ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ನಾಯಕತ್ವದ ತಂಡವು ಬ್ಯಾಟಿಂಗ್ ವೈಫಲ್ಯ ಅನುಭವಿಸಿತ್ತು. ಅದರಿಂದಾಗಿ ಭಾರತ ತಂಡವು ನೀಡಿದ್ದ 182 ರನ್‌ಗಳ ಗುರಿಯನ್ನು ಆತಿಥೇಯ ಬಳಗವು 36.4 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಮುಟ್ಟಿತು. ಹೋಪ್ (ಔಟಾಗದೆ 63; 80ಎ, 4X2, 6X2) ಅಜೇಯ ಅರ್ಧಶತಕ ಗೆಲುವಿಗೆ ನೆರವಾಯಿತು. ಯುವ ಬ್ಯಾಟರ್ ಕೀಸಿ ಕಾರ್ಟಿ (ಅಜೇಯ 48; 65ಎ, 4X4) ತಮ್ಮ ನಾಯಕನಿಗೆ ಉತ್ತಮ ಜೊತೆ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಬ್ರೆಂಡನ್ ಕಿಂಗ್ (15; 23ಎ, 4X3) ಮತ್ತು ಕೈಲ್ ಮೇಯರ್ಸ್ (36; 28ಎ, 4X4, 6X2) ಅವರು 53 ರನ್ ಸೇರಿಸಿದರು.

ಮಧ್ಯಮವೇಗಿ ಶಾರ್ದೂಲ್ ಠಾಕೂರ್ (42ಕ್ಕೆ3) ಒಂಬತ್ತನೇ ಓವರ್‌ನಲ್ಲಿ ಇಬ್ಬರೂ ಆರಂಭಿಕ ಬ್ಯಾಟರ್‌ಗಳ ವಿಕೆಟ್ ಗಳಿಸಿದರು. ನಾಲ್ಕು ಓವರ್‌ಗಳ ನಂತರ ಅಲಿಕ್ ಅಥನೇಜ್ ವಿಕೆಟ್ ಕೂಡ ಅವರ ಬುಟ್ಟಿಗೆ ಬಿತ್ತು. ಆದರೆ ಈ ಹಂತದಲ್ಲಿ ಹಿನ್ನಡೆಯ ಆತಂಕ ಎದುರಿಸಿದ್ದ ಆತಿಥೇಯ ಬಳಗಕ್ಕೆ ನಾಯಕ ಹೋಪ್ ಆಸರೆ ನೀಡಿದರು. ಶಿಮ್ರಾನ್ ಹೆಟ್ಮೆಯರ್ ವಿಕೆಟ್ ಗಳಿಸಿದ ಕುಲದೀಪ್ ಯಾದವ್ ಭರವಸೆ ಮೂಡಿಸಿದ್ದರು. ಆದರೆ, ಹೋಪ್ ಜೊತೆಗೂಡಿದ ಕಾರ್ಟಿ, ವಿಂಡೀಸ್‌ನ ಜಯದ ಹಾದಿ ಸುಲಭಗೊಳಿಸಿದರು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದ ವಿಂಡೀಸ್ ಪಂದ್ಯವನ್ನೂ ಗೆದ್ದಿತು. ಇಶಾನ್ ಕಿಶನ್ (55; 55ಎ, 4X6, 6X1) ಮತ್ತು ಶುಭಮನ್ ಗಿಲ್ (34; 49ಎ, 4X5) ಮೊಲ ವಿಕೆಟ್ ಜೊತೆಯಾಟದಲ್ಲಿ 90 ರನ್ ಗಳಿಸಿದರು. ಆದರೂ ಈ ಉತ್ತಮ ಅಡಿಪಾಯದ ಮೇಲೆ ದೊಡ್ಡ ಮೊತ್ತ ಗಳಿಸುವಲ್ಲಿ ಪ್ರವಾಸಿ ತಂಡವು ಯಶಸ್ವಿಯಾಗಲಿಲ್ಲ.

ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ ಆತಿಥೇಯ ಬಳಗವು 1–1ರ ಸಮಬಲ ಸಾಧಿಸಿದೆ. ಉಳಿದಿರುವ ಇನ್ನೊಂದು ಪಂದ್ಯದಲ್ಲಿ ಗೆದ್ದವರಿಗೆ ಸರಣಿ ಕಿರೀಟ ಒಲಿಯಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 40.5 ಓವರ್‌ಗಳಲ್ಲಿ 181. ವೆಸ್ಟ್ ಇಂಡೀಸ್: 36.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 182 (ಕೈಲ್ ಮೇಯರ್ಸ್ 36, ಶಾಯ್ ಹೋಪ್ 63, ಕೀಸಿ ಕಾರ್ಟಿ ಔಟಾಗದೆ 48, ಶಾರ್ದೂಲ್ ಠಾಕೂರ್ 42ಕ್ಕೆ3) **ಫಲಿತಾಂಶ:** ವೆಸ್ಟ್ ಇಂಡೀಸ್ ತಂಡಕ್ಕೆ 6 ವಿಕೆಟ್‌ಗಳ ಜಯ. **ಪಂದ್ಯಶ್ರೇಷ್ಠ:** ಶಾಯ್ ಹೋಪ್.

ವೆಸ್ಟ್ ಇಂಡೀಸ್ ತಂಡದ ಶಾಯ್ ಹೋಪ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ವೇಟ್‌ಲಿಫ್ಟಿಂಗ್: ಭಾರತಕ್ಕೆ 2 ಬೆಳ್ಳಿ

ಗ್ರೇಟರ್ ನೊಯ್ಡಾ (ಪಿಟಿಐ): ಭಾರತದ ಜ್ಞಾನೇಶ್ವರಿ ಯಾದವ್ ಮತ್ತು ಕೊಯೆಲ್ ಬಾರ್ ಅವರು ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಜೂನಿಯರ್ ಮತ್ತು ಯೂತ್ ವಿಭಾಗದ 49 ಕೆ.ಜಿ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು.

ಗೌತಮ ಬುದ್ಧ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಭಾನುವಾರ ಜ್ಞಾನೇಶ್ವರಿ ಅವರು 175 ಕೆ.ಜಿ (78 + 97ಕೆ.ಜಿ) ಭಾರ ಎತ್ತಿದರು. ಈ ತಿಂಗಳ ಆರಂಭದಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಇಲ್ಲಿ ಚಿನ್ನ ಗೆದ್ದಿದ್ದರು. ಒಲಿಂಪಿಕ್ಸ್ ಬೆಳ್ಳಿಪದಕ ವಿಜೇತೆ ಮೀರಾಬಾಯಿ ಚಾನು ಅನುಪಸ್ಥಿತಿಯಲ್ಲಿ ಭಾರತದ ಅಭಿಯಾನವನ್ನು ಅವರು ಮುನ್ನಡೆಸಿದರು.

ಈ ಸ್ಪರ್ಧೆಯಲ್ಲಿ ಫಿಲಿಪ್ಪೀನ್ಸ್‌ನ ರೋಸೆಗಿ ರಾಮೋಸ್ (182 ಕೆ.ಜಿ) ಚಿನ್ನ, ವಿಯೆಟ್ನಾಂನ ಬರ್ಚ್ ಟ್ರಾಮ್ ನಗ್ಯುನ್ (169 ಕೆ.ಜಿ) ಕಂಚು ಗೆದ್ದರು.

ಕೊಯೆಲ್ 155 ಕೆ.ಜಿ (69 + 86 ಕೆ.ಜಿ) ಭಾರ ಎತ್ತಿದರು. ಈ ಸ್ಪರ್ಧೆಯಲ್ಲಿ ಫಿಲಿಪ್ಪೀನ್ಸ್‌ನ ಜೊಡಿ ಪೆರಾಲ್ಟಾ (160 ಕೆ.ಜಿ) ಮತ್ತು ಥಾಯ್ಲೆಂಡ್‌ನ ಫನಿಡಾ ಡೆಂಡುವಾಂಗ್ (151 ಕೆ.ಜಿ) ಕ್ರಮವಾಗಿ ಚಿನ್ನ ಮತ್ತು ಕಂಚು ಗೆದ್ದರು.

ಪ್ರಶಸ್ತಿ ಗೆದ್ದ ಸಂಭ್ರಮದಲ್ಲಿ ಗೋವಾ ಚಾಲೆಂಜರ್ಸ್ ತಂಡದ ಸದಸ್ಯರು

ಗೋವಾ ಚಾಲೆಂಜರ್ಸ್‌ಗೆ ಯುಟಿಟಿ ಕಿರೀಟ

ಪುಣೆ (ಪಿಟಿಐ): ಗೋವಾ ಚಾಲೆಂಜರ್ಸ್ ತಂಡವು ಹಾಲಿ ಚಾಂಪಿಯನ್ ಚೆನ್ನೈ ಲಯನ್ಸ್ ತಂಡವನ್ನು 8-7ರಿಂದ ಮಣಿಸಿ ಅಲ್ಟಿಮೇಟ್ ಟೇಬಲ್ ಟೆನಿಸ್ 4ನೇ ಆವೃತ್ತಿಯ ಕಿರೀಟ ಮುಡಿಗೇರಿಸಿಕೊಂಡಿತು.

ಶಿವ ಛತ್ರಪತಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತ ಅಲ್ವಾರೊ ರಾಬ್ಲೆಸ್, ಭಾರತದ ಅಗ್ರ ಕ್ರಮಾಂಕದ ಪೆಡ್ಲರ್ ಹರ್ಮೀತ್ ದೇಸಾಯಿ ಮತ್ತು ರೀತ್ ಟೆನಿಸನ್ ಅವರು ಪಾರಮ್ಯ ಮೆರೆದು ಗೋವಾ ತಂಡಕ್ಕೆ ಚೊಚ್ಚಲ ಪ್ರಶಸ್ತಿ ಗೆದ್ದುಕೊಟ್ಟರು.

ಚಾಂಪಿಯನ್ ತಂಡ ₹75 ಲಕ್ಷ, ರನ್ನರ್ ಅಪ್ ತಂಡ ₹50 ಲಕ್ಷ ಬಹುಮಾನ ತನ್ನದಾಗಿಸಿಕೊಂಡಿತು.

ಆ್ಯಷಸ್: ಆಸ್ಟ್ರೇಲಿಯಾ ಉತ್ತಮ ಆರಂಭ


ಉಸ್ಮಾನ್ ಖ್ವಾಜಾ

ಲಂಡನ್ (ಎಎಫ್‌ಪಿ): ಅಜೇಯ ಅರ್ಧಶತಕ ಗಳಿಸಿದ ಡೇವಿಡ್ ವಾರ್ನರ್ ಮತ್ತು ಉಸ್ಮಾನ್ ಖ್ವಾಜಾ ಅವರು ಆ್ಯಷಸ್ ಟೆಸ್ಟ್ ಸರಣಿಯ ಅಂತಿಮ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ಗೆಲುವಿನ ಕನಸಿಗೆ ಬಲ ತುಂಬಿದ್ದಾರೆ.

ದಿ ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಗೆಲುವಿಗೆ 384 ರನ್‌ಗಳ ಗುರಿ ಬೆನ್ನಟ್ಟಿರುವ ಆಸ್ಟ್ರೇಲಿಯಾ, ನಾಲ್ಕನೇ ದಿನವಾದ ಭಾನುವಾರದ ಆಟ ಮಳೆಯಿಂದಾಗಿ ಬೇಗನೇ ಕೊನೆಗೊಂಡಾಗ ವಿಕೆಟ್ ನಷ್ಟವಿಲ್ಲದೆ 135 ರನ್ ಗಳಿಸಿತ್ತು.

ಇದೀಗ ಅಂತಿಮ ದಿನವಾದ ಸೋಮವಾರ 249 ರನ್ ಗಳಿಸುವ ಸವಾಲು ಪ್ಯಾಟ್ ಕಮಿನ್ಸ್ ಬಳಗದ ಮುಂದಿದೆ. ಮಳೆ ಬಿಟ್ಟು ನಿಂತರೆ, ಪಂದ್ಯ ರೋಚಕ ಅಂತ್ಯ ಕಾಣುವ ಸಾಧ್ಯತೆಯಿದೆ. ವಾರ್ನರ್ (ಬ್ಯಾಟಿಂಗ್ 58 ರನ್, 99 ಎ.) ಮತ್ತು ಖ್ವಾಜಾ (ಬ್ಯಾಟಿಂಗ್ 69, 130 ಎ.) ಅವರು ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಇಂಗ್ಲೆಂಡ್ 283. ಆಸ್ಟ್ರೇಲಿಯಾ 295. ಎರಡನೇ ಇನಿಂಗ್ಸ್: ಇಂಗ್ಲೆಂಡ್ 395. ಆಸ್ಟ್ರೇಲಿಯಾ 38 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 135 (ವಾರ್ನರ್ ಬ್ಯಾಟಿಂಗ್ 58, ಉಸ್ಮಾನ್ ಖ್ವಾಜಾ ಬ್ಯಾಟಿಂಗ್ 69)

ರಾಷ್ಟ್ರೀಯ ಜೂನಿಯರ್ ಥ್ರೋಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡ ಕರ್ನಾಟಕ ತಂಡಗಳು

ಥ್ರೋಬಾಲ್ ಚಾಂಪಿಯನ್‌ಷಿಪ್: ಕರ್ನಾಟಕದ ತಂಡಗಳಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡದವರು ತಮಿಳುನಾಡಿನ ತಿರುಪುರ್‌ನಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ಥ್ರೋಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಭಾನುವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಕರ್ನಾಟಕ 25–23, 25–20 ರಿಂದ ಆತಿಥೇಯ ತಮಿಳುನಾಡು ತಂಡವನ್ನು ಮಣಿಸಿತು.

ಸೆಮಿಫೈನಲ್‌ನಲ್ಲಿ ರಾಜ್ಯದ ತಂಡವು ಮಹಾರಾಷ್ಟ್ರ ತಂಡದ ವಿರುದ್ಧವೂ, ತಮಿಳುನಾಡು ತಂಡವು ತೆಲಂಗಾಣ ತಂಡದ ಎದುರೂ ಗೆಲುವು ಸಾಧಿಸಿದ್ದವು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಕರ್ನಾಟಕ 25–20, 25–18 ರಿಂದ ಆಂಧ್ರಪ್ರದೇಶ ತಂಡವನ್ನು ಸೋಲಿಸಿತು. ಸೆಮಿಫೈನಲ್‌ನಲ್ಲಿ ಇವೆರಡು ತಂಡಗಳು ಕ್ರಮವಾಗಿ ತಮಿಳುನಾಡು ಹಾಗೂ ತೆಲಂಗಾಣ ವಿರುದ್ಧ ಗೆದ್ದಿದ್ದವು.

ಹಾಕಿ: ಭಾರತ ಮಹಿಳೆಯರಿಗೆ ಪ್ರಶಸ್ತಿ

ಬಾರ್ಸಿಲೋನಾ (ಪಿಟಿಐ): ಶಿಸ್ತಿನ ಆಟವಾಡಿದ ಭಾರತ ಮಹಿಳಾ ತಂಡದವರು, ಸ್ಪ್ಯಾನಿಷ್ ಹಾಕಿ ಫೆಡರೇಷನ್‌ನ 100ನೇ ವರ್ಷದ ಅಂಗವಾಗಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಹಾಕಿ ಟೂರ್ನಿಯನ್ನು ಗೆದ್ದುಕೊಂಡರು.

ಭಾನುವಾರ ನಡೆದ ಪಂದ್ಯದಲ್ಲಿ ಭಾರತ ತಂಡ 3–0 ಗೋಲುಗಳಿಂದ ಆತಿಥೇಯ ಸ್ಪೇನ್ ತಂಡವನ್ನು ಮಣಿಸಿತು.

ಈ ಮೂಲಕ ಅಜೇಯ ಸಾಧನೆಯೊಂದಿಗೆ ಚಾಂಪಿಯನ್ ಆಯಿತು. ವಂದನಾ ಕಟಾರಿಯಾ (22ನೇ ನಿ.), ಮೋನಿಕಾ (48) ಮತ್ತು ಉದಿತಾ (58) ಅವರು ಭಾರತ ತಂಡಕ್ಕೆ ಗೋಲು ತಂದಿತ್ತರು.

ಪುರುಷರಿಗೆ ಮೂರನೇ ಸ್ಥಾನ: ಮೂರು ಮತ್ತು ನಾಲ್ಕನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಭಾರತದ ಪುರುಷರ ತಂಡ 2–1 ಗೋಲುಗಳಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿತು.

ಟಿಟಿ: ತೇಶುಭ್, ಕೈರಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೇಶುಭ್ ದಿನೇಶ್ ಮತ್ತು ಕೈರಾ ಬಾಳಿಗಾ ಅವರು ಭಾನುವಾರ ಮಲ್ಲೇಶ್ವರದ ಕೆನರಾ ಯೂನಿಯನ್ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 15 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಬಾಲಕರ ಫೈನಲ್ ಪಂದ್ಯದಲ್ಲಿ ತೇಶುಭ್ ಅವರು ಗೌರವ್ ಗೌಡ ಅವರನ್ನು 11–9, 11–8, 11–5ರಿಂದ ಮಣಿಸಿದರು. ಸೆಮಿಫೈನಲ್‌ನಲ್ಲಿ ತೇಶುಭ್ ಅವರು ಎನ್. ಅರ್ಣವ್ ಅವರನ್ನು ಮತ್ತು ಗೌರವ್ ಅವರು ಆರ್ಯ ಎ. ಜೈನ್ ಅವರನ್ನು ಪರಾಭವಗೊಳಿಸಿದ್ದರು.

ಬಾಲಕಿಯರ ಫೈನಲ್ ಪಂದ್ಯದಲ್ಲಿ ಕೈರಾ ಅವರು ಹಿಮಾಂಶಿ ಚೌಧರಿ ಅವರನ್ನು 11–12, 8–11, 12–10, 11–8, 11–9ರಿಂದ ಮಣಿಸಿದರು. ಹಿಮಾಂಶಿ ಮೊದಲ ಎರಡು ಗೇಮ್ ಗೆದ್ದರೂ ನಂತರದ ಮೂರು ಗೇಮ್‌ಗಳಲ್ಲಿ ಕೈರಾ ಮೇಲುಗೈ ಸಾಧಿಸಿದರು.

ಸೆಮಿಫೈನಲ್‌ನಲ್ಲಿ ಹಿಮಾಂಶಿ ಅವರು ಆಯುಷಿ ಬಿ.ಗೋಡ್ಸೆ ಅವರನ್ನು ಮತ್ತು ಕೈರಾ ಅವರು ಶಿವಾನಿ ಮಹೇಂದ್ರನ್ ಅವರನ್ನು ಸೋಲಿಸಿದ್ದರು.

ಪ್ರಶಸ್ತಿಯೊಂದಿಗೆ ಕೈರಾ ಬಾಳಿಗ ಮತ್ತು ತೇಶುಭ್ ದಿನೇಶ್

16ರ ಘಟ್ಟಕ್ಕೆ ನಾರ್ವೆ, ಸ್ವಿಟ್ಜರ್ಲೆಂಡ್

ಆಕ್ಲೆಂಡ್ (ಎಎಫ್‌ಪಿ): ನಾರ್ವೆ ಮತ್ತು ಸ್ವಿಟ್ಜರ್ಲೆಂಡ್ ತಂಡಗಳು ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ 16ರ ಘಟ್ಟ ಪ್ರವೇಶಿಸಿದರೆ, ಆತಿಥೇಯ ನ್ಯೂಜಿಲೆಂಡ್ ಲೀಗ್ ಹಂತದಲ್ಲೇ ಹೊರಬಿತ್ತು.

ಭಾನುವಾರ ನಡೆದ ‘ಎ’ ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ನಾರ್ವೆ 6–0 ಗೋಲುಗಳಿಂದ ಫಿಲಿಪ್ಪೀನ್ಸ್ ತಂಡವನ್ನು ಮಣಿಸಿತು. ಸ್ವಿಟ್ಜರ್ಲೆಂಡ್ ತಂಡ ನ್ಯೂಜಿಲೆಂಡ್ ಜತೆ ಗೋಲು ರಹಿತ ಡ್ರಾ ಸಾಧಿಸಿತು.

ಮೂರು ಪಂದ್ಯಗಳಿಂದ ಐದು ಪಾಯಿಂಟ್ಸ್ ಗಳಿಸಿದ ಸ್ವಿಟ್ಜರ್ಲೆಂಡ್, ‘ಎ’ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ನಾಕೌಟ್ ಹಂತ ಪ್ರವೇಶಿಸಿತು. ನಾರ್ವೆ ಮತ್ತು ನ್ಯೂಜಿಲೆಂಡ್ ತಂಡಗಳು ತಲಾ ನಾಲ್ಕು ಪಾಯಿಂಟ್ಸ್ ಗಳಿಸಿದವು. ಉತ್ತಮ ಗೋಲು ವ್ಯತ್ಯಾಸದಲ್ಲಿ ನಾರ್ವೆ ಮುಂದಿನ ಹಂತ ಪ್ರವೇಶಿಸಿದರೆ, ಆತಿಥೇಯರ ಹೋರಾಟಕ್ಕೆ ತೆರೆಬಿತ್ತು.

ಜರ್ಮನಿಗೆ ಆಘಾತ: ಭಾನುವಾರ ನಡೆದ ‘ಎಚ್’ ಗುಂಪಿನ ಪಂದ್ಯದಲ್ಲಿ ಕೊಲಂಬಿಯಾ 2–1 ಗೋಲುಗಳಿಂದ ಜರ್ಮನಿಗೆ ಆಘಾತ ನೀಡಿತು.

ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಮೊರೊಕ್ಕೊ 1–0 ಯಿಂದ ದಕ್ಷಿಣ ಕೊರಿಯಾ ವಿರುದ್ಧ ಗೆದ್ದಿತು.

ಹಿಜಾಬ್ ಧರಿಸಿ ಆಡಿದ ಬೆನ್‌ಝಿನಾ: ಮೊರೊಕ್ಕೊ ತಂಡದ ಡಿಫೆಂಡರ್ ನೌಹಾಲಿಯಾ ಬೆನ್‌ಝಿನಾ ಅವರು ಹಿಜಾಬ್ ಧರಿಸಿ ಆಡಿದರು. ಜಾಗತಿಕ ಮಟ್ಟದಲ್ಲಿ ಸೀನಿಯರ್ ವಿಭಾಗದ ಫುಟ್‌ಬಾಲ್ ಟೂರ್ನಿಯಲ್ಲಿ ಹಿಜಾಬ್ ಧರಿಸಿ ಆಡಿದ ಮೊದಲ ಆಟಗಾರ್ತಿ ಎನಿಸಿಕೊಂಡರು.

22 ಕುಸ್ತಿ ಸಂಸ್ಥೆಗಳು ಸಭೆಯಲ್ಲಿ ಭಾಗಿ: ಬ್ರಿಜ್‌ಭೂಷಣ್

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಚುನಾವಣೆಗೆ ಸ್ಪರ್ಧಿಸಲಿರುವ ತಮ್ಮ ನಿಷ್ಠ ಗುಂಪಿನ ಅಭ್ಯರ್ಥಿಗಳ ಹೆಸರುಗಳನ್ನು ಸೋಮವಾರ ಪ್ರಕಟಿಸಲಾಗುವುದು ಎಂದು ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ಹೇಳಿದರು.

ಡಬ್ಲ್ಯುಎಫ್‌ಐಗೆ ಆಗಸ್ಟ್ 12ರಂದು ಚುನಾವಣೆ ನಿಗದಿ ಆಗಿದ್ದು, ನಾಮಪತ್ರ ಸಲ್ಲಿಕೆಗೆ ಜುಲೈ 31 ಕೊನೆಯ ದಿನ. ಅಂದೇ ಅಭ್ಯರ್ಥಿಗಳ ಹೆಸರನ್ನು ಅವರು ಪ್ರಕಟಿಸಲಿದ್ದಾರೆ. ಬ್ರಿಜ್‌ಭೂಷಣ್, ತಮ್ಮ ಪರವಾಗಿರುವ ರಾಜ್ಯ ಕುಸ್ತಿ ಸಂಸ್ಥೆಗಳ ಪ್ರತಿನಿಧಿಗಳ ಜತೆ ಭಾನುವಾರ ಸಭೆ ನಡೆಸಿದರು.

‘ಡಬ್ಲ್ಯುಎಫ್‌ಐ ಮಾನ್ಯತೆ ಹೊಂದಿರುವ 25 ರಾಜ್ಯ ಕುಸ್ತಿ ಸಂಸ್ಥೆಗಳಲ್ಲಿ 22 ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು’ ಎಂದು ಅವರು ಹೇಳಿದರು.

ಬ್ರಿಜ್ ಭೂಷಣ್ ಮತ್ತು ಅವರ ಪುತ್ರ ಕರಣ್ ಈ ಬಾರಿ ಕಣದಲ್ಲಿರುವುದಿಲ್ಲ. ಬ್ರಿಜ್‌ಭೂಷಣ್ ಈಗಾಗಲೇ 12 ವರ್ಷ ಅಧಿಕಾರ ಪೂರೈಸಿರುವ ಕಾರಣ ಸ್ಪರ್ಧಿಸುವಂತಿಲ್ಲ. ಅವರ ಅಳಿಯ ವಿಶಾಲ್ ಸಿಂಗ್ ಕೂಡಾ ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಡಿವೈಇಎಸ್‌ಗೆ ಜಯ

ಬೆಂಗಳೂರು: ಬೆಂಗಳೂರಿನ ಡಿವೈಇಎಸ್ ತಂಡವು ಇಲ್ಲಿಯ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪ್ರೊ.ಎನ್.ಸಿ. ಪರಪ್ಪ ಸ್ಮಾರಕ ಎವರ್ ರೋಲಿಂಗ್ ಟ್ರೋಫಿಯ ರಾಜ್ಯ ‘ಎ’ ಡಿವಿಷನ್‌ನ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಜಿಎಸ್‌ಟಿ ಅಂಡ್ ಕಸ್ಟಮ್ಸ್ ತಂಡವನ್ನು 77–76 ರಿಂದ ಮಣಿಸಿತು.

ಇತರ ಪಂದ್ಯಗಳಲ್ಲಿ ಬ್ಯಾಂಕ್ ಆಫ್ ಬರೋಡಾ ತಂಡವು ಎಸ್. ಬ್ಲೂಸ್ ತಂಡವನ್ನು 70–53 ರಿಂದ, ಯಂಗ್ ಓರಿಯನ್ಸ್ ಎಸ್.ಸಿ ತಂಡವು ಐಬಿಬಿಸಿ ತಂಡವನ್ನು 90–46ರಿಂದ, ಮಂಗಳೂರು ಬಿ.ಸಿ ತಂಡವು ಬೀಗಲ್ಸ್ ಬಿ.ಸಿ ತಂಡವನ್ನು 78– 42 ರಿಂದ ಮತ್ತು ಭಾರತ್ ಎಸ್.ಯು ತಂಡವು ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವನ್ನು 79–73 ರಿಂದ ಮಣಿಸಿತು.

ಮಣಿಪುರದ ಫುಟ್‌ಬಾಲ್ ಆಟಗಾರ ಚಿಂಗ್ಲೆನ್ಸನಾ ಅಳಲು

‘ಗಲಭೆಯ ಬೆಂಕಿಗೆ ನನ್ನ ಕನಸು ಭಸ್ಮ’

ನವದೆಹಲಿ (ಪಿಟಿಐ): ಕೋಯಿಕ್ಕೋಡ್‌ನಲ್ಲಿ ಆ ಸಂಜೆ ಯಥಾಪ್ರಕಾರ ಚಿಂಗ್ಲೆನ್ಸನಾ ಸಿಂಗ್ ಮೈದಾನದಲ್ಲಿ ಆಟ ಮುಗಿಸಿ ತಮ್ಮ ಡ್ರೆಸ್ಸಿಂಗ್ ಕೋಣೆಗೆ ಬಂದರು. ಬ್ಯಾಗ್‌ನಲ್ಲಿದ್ದ ಫೋನ್ ಕೈಗೆತ್ತಿಕೊಂಡವರಿಗೆ ಆಘಾತ.

ತಮ್ಮ ತವರು ರಾಜ್ಯ ಮಣಿಪುರದಲ್ಲಿದ್ದ ಸಂಬಂಧಿಕರು, ಆಪ್ತರು ಕಳಿಸಿದ್ದ ಸಂದೇಶಗಳು ಅವರ ಮನಸ್ಸನ್ನು ಘಾಸಿಗೊಳಿಸಿದ್ದವು.

‘ನಮ್ಮಿಂದ ಎಲ್ಲವನ್ನೂ ಈ ಗಲಭೆಯು ಕಸಿದುಕೊಂಡಿದೆ. ಜೀವನದಲ್ಲಿ ಗಳಿಸಿದ್ದೆಲ್ಲವೂ ನಾಶವಾಗಿದೆ. ಮಣಿಪುರದ ಚುರಚಂದಾಪುರದಲ್ಲಿ ನಾನು ಕಟ್ಟಿಸಿದ್ದ ಮನೆಗೆ ಬೆಂಕಿ ಇಡಲಾಗಿದೆ. ನಾನೇ ನಿರ್ಮಿಸಿಕೊಟ್ಟಿದ್ದ ಫುಟ್‌ಬಾಲ್ ಹುಲ್ಲಿನಂಕಣವನ್ನೂ ಸುಟ್ಟುಹಾಕಲಾಗಿದೆ ಎಂಬ ಸುದ್ದಿಗಳು ಬಂದಿವೆ. ಇದರಿಂದಾಗಿ ನನಗೆ ಅಪಾರ ನೋವಾಗಿದೆ. ನನ್ನೂರಿನ ಮತ್ತು ಸುತ್ತಮುತ್ತಲಿನ ಯುವ ಪ್ರತಿಭೆಗಳಿಗೆ ಆಡಲು ಸೌಲಭ್ಯ ರೂಪಿಸುವ ಕನಸಾಗಿತ್ತು ಅದು. ಆದರೆ ಈಗ ಕನಸು ನುಚ್ಚುನೂರಾಗಿದೆ. ಅದೃಷ್ಟವಶಾತ್ ನನ್ನ ಕುಟುಂಬವು ಅಪಾಯದಿಂದ ಪಾರಾಗಿದೆ. ಅವರೆಲ್ಲರನ್ನೂ ನಿರಾಶ್ರಿತರ ಕೇಂದ್ರಕ್ಕೆ ಸೇರಿಸಲಾಗಿದೆ’ ಎಂದು ಭಾರತ ಫುಟ್‌ಬಾಲ್ ತಂಡದ ಪ್ರಮುಖ ಆಟಗಾರರಾಗಿರುವ ಸಿಂಗ್ ಹೇಳಿದರು.

‘ಫುಟ್‌ಬಾಲ್ ಅಕಾಡೆಮಿಗಳಿಗೆ ಸೇರಿ ಕಲಿಯಲಾಗದ ಬಡಕುಟುಂಬಗಳ ಮಕ್ಕಳಿಗೆ ಉಚಿತ ಸೌಲಭ್ಯ ಒದಗಿಸುವುದು ನನ್ನ ಬಹುಕಾಲದ ಕನಸು. ಅವರೆಲ್ಲರೂ ರಾಷ್ಟ್ರ ತಂಡಕ್ಕೆ ಆಡುವಂತಾಗಬೇಕು ಎಂಬುದು ನನ್ನ ಗುರಿಯಾಗಿತ್ತು. ಇದೀಗ ಎಲ್ಲವೂ ಕಮರಿ ಹೋಗಿದೆ’ ಎಂದು ಸಿಂಗ್ ಕಣ್ಣೀರಿಟ್ಟರು.

ಹತ್ತಾರು ಪ್ರಯತ್ನಗಳ ನಂತರ ಅವರು ತಮ್ಮ ತಾಯಿಯೊಂದಿಗೆ ದೂರವಾಣಿಯಲ್ಲಿ ಸಂಪರ್ಕಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಿಂಗ್ ಮೂಲತಃ ಮಣಿಪುರದ ಚುರಚಂದಾಪುರ ಜಿಲ್ಲೆಯ ಕುಮುಜಾಮಾ ಲೀಕೈ ಗ್ರಾಮದವರು.

ಮೇ 3ರಂದು ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ಆರಂಭವಾಗಿತ್ತು. ಅದೇ ದಿನ ಅವರು ಕೋಯಿಕ್ಕೋಡ್‌ನಲ್ಲಿ ನಡೆದ ಎಐಎಫ್‌ಪಿಸಿ ಕಪ್ ಪ್ಲೇಆಫ್ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ತಂಡವನ್ನು ಪ್ರತಿನಿಧಿಸಿದ್ದರು. ಮೋಹನ್ ಬಾಗನ್ ವಿರುದ್ಧ ಆಡಿದ್ದರು.

ಚಿಂಗ್ಲೆನ್ಸನಾ ಸಿಂಗ್